ಕರ್ನಾಟಕ ಸರ್ಕಾರ

## ಅರೆಬಾಸೆ ತ್ರೈಮಾಸಿಕ ಪತ್ರಿಕೆ


ಬ್ಯಾಸಿಗೆ ತಿಂಗ, ಕಾರ್ತ್ತಿಂಗ, ಆಟಿತಿಂಗ, ಸೋಣ್ತಿಂಗ

ಸಂಪುಟ 1 (ಮೇ 29ರ್ಂದ ಆಗಸ್ಟ್ 31, 2012ರ ತನಕ) ಸಂಚಿಕೆ 1


# ಸುರಗಿ



ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮುಖ್ಯ ಕಚೇರಿ : ಮಡಿಕೇರಿ, ಕೊಡಗು ಜಿಲ್ಲೆ.

## ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾ

ಕಾಫಿ ಕೃಪಾ : ಒಂದನೆ ಮಹಡಿ, ರಾಜಾಸೀಟ್ ರಸ್ತೆ
ಮಡಿಕೇರಿ – 571201, ಕೊಡಗು ಜಿಲ್ಲೆ
ದೂರವಾಣಿ : 08272 – 223055
ಇಮೇಲ್ : arebaseacademy@gmail.com



**ಸುರಗಿ**


ಅರೆಬಾಸೆ ತ್ರೈಮಾಸಿಕ ಪತ್ರಿಕೆ
ಸಂಪುಟ 1, ಸಂಚಿಕೆ 1

ಪುಟ 56+4

ಬಿಡಿ ಪತ್ರಿಕೆ ಒಟ್ಟು ರೂ. 15.00
ವಾರ್ಷಿಕ ಚಂದಾ ರೂ. 50.00
ಆಜೀವ ಚಂದಾ ರೂ.. 500.00

| | |
|---|---|
| ಸುರಗಿ | : ಅರೆಬಾಸೆ ತ್ರೈಮಾಸಿಕ ಪತ್ರಿಕೆ |
| ಪ್ರಧಾನ ಸಂಪಾದಕರು | : ಶ್ರೀ ಎನ್.ಎಸ್. ದೇವಿಪ್ರಸಾದ್ |
| ಸಂಪಾದಕರು | : ಶ್ರೀ ಪಟ್ಟಡ ಯಂ. ಪ್ರಭಾಕರ |
| ಸಹಾಯಕ ಸಂಪಾದಕರು | : ಶ್ರೀ ಕುಡೆಕಲ್ ಸಂತೋಷ್<br>ಶ್ರೀ ಕೋರನ ಸುನೀಲ್ |
| ಪ್ರಕಾಶಕರು | : ಶ್ರೀಮತಿ ಶಾಂತಮ್ಮ<br>ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ<br>ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ |

ಅಕ್ಷರ ವಿನ್ಯಾಸ ಮತ್ತು ಮುದ್ರಣ :
ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ, ಮಡಿಕೇರಿ
ದೂರವಾಣಿ :
(08272) – 228829, 228382



**ಕೆ.ಜಿ. ಬೋಪಯ್ಯ**
ಸಭಾಧ್ಯಕ್ಷರು
ಕರ್ನಾಟಕ ವಿಧಾನಸಭೆ


ದೂರವಾಣಿ : 080-22258171
ಫ್ಯಾಕ್ಸ್ : 080 - 22251009
ವಿಧಾನ ಸೌಧ, ಬೆಂಗಳೂರು - 560 233


ಕ್ರ.ಸಂ.:ವಿಸ:ಕಸ: 2012-13

ದಿನಾಂಕ : 28.12.2012


# ಸಂದೇಶ

ಗೌಡ ಜನಾಂಗದ ಬಹುದಿನಗಳ ಬೇಡಿಕೆಯಾಗಿದ್ದ ಅರೆಭಾಷೆ ಸಂಸ್ಕೃತಿ ಸಾಹಿತ್ಯ ಪದ್ಧತಿಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಗತ್ಯವಿದ್ದ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ರಚನೆಯಾಗಿರುವುದು ಸಂತೋಷದ ವಿಷಯ. ಘನವೆತ್ತ ಕರ್ನಾಟಕ ಸರ್ಕಾರ ನೂತನ ಅಕಾಡೆಮಿ ರಚನೆಯೊಂದಿಗೆ ಅರೆಭಾಷೆ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಅಕಾಡೆಮಿ ವತಿಯಿಂದ ಅರೆಭಾಷೆ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರಧಾರೆಗಳನ್ನು ಜನತೆಗೆ ತಲುಪಿಸುವ ನಿಟ್ಟಿನಲ್ಲಿ ಪ್ರಕಟಗೊಳ್ಳುತ್ತಿರುವ "ಸುರಗಿ" ತ್ರೈಮಾಸಿಕ ಸಂಚಿಕೆ ಉತ್ತಮವಾಗಿ ಮೂಡಿಬರಲಿ. ಆಚಾರ-ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತಾ ಜನಾಂಗ ಬಾಂಧವರಿಗೆ ಉಪಯುಕ್ತವಾಗಲಿ.

(ಕೆ.ಜಿ. ಬೋಪಯ್ಯ)

ವಿಧಾನ ಸೌಧ
ಬೆಂಗಳೂರು - 560 001



**ಡಿ.ವಿ. ಸದಾನಂದಗೌಡ**
ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು

# ಸಂದೇಶ

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗೌಡ ಜನಾಂಗ ಬಾಂಧವರ ಕನಸು ಇದೀಗ ನನಸಾಗಿದೆ. ಅರೆಭಾಷೆ ಸಂಸ್ಕೃತಿ, ಸಾಹಿತ್ಯವನ್ನು ಉಳಿಸಿ ಬೆಳೆಸುವ ಸಲುವಾಗಿ ಕರ್ನಾಟಕ ಸರಕಾರ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ರಚನೆ ಮಾಡಿದೆ. ಅಕಾಡೆಮಿ ಉತ್ತಮ ಕೆಲಸ - ಕಾರ್ಯಗಳನ್ನು ಹಮ್ಮಿಕೊಳ್ಳುತ್ತ ಅರೆಭಾಷೆ ಸಂಸ್ಕೃತಿ, ಸಾಹಿತ್ಯಕ್ಕೆ ಕೊಡುಗೆ ನೀಡಲಿ. ಈ ಸಂಬಂಧ ಅಕಾಡೆಮಿ ವತಿಯಿಂದ ಹೊರತರಲಾಗುತ್ತಿರುವ 'ಸುರಗಿ' ತ್ರೈಮಾಸಿಕ ಪತ್ರಿಕೆ ಅರೆಭಾಷೆ ವಿಚಾರಧಾರೆಗಳನ್ನು ನಾಡಿನ ಜನತೆಗೆ ಪರಿಚಯಿಸುವಂತಾಗಲಿ. ಪತ್ರಿಕೆ ಉತ್ತಮವಾಗಿ ಮೂಡಿಬರಲಿ ಎಂದು ಶುಭ ಹಾರೈಸುತ್ತೇನೆ.

(ಡಿ.ವಿ. ಸದಾನಂದಗೌಡ)

ಕೊ.ಸಂ. : 38,39, ನೆಲಮಹಡಿ
ವಿಕಾಸ ಸೌಧ, ಬೆಂಗಳೂರು
ಕಛೇರಿ : 080-22252292, 22034264



ಎಂ.ಪಿ. ಅಪ್ಪಚ್ಚು ರಂಜನ್
ಯುವಜನ ಸೇವೆ ಮತ್ತು ಕ್ರೀಡಾ ಸಚಿವರು
ಹಾಗೂ ಕೊಡಗು ಜಿಲ್ಲೆ ಉಸ್ತುವಾರಿ ಸಚಿವರು

ಸಂಖ್ಯೆ:ಯುಸೇಕ್ರೀಸ/ಆಕಾ/154/2012-13 ದಿನಾಂಕ : 28.12.2012


# ಶುಭ ಸಂದೇಶ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ಸರ್ಕಾರವು ಸ್ಥಾಪಿಸಿದ್ದು, ಈ ಅಕಾಡೆಮಿ ವತಿಯಿಂದ ತ್ರೈಮಾಸಿಕ ಪತ್ರಿಕೆಯನ್ನು ಹೊರತರುತ್ತಿರುವುದು ತುಂಬಾ ಸಂತೋಷಕರ. ತಮ್ಮ ಅಕಾಡೆಮಿಯಿಂದ ಹಮ್ಮಿಕೊಳ್ಳುವ ಕಾರ್ಯಕ್ರಮವು ಜನಪರ ಕಾರ್ಯಕ್ರಮದಿಂದ ಕೂಡಿದ್ದು, ಇದರಿಂದ ಭಾಷೆ, ಸಂಸ್ಕೃತಿ ಉಳಿಯುವಂತೆ ಮತ್ತು ಬೆಳೆಸುವಂತೆ ಆಗಲಿ ಎಂದು ಕೊಡಗಿನ ಕುಲ ದೇವತೆ ಶ್ರೀ ಕಾವೇರಿ ಮಾತೆ ಹಾಗೂ ಶ್ರೀ ಇಗ್ಗುತ್ತಪ್ಪನಲ್ಲಿ ಬೇಡಿಕೊಳ್ಳುತ್ತೇನೆ.

ತಾವು ಹೊರತ್ತರುವ ಪತ್ರಿಕೆಯಲ್ಲಿ ವಿಶೇಷ ಲೇಖನಗಳಿಂದ ಕೂಡಿ ಇದರಿಂದ ಸಜನ ಸಾಮಾನ್ಯರಿಗೆ ಒಂದು ದಾರಿ ದೀಪವಾಗಿ ಹೊರಹೊಮ್ಮಲಿ ಹಾಗೂ ತಮ್ಮ ಪತ್ರಿಕೆಯು ಪ್ರಸಿದ್ಧಿ ಹೊಂದಲಿ ಎಂದು ಹಾರೈಸುತ್ತೇನೆ.

ಅಕಾಡೆಮಿಯ ಆಡಳಿತ ಮಂಡಳಿಯವರಿಗೆ, ಸಂಪಾದಕರಿಗೆ ಹಾಗೂ ಸರ್ವರಿಗೂ ನನ್ನ ಶುಭಾಶಯಗಳು.

(ಎಂ.ಪಿ. ಅಪ್ಪಚ್ಚುರಂಜನ್)



# ಅಧ್ಯಕ್ಷರ ಮಾತ್

ಅರೆಬಾಸೆ ಮಾತಾಡಿಕೆ ನಾಕ್ ಜನ್‌ರೆದ್ರ್ ಅಂಜಿಕೆ ಇತ್ತ್. ನೂರ ಹತ್ತ್ ವರ್ಷ ಬ್ರಿಟಿಷರ್ ನಮ್ಮನ ಸತ್ರ್‌ಗಾಂತ್ಲೆ ಕಂಡ್ ಕಂಡಿದ್ದೊ. ಸೂರ್ಯ ಮುಳ್ಗದ ಸಾಮ್ರಾಜ್ಯದ ಒಡೆಯರ್ನ ಮಂಗ್ಳೂರ್‌ಂದ ಹಡ್ಗ್ ಹತ್ಸಿ ಬೆರ್ಸಿದ ಸಾಹಸಿಗ ನಮ್ಮವು. ಅವರ ಆಳ್ವಿಕೆ ನಿತ್ತ್ ಹೋಗಿ ಅರ್ವತ್ತೈದ್ ವರ್ಷ ಕಳ್ದರೂ ಯಾವ ಸರ್ಕಾರನೂ ನಾವುಗೆ ಏನೂ ಸಾಯ ಮಾಡ್ತ್‌ಲೆ.

ನಮ್ಮ ಅರೆಬಾಸೆ ಅಯ್ಯೆ ಬಾಸೆಯಾಗಿರ್ವ್ ಒಬ್ಬ ಗಂಡ್ ಮಂಜ್ಜ ಡಿ. ವಿ. ಸದಾನಂದಗೌಡ್ರ್ ಮುಖ್ಯ ಮಂತ್ರಿ ಆಗಿ ಬಂದ ಕಾರಣಲಿ ನಾವ್‌ಗೆ ಅಕಾಡೆಮಿ ಸಿಕ್ಕುವ ಯೋಗ ಬಾತ್. ಬೇರೆ ನಾಕ್ ಅಕಾಡೆಮಿಗ ಆಕನೇ ನಮ್ಮವುಕು ಆಕೂಂತ ಹೋರಾಟ ಇತ್ತ್. ಅದ್ಕೆ ಆಗ ಫಲ ಸಿಕ್ತ್‌ಲೆ. 'ಸಕಾಲ ಕಾರ್ಯಕ್ರಮಂದ' ಇಡೀ ರಾಜ್ಯಕ್ಕೆ ಒಳ್ಳೆ ಹೆಸ್ರ್ ಸಿಕ್ಕಿದಾಂಗೆ ಇದರ್‌ಂದ್ರಲೂ ಸದಾನಂದ ಗೌಡ್ರ್‌ಗೆ ಒಳ್ಳೆ ಹೆಸ್ರ್ ಬಾತ್.

ಅರೆಬಾಸೆನ ನಮ್ಮ ಹಿರಿಯವು ಮಲ್ನಾಡ್‌ಂದ ತಂದೊ. ಈಗ ಅಲ್ಲಿ ಯಾರೂ ಅರೆಬಾಸೆ ಮಾತಾಡ್ತುಲೆ. ಅಲ್ಲಿನ ಕೆಲಾವ್ ಅಜ್ಜಿಕ ಅಜ್ಜಂದರ್ ಇದ್ಕೆ ಹತ್ರದ ಮಾತ್ ಮಾತಾಡ್ವೆ. ಈ ಅಕಾಡೆಮಿ ಆತ್ಲರೆ ಇಲ್ಲಿನ ಕತೆನೂ ಹಾಂಗೆ ಆಗ್ತಿತ್ತ್. ನಮ್ಮ ಮಾತ್‌ಲೂ ಕನ್ನಡ ಬೆರ್ಕೆ ಆಗ್ತಾ ಉಟ್ಟ್. ಹಿಂಗೇ ಮುಂದರ್ದರೆ ಇಲ್ಲಿನೂ ಅದೇ ಗತಿ ಆಕೂ ಸಾಕ್. ಹಾಂಗೆ ಆಕೆ ಬುಡ್ಕೆ ಬೊತ್ತ್. ಬದ್ಲಿಗೆ ಅಲ್ಲಿನೌಕೂ ನಮ್ಮೊಟ್ಟಿಗೆ ಸೇರಿಕಂಬಕೆ ಅರೆಬಾಸೆ ಕಲ್ಸಿಕೊಡೊಕು. ಹಾಂಗೆ ತುಳು ಮಾತಾಡುವ ನಮ್ಮವುಕೂ ಅರೆಬಾಸೆ ಮಾತಾಡಿಕೂ ಕಲ್ಸಕು.

ಸ್ವಾತಂತ್ರ್ಯ ಪೂರ್ವಲಿ ನಮ್ಮೊಳಗೆ ಹೆಣ್ಣ್ ಕೊಡ್ವ ತರ್ವ ಪದ್ದಿಸ್ಟ ಇತ್ಲೆ. ಒಬ್ರಿಗೊಬ್ಬ ಪರಜಾತಿಂತ್ಲೆ ಹೇಳಿಕಂಬೋದಿತ್ತ್. ಈಗ ಹಾಂಗಿಲ್ಲೆ. ವಕ್ಕಲಿಗರ ಪೈಕಿ ಕನ್ನಡ ಜಿಲ್ಲೆ, ಕೊಡಗ್‌ಂದ ಎಲ್ಲವೂ ಸಮ್ಮಂದ ಮಾಡಿಕಂಬೊಕೆ ಹುಡ್ಕುವೆ. 1985ರ ಫೆಬ್ರವರಿ 24ನೇ ತಾರೀಕ್‌ಲಿ ಸುಳ್ಯಲಿ ಒಂದು ಸಮ್ಮೇಳನ ಆತ್. ಅಲ್ಲಿವರ್ಗೆ ಕೊಡಗ್‌ಲಿ ನಾವೇ ಬೇರೆ, ಕನ್ನಡ ಜಿಲ್ಲೆನವೇ ಬೇರೆಂತ ಹೇಳ್ವಷ್ಟ್ ನಮ್ಮವರೊಳಗೆ ಬೇದ ಬಾವನೆ ಇತ್ತ್. ಮದ್ವೆ ಸಮ್ಮಂದ ಆತಿತ್ಲೆ. ಈ ಸಮ್ಮೇಳನ ನಂತ್ರ ಶ್ರೀ ಕ್ಷೇತ್ರ ಆದಿ ಚುಂಚನಗಿರಿ ಮಠದ ಶ್ರೀ ಶ್ರೀ ಶ್ರೀ ಬಾಲ ಗಂಗಾಧರ ನಾಥ ಸ್ವಾಮೀಜಿ ಅವ್ರ್ನ ಕೃಪಾರ್ಶಿವಾದ ನಮ್ಮವುಕೆ ಸಿಕ್ಕಿಕೆ ಸುರಾದ ಮೇಲೆ ಸುಳ್ಯಲಿ ಸಾಕಷ್ಟ್ ಬೆಳವಣ್ಗೆ ಆತ್. ಕೆವಿಜಿಯವರ ಮೂಲ್ಕ ನಮ್ಮವು ಇಂಜಿನಿಯರ್ರಾದೊ, ಫಾರಿನ್ಗೋದೊ, ಇದ್ಕೆಲ್ಲ ಅಂದ್‌ನ ಗೌಡ ಸಮ್ಮೇಳನನೆ ಕಾರ್ಣ.

ಈಗ ಅರೆಬಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿಯಾಗುಟ್ಟು. ಇದರ ಪೂರ್ಣ ಪ್ರಯೋಜನ ಪಡ್ಕಂಡ್ ನಾವು ಒಟ್ಟಾಗಿ ನಮ್ಮ ಬಾಸೆನ ಬೆಳ್ಸೊಕು. ಒಂದು ಬಾಸೆ ಅವಸಾನ ಆಕನ ಒಂದು ಸಂಸ್ಕೃತಿ ನಾಸ ಆದೆ. ನಿಮ್ಮೆಲ್ಲರ ಪೂರ್ಣ ಸಾಕಾರ ಇರ್ಲಿ. ಅರೆಬಾಸೆ ಉಳ್ಸೋಮ, ಬೆಳ್ಸೋಮ.

✍ ಎನ್. ಎಸ್. ದೇವಿಪ್ರಸಾದ್



# ಸಂಪಾದಕೀಯ


ಹಲವ್ ವರ್ಸಗಳ ಹಿಂದೆ ಕಂಡ ಕನಸ್ ನನಸ್ ಆದ ದಿನ 29-5-2012. ಅರೆಬಾಸೆ ಮಾತಾಡ್ವ ಗೌಡ ಜನಾಂಗಕ್ಕೆ ಸಿಕ್ಕಿದ ಅಕಾಡೆಮಿತೇಳ್ವ ಕೊಪ್ಪರಿ. ಕೊಪ್ಪರಿನ ಅರ್ತ ನಿಧಿತ್ತೇಳಕ್. ಯಿ ನಿದಿನ ಉಳ್ಸಿ ಬೆಳ್ಸಿಕೊಂಬ ಸಕ್ತಿ ಹತ್ತ್ ಕುಟುಂಬ ಹದಿನೆಂಟ್ ಗೋತ್ರ ಜನರ್ದ್ದಾಗಲಿ. ಜನಾಂಗದ ಆಚಾರ ವಿಚಾರ ಸಂಪ್ರದಾಯ ಪರಂಪರೆಂತ್ತೇಳಿ ಏನುಟ್ಟೋ ಎಲ್ಲಾ ಅಕಾಡೆಮಿ ಸಬ್ದದ ವಳಗೆ ಅಡ್‌ಂಗಿರೊಕು ಇನ್ನ್ ಮುಂದೆ. ಈ ಅವಕಾಸನ ನಾವ್‌ಗೆ ವದ್‌ಗಿಸಿಕೊಟ್ಟ್ ಕರ್ನಾಟಕ ಸರ್ಕಾರಲಿ ಅರೆಬಾಸೆ ತೇಳ್ದು ಉಳ್ಕಂಡ್ತೇಳಿ ನಾವೂ ಗೆಲ್ಲವುಕು ಬಾರಿ ಕುಸಿ ಆಗುಟ್ಟು. 1997ರ್ಲಿ ಸುರಾದ ಕೊಡಗ್ ಸಂಗಾತಿ ಪತ್ರಿಕೆ ಜನಾಂಗನ ಸಾಕಸ್ಟ್ ಒಗ್ಗೂಡ್ಸಿಕೆ ಜನ ಜಾಗೃತಿ ಮೂಡ್ಸಿದರೂ, ಒಟ್ಟಿಗೆ ಹುಟ್ಟಿಕಂಡ ಗೌಡ ಮಹಿಳಾ ಒಕ್ಕೂಟ ಮತ್ತೆ ಸಾಂಸ್ಕೃತಿಕ ಅಕಾಡೆಮಿ, ಶತಮಾನೋತ್ಸವ ಆಚರ್ಸಿಕಂಡ ಕೊಡಗ್ ಗೌಡ ವಿದ್ಯಾ ಸಂಘದ ನೆರಳ್‌ಲಿ ನಡ್ಕಂಡ್ ಬಾತ್. ಅದಲ್ಲದೆ ಯುವ ವೇದಿಕೆಗ ಕ್ರೀಡಾ ಚಟುವಟಿಕೆಗಳ್ನ ಮಾಡಿಕಂಡ್ ಕೊಡಗ್ ಮತ್ತೆ ದಕ್ಷಿಣ ಕನ್ನಡ ಜಿಲ್ಲೆಲೂ ಸಂಘಟನೆಗೆ ಸಾಕಸ್ಟ್ ಆದ್ದ್ ನಾವ್ ಕಾಣಕ್. ಹಿಂಗೆ ಈ ಸಂಸ್ಥೆಗ ಮಾಡುವ ಕೆಲ್ಸ ಕಾರ್ಯಗಳ್ನ ಜನರ ಮನೆ ಮನೆಗೆ ಮುಟ್ಟುಸುವ ಕೆಲ್ಸನ ಸಂಗಾತಿ ಪತ್ರಿಕೆ ಮಾಡ್ತ್. ಈ ಮಾದ್ಯಮಲಿ ಸಂಗ್ರಹ ಆದ ವಿಷಯಗ ಕಾವ್ಯ ರೂಪಲಿ ತರುವಷ್ಟಾತ್.

ಸುರಗಿತೇಳ್ದು ಪೊರ್ಲ್ನ ಹೆಸ್ರ್. ರೆಂಜಳೆ ಹೂನ ಹೋಲ್ವ್ ಒಂದು ಗಮ ಗಮ ಬರುವ ಹೂ ಇದ್. ಸಾಮಾನ್ಯಾಗಿ ಕನ್ನಡ ಜಿಲ್ಲೆಲಿ ಬೆಳ್ದದೆ. ದೇವ್‌ರಿಗೆ ಮಾಲೆ ಹಾಕಿಕೂ ಮುಕ್ಯಾಗಿ ಮೊದುವೆಗಳ್ಲಿ ಉಪಯೋಗಿಸ್ತಾ ಇದ್ದವು ಮಲ್ಲಿಗೆ ಹೂ ಹಾರಗ ಬಾಕೆ ಮುಂದೆ ಗಡ. ಈ ಹೂಗೆ ಅರೆಬಾಸೆಲಿ ಸುರ್ಗ್ಗಿ ಹೂ ತೇಳ್ವೆ. ಇದರ ಮಾಲೆನ ಪೆಟ್ಟಿಗೆಲಿ ಮಡ್ಕಂಡ್ರೆ ಇದರ ಗಮನ ಕರ್ಪೂರದಷ್ಟೆ ಕೆಲ್ಸ ಮಾಡ್ದೆ. ಅದರ ಪರಿಮಳದಂಗೆ ಸುರಗಿ ತ್ರೈಮಾಸಿಕ ಇಂದ್ ಎಲ್ಲವರ ಮನೆಗೆ ಹೋಕೆ ತಯಾರಾಗಿ ನಿತ್ತುಟ್ಟು. ಮರೆ ಆಗ್ತಾ ಇದ್ದ ಬಾಸೆ ಸಂಸ್ಕೃತಿನ ಸಾಹಿತ್ಯ ರೂಪಲಿ ಹೊರಗೆ ತಾಕೆ ನಾವ್‌ಗೆ ಸರಕಾರಂದ ವಳ್ಳ ಅವಕಾಸ ಸಿಕ್ಕಿಟ್ಟು. ಹಂಗೆ ನಮ್ಮ ಸ್ರಿಮಂತ ಸಂಸ್ಕೃತಿ ಬಾಸೆ ವೈಭವನ ಸಾಹಿತ್ಯ ರೂಪಲಿ ತಂದ್ ಅದರ್ನ ಕರ್ನಾಟಕಲಿ ಗರಿಕೆದ್‌ರ್‌ವಂಗೆ ಮಾಡುವ ಕೆಲ್ಸನ ಇನ್ನ್‌ಮುಂದ್ ಸುರಗಿ ತ್ರೈಮಾಸಿಕ ಮಾಡ್ದೆ.

ಅಕಾಡೆಮಿ ಬಾಕೆ ಸ್ರಮಿಸಿ ದುಡ್ದಾಂತ ಹಲವ್ ಮಹನೀಯರ್‌ಗಳ್ನ ನೆನ್ಪಿ ಅವ್ಕೆ ಅಬಿನಂದನೆ ಸಲ್ಲೊನ. ಪ್ರಥಮಕೆ ಆಯ್ಕೆಯಾದ ಅಧ್ಯಕ್ಷರ್ ಮತ್ತೆ ಸದಸ್ಯರ್‌ಗೆ ಅಕಾಡೆಮಿ ಬಾರನ ಹೊರ್ಸ್ಯೊಳೊ. ಅವ್ಕೆ ದೃಢ ಸಕ್ತಿ ಬರ್ಲಿತ್ತೇಳಿ ಸುರಗಿ ತ್ರೈಮಾಸಿಕ ಹಾರೈಸಿದೆ. ನಮ್ಮವರ ಅದೃಷ್ಟಕ್ಕೆ ನಮ್ಮವೆ ಆದ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಆಗಿದ್ದ ದೇವರಗುಂಡ ಸದಾನಂದ ಗೌಡರ ಮೂಲ್ಕ, ವಿಧಾನ ಸಭಾಧ್ಯಕ್ಷರಾದ ಕೊಂಬಾರನ ಜಿ. ಬೋಪಯ್ಯನವರ ಪ್ರಯತ್ನಂದ ಕ್ಯಾಬಿನೆಟ್ ದರ್ಜೆ ಮಂತ್ರಿಯಾಗಿದ್ದ ಶೋಭಾ ಕರಂದ್ಲಾಜೆ ಇವೆಲ್ಲಾ ಅಕಾಡಮಿನ ಬಾರಿ ಹುರ್‌ಪುಲಿ ಕಾರ್ಯಗತ ಮಾಡ್ಸಿ ನಮ್ಮ ಕೊಡಗ್ ಜಿಲ್ಲೆನ ಉಸ್ತುವಾರಿ ಸಚಿವ ಸನ್ಮಾನ್ಯ ಎಂ. ಪಿ. ಅಪ್ಪಚ್ಚುರಂಜನ್ ಇವರೆಲ್ಲವರ ಪ್ರಯತ್ನಂದ ಸಿಕ್ಕಿದ ಅಕಾಡೆಮಿನ ನಾವೆಲ್ಲಾ ಕೂಡಿ ಬೆಳ್ಸೊನ. ಕೊಡಗ್ ಮತ್ತೆ ದಕ್ಷಿಣ ಕನ್ನಡಗಳ್ಲಿ ಇರುವ ಅರೆಬಾಸೆ ಮತ್ತೆ ತುಳು ಭಾಷೆ ಆಡುವ ಜನ್ರ ನಡುಲಿ ನಿತ್ತ ಗೌರವಸ್ಥರ್ ಗಂಭೀರ ವ್ಯಕ್ತಿ ಎನ್. ಎಸ್. ದೇವಿಪ್ರಸಾದರ್ ಹಲವಾರ್ ಕ್ಷೇತ್ರಗಳ್‌ಲಿ ರಾಜ್ಯ ರಾಷ್ಟ್ರ ಪ್ರಶಸ್ತಿ ಪಡ್ದವು. ಇವು ಕೃಷಿಕರಾಗಿ ಹವ್ಯಾಸಲಿ ಸಾಹಿತಿ, ನಟ, ನಾಟಕ, ನಿರ್ಮಾಪಕ, ಚಿಂತಕ, ಆಕಾಶವಾಣಿ, ಜಾನಪದ ಕಲೆಲಿ ಸಹ ಕೈಯಾಡ್ಸಿ ಅನುಭವ ಪಡ್ದವು. ಇವರ ಸಾರತ್ಯಲಿ ಅರೆಬಾಸೆ ಮತ್ತೆ ಸಂಸ್ಕೃತಿ ಉತ್ತಮ ರೀತಿಲಿ ಬೆಳ್ದ್ ಬರ್ಲಿತ್ತೇಳಿ ಎಲ್ಲವು ಹಾರೈಸೊನ.

✍ ಪಟ್ಟಡ ಪ್ರಭಾಕರ್

# ಪರಿಚಯ



ಎನ್.ಎಸ್. ದೇವಿಪ್ರಸಾದ್
ಅಧ್ಯಕ್ಷರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಸಂಪಾಜೆ ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲೂಕು - 574234
ದೂ : 08257 - 266244, ಮೊ : 94484 72244

ಸಮಾಜ ಸೇವೆಗೆ ರಾಜ್ಯ ಪ್ರಶಸ್ತಿ ವಿಜೇತರಾದ ನಂಜಯ್ಯನ ದಿವಂಗತ ಶ್ರೀ ಎನ್. ಸಣ್ಣಯ್ಯ ಪಟೇಲ್ ಮತ್ತು ಶ್ರೀಮತಿ ಪೂವಮ್ಮ ದಂಪತಿಗಳಿಗೆ ಎನ್.ಎಸ್. ದೇವಿಪ್ರಸಾದ್ ಸಂಪಾಜೆಯವರು 1942ರಲ್ಲಿ ಜನಿಸಿದರು. ಮೈಸೂರು ವಿ.ವಿ.ಯಿಂದ ಬಿ.ಎ. ಪದವಿಯನ್ನೂ, ಮುಂಬೈ ವಿ.ವಿ. ಯಿಂದ ಪತ್ರಿಕೋದ್ಯಮದಲ್ಲಿ ಡಿಪ್ಲೋಮ ಪದವಿಯನ್ನು ಪಡೆದ ಶ್ರೀಯುತರು ವೃತ್ತಿಯಲ್ಲಿ ಅಡಿಕೆ, ರಬ್ಬರ್ ಬೆಳೆಗಾರರು. ಪ್ರವೃತ್ತಿಯಲ್ಲಿಲೇಖಕ, ನಟ, ನಿರ್ದೇಶಕ, ನಿರ್ಮಾಪಕ, ಸಂಶೋಧಕ, ಆಕಾಶವಾಣಿ, ದೂರದರ್ಶನ, ನಾಟಕ, ಸಿನೇಮ, ಹೀಗೆ ಅನೇಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರು.


ಶೈಕ್ಷಣಿಕವಾಗಿ ಎನ್.ಎಸ್. ದೇವಿಪ್ರಸಾದರ ಪಾತ್ರ ಮಹತ್ತರವಾದುದು. 1966ರಲ್ಲಿ ಸಂಪಾಜೆ ಪ್ರೌಢ ಶಾಲಾ ಸ್ಥಾಪಕ ಸದಸ್ಯ ಮಂಡಳಿ ಅಧ್ಯಕ್ಷರಾಗಿದ್ದು ಈಗಲೂ ಸಂಪಾಜೆ ವಿದ್ಯಾ ಸಂಘದ ಅಧ್ಯಕ್ಷರಾಗಿದ್ದಾರೆ. ಶ್ರೀ ಆದಿ ಚುಂಚನಗಿರಿ ಮೆಡಿಕಲ್ ಕಾಲೇಜು ಆಡಳಿತ ಮಂಡಳಿ ಸದಸ್ಯರಾಗಿದ್ದಾರೆ. ಮಂಗಳೂರು ವಿ.ವಿ. ಎಫಿಲಿಯೇಶನ್ ಸದಸ್ಯರಾಗಿದ್ದರು.

ಚಾರಿತ್ರಿಕ ಮಹತ್ವವುಳ್ಳ "ಅಮರ ಸುಳ್ಯದ ಸ್ವಾತಂತ್ರ್ಯ ಸಮರ", "ಕೊಡಗಿನಲ್ಲಿ ಜಾತೀಯತೇ" ಕೃತಿಗಳನ್ನು ಹಾಗೆಯೇ 'ಶಿರಾಡಿ ಭೂತ' 'ಹೆಂಗಿತ್ತ್ ಹೆಂಗಾತ್' ಮತ್ತಿತ್ತರ 'ಕನ್ನಡ' ಮತ್ತು 'ಗೌಡ ಕನ್ನಡ' ನಾಟಕಗಳನ್ನು ರಚಿಸಿದ್ದಾರೆ, ನಿರ್ದೇಶಿಸಿದ್ದಾರೆ. ಅಲ್ಲದೆ 'ನವನೀತ' 'ಉದ್ಘಾಟನೆ' ಎಂಬ ಕೃತಿಗಳನ್ನು ಸಂಪಾದಿಸಿದ್ದಾರೆ. ಮಡಿಕೇರಿ, ಮಂಗಳೂರು ಆಕಾಶವಾಣಿಗಳಲ್ಲಿ ಚಿಂತನ, ಸಂವಾದ ಮತ್ತು ಭಾಷಣಕಾರರಾಗಿ, ಗುರುತಿಸಲ್ಪಟ್ಟು, ಸಂಪನ್ಮೂಲ ವ್ಯಕ್ತಿ. ಯಕ್ಷಗಾನ, ಬಯಲಾಟ, ಕಮ್ಮಟಕಗಳ ಸಂಘಟಕರಾಗಿ, ಬಡ ಕಲಾವಿದರಿಗೆ ಪೋಷಕರಾಗಿದ್ದಾರೆ.

1967ರಿಂದ ಈಚೆ ಮಲೇಶಿಯ, ಸಿಂಗಾಪುರ, ಥೈಲ್ಯಾಂಡ್, ಹಾಂಕಾಂಗ್, ಜಪಾನ್, ಅಮೇರಿಕ, ನೇಪಾಳ ಮತ್ತು ಭಾರತದಾದ್ಯಂತ ಹಲವು ಭಾರಿ ಪ್ರವಾಸ ಮಾಡಿದ್ದಾರೆ. ಅಮರ ಕ್ರಾಂತಿ, ಉತ್ಸವ ಸಮಿತಿಯ ಅಧ್ಯಕ್ಷಕರಾಗಿ ಸರಕಾರ ಮತ್ತು ಜನರ ಮನಸ್ಸು ಸೆಳೆದ 'ಕಾಲ್ನಡಿಗೆ ಜಾಥ'ವನ್ನು ಸಂಘಟಿಸಿದ್ದು ಮತ್ತು ಕೊಡಗು ಪ್ರಜಾ ವೇದಿಕೆಯನ್ನು ಸ್ಥಾಪಿಸಿ ಕೊಡಗು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಇಲ್ಲವಾಗಿಸಿದ್ದು ಇವರ ಹೆಗ್ಗಳಿಕೆ. ಇವರು ನಿರ್ಮಿಸಿದ ಮೂರು ದಾರಿಗಳು ಸಿನೇಮಕ್ಕೆ ಒಂದು ರಾಷ್ಟ್ರ ಪ್ರಶಸ್ತಿ ಮತ್ತು ಐದು ರಾಜ್ಯ ಪ್ರಶಸ್ತಿಗಳು ಲಭಿಸಿವೆ. ಹುಟ್ಟೂರಿನಲ್ಲಿ ಅಭಿಮಾನಿಗಳು 2002ರಲ್ಲಿ ಇವರಿಗೆ ಷಷ್ಟ್ಯಬ್ದರೆಂದು ಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿಯವರಿಂದ ಸನ್ಮಾನ ಏರ್ಪಡಿಸಿದ್ದರು. 1997ರ ದಕ್ಷಿಣ ಕನ್ನಡ ಜಿಲ್ಲೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿತರಾಗಿದ್ದಾರೆ. 2004ರ ಸುಳ್ಯ ತಾಲೂಕು, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಂಗಭೂಮಿಗೆ ಸಲ್ಲಿಸಿದ ಗಣನೀಯ ಸೇವೆಗಾಗಿ 2007ರಲ್ಲಿ ಕರ್ನಾಟಕ ಸರ್ಕಾರ ನಾಟಕ ಅಕಾಡೆಮಿ ಮೂಲಕ ಗೌರವ ಪುರಸ್ಕಾರ ನೀಡಿ ಸನ್ಮಾನಿಸಿದೆ. 1966ರಲ್ಲಿ ಸಂಪಾಜೆ ಹೈಸ್ಕೂಲ್ ಸ್ಥಾಪಕರಲ್ಲೊಬ್ಬರಾಗಿದ್ದು, ರೂ. 25,000/- ದಾನ ನೀಡಿದ್ದಾರೆ. 1991ರಲ್ಲಿ ಪದವಿ ಪೂರ್ವ ಕಾಲೇಜಿಗೆ ರೂ. 85,000/- ವೆಚ್ಚದ ಕೊಠಡಿ ದಾನ ನೀಡಿದ್ದಾರೆ. 51 ವರ್ಷಗಳಿಂದ ಶ್ರೀ ಪಂಚಲಿಂಗೇಶ್ವರ ದೇವಾಸ್ಥಾನದ ಧರ್ಮದರ್ಶಿಗಳಾಗಿದ್ದು ಜೀರ್ಣೋದ್ಧಾರಕ್ಕೆ 1,00,000/- ದಾನ ಮಾಡಿದ್ದಾರೆ.

ಕುಂಬುಗೌಡನ ಕುಟುಂಬದ ಇಂದಿರಾರವರನ್ನು ವಿವಾಹವಾಗಿ 3 ಮಕ್ಕಳನ್ನು ಮೂವರು ಮೊಮ್ಮಕ್ಕಳನ್ನು ಪಡೆದಿದ್ದಾರೆ.

ಹಿರಿಯ ಮಗಳು ಸಹನಾ ಅಮೇರಿಕಾದಲ್ಲಿ, ಕಿರಿಯ ಮಗಳು ಪ್ರಾಜ್ಞಾ ಆಸ್ಟ್ರೇಲಿಯಾದರಲ್ಲಿ ಇದ್ದಾರೆ. ಮಗ ಸಂಪಾಜೆ ಲಯನ್ಸ್ ದೇವಿಚರಣ್, ಸೊಸೆ ಲಯನ್ಸ್ ಟೀನಾ ಚರಣ್ ಮತ್ತು ಮೊಮ್ಮಗ ಮೌರ್ಯ, ಮೊಮ್ಮಗಳು ಲಾಸ್ಯ ಇವರೊಂದಿಗೆ ಸಂಪಾಜೆಯಲ್ಲಿ ವಾಸವಾಗಿರುತ್ತಾರೆ.



**ಕುಂಞಟಿ ಶಿವರಾಮ ಗೌಡ**
ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕೊಲ್ಲಮೊಗ್ರ ಗ್ರಾಮ ಮತ್ತು ಅಂಚೆ, ಸುಳ್ಯ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ
ಮೊ : 9187705284 ದೂ : 08257 - 233294

ಕುಂಞಟಿ ಚಿನ್ನಪ್ಪ ಗೌಡ ಮತ್ತು ಕಾವೇರಿ ದಂಪತಿಗಳ ಪ್ರಥಮ ಪುತ್ರನಾಗಿ ದಿನಾಂಕ 16-05-1944ರಂದು ಸುಳ್ಯ ತಾಲೂಕು, ಕೊಲ್ಲಮೊಗ್ರ ಗ್ರಾಮದಲ್ಲಿ ಜನಿಸಿದರು. ಕೊಲ್ಲಮೊಗ್ರ ಪಂಚಾಯತ್ ಬೋರ್ಡ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಬಳಿಕ, ಗುತ್ತಿಗಾರ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿಯ ನಂತರ ಮುಂದೆ ಪಂಜ ಸರ್ಕಾರಿ ಪ್ರೌಢ ಶಾಲೆಯಲ್ಲಿ 1961ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ತೇರ್ಗಡೆಯಾದ ಬಳಿಕ ಕರ್ನಾಟಕ ವಿಶ್ವ ವಿದ್ಯಾನಿಲಯದಿಂದ ಬಿ.ಎ. ಪದವಿ ಪಡೆದು, ಮಂಗಳೂರು ಸರಕಾರಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಎಡ್. ಪದವಿ ಪಡೆದು 1970ರಲ್ಲಿ ಶಿಕ್ಷಕರಾಗಿ ಸರ್ಕಾರಿ ಸೇವೆಗೆ ಸೇರ್ಪಡೆಗೊಂಡರು. ಹಾಸನದ ಪ್ರಾಥಮಿಕ ಶಾಲೆ ತನಿಖಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 1994ರಲ್ಲಿ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾಗಿ ಬಡ್ತಿ ಪಡೆದು 2002ರಲ್ಲಿ ಸೇವೆಯಿಂದ ನಿವೃತ್ತಿಯಾಗಿರುತ್ತಾರೆ.

ಶಿಕ್ಷಕರಾಗಿ ಸೇವೆಯಲ್ಲಿರುವ ಸಂದರ್ಭ ದಕ್ಷಿಣ ಕನ್ನಡ ಜಿಲ್ಲಾ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರಾಗಿ ದುಡಿದಿರುವ ಇವರು ಶಿಕ್ಷಕರ ಸಂಘದಿಂದ ಪ್ರಕಟವಾಗುತ್ತಿದ್ದ "ಶಿಕ್ಷಕ ಸಮಾಚಾರ" ಎಂಬ ಮಾಸ ಪತ್ರಿಕೆಯ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಪ್ರೌಢಶಾಲಾ ಶಿಕ್ಷಕ ಸಂಘವಾದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ ಅನುಭವವಿದ್ದು ನಿವೃತ್ತಿಯಾದ ಬಳಿಕ ಸ್ವಗ್ರಾಮದಲ್ಲಿ ಕೃಷಿ ಹಾಗೂ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ.



**ಪದ್ಮಾ ಕೋಲ್ಚಾರ್**
ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮನೆ ಸ.109/3, ಕೃಷ್ಣಾ ಲೇಔಟ್, ಹುಳಿಮಾವು
ಬನ್ನೇರು ಘಟ್ಟದ ರಸ್ತೆ, ಬೆಂಗಳೂರು 560076
ದೂ : 080 - 26581454 ಮೊ : 9448481454

ಮೂಲತಃ ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕಿನ ಕೋಲ್ಚಾರ್ ಮನೆತನದ ದಿವಂಗತ ಬೋಜಪ್ಪಗೌಡ ಮತ್ತು ದಿವಂಗತ ಗಂಗಮ್ಮ ದಂಪತಿಗಳ ಹಿರಿಯ ಮಗನಾಗಿ ಜನಿಸಿ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಸುಳ್ಯದಲ್ಲಿ ಮಾಡಿ ಎಂ.ಎ. ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಡೆದು ಬೆಂಗಳೂರಿನಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಿ ಪತ್ನಿ ವೀಣಾ ಪದ್ಮನಾಭ ಹಾಗೂ ಮಕ್ಕಳಾದ ಕುಮಾರಿ ಪವಿನ, ಕುಮಾರಿ ದೀಕ್ಷಾರೊಂದಿಗೆ ಬೆಂಗಳೂರಿನ ಬನ್ನೇರು ಘಟ್ಟದ ರಸ್ತೆ, ಹುಳಿಮಾವು ಇಲ್ಲಿ ನೆಲೆಸಿರುತ್ತಾರೆ.

ಉದ್ಯಮದೊಂದಿಗೆ ಸಮಾಜಮುಖಿ ಚಿಂತನೆಯನ್ನು ಮೈಗೂಡಿಸಿಕೊಂಡಿರುವ ಇವರು ಜೇಸಿ, ಲಯನ್ಸ್ ಸೇವಾ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ದುಡಿದಿದ್ದಾರೆ. ರಾಜ್ಯ ವಕ್ಕಲಿಗರ ಸಂಘದ ಸದಸ್ಯರಾಗಿ, ಪ್ರತಿಷ್ಠಿತ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ) ಇದರ ಜಂಟಿ ಕಾರ್ಯದರ್ಶಿಯಾಗಿ, ಪ್ರಸ್ತುತ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೊಡಗು ದಕ್ಷಿಣ ಕನ್ನಡ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ (ರಿ) ಇದರ ನಿರ್ದೇಶರಾಗಿ, ವಿಜಯ ಮಹಲ್ ಲಯನ್ಸ್ ಕ್ಲಬ್ (324 ಡಿ-1) ಇದರ ನಿರ್ದೇಶಕರಾಗಿ ಕಾರ್ಯಕ್ರಮಗಳ ಉದ್ಘೋಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಗೀತ, ಕಲೆ, ನಾಟಕಕ್ಕೆ ಪ್ರೋತ್ಸಾಹ ನೀಡುತ್ತಿರುವ ಇವರು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಯುವಕ ಯುವತಿಯರಿಗೆ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿ ವೇದಿಕೆಯ ಮುಖಾಂತರ ಪ್ರತಿಭಾನ್ವೇಷಣೆಗೆ ಅವಕಾಶ ಮಾಡಿಕೊಟ್ಟಿರುತ್ತಾರೆ.

ಉತ್ತಮ ಕ್ರೀಡಾ ಪಟುವಾಗಿರುವ ಇವರು ಭಾರ ಎತ್ತುವ ಸ್ಪರ್ಧಿ ಪಟುವಾಗಿ, ಉತ್ತಮ ದೇಹಧಾರ್ಢ್ಯ ಪಟುವಾಗಿ ಸುಳ್ಯ ತಾಲೂಕನ್ನು ಪ್ರತಿನಿಧಿಸಿದ ಮೊದಲ ಹೆಗ್ಗಳಿಕೆ ಇವರದು. ಯೋಗ ತರಬೇತಿ ನೀಡುತ್ತಿರುವ ಇವರು ಪ್ರತ್ಯಾಹಾರ ಮತ್ತು ಯೋಗದ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಾ ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ) ತುಮಕೂರು ಇದರ ಹುಳಿಮಾವು ಶಾಖೆಯ ಸದಸ್ಯರಾಗಿ, ಮಾರ್ಗದರ್ಶಕರಾಗಿ, ಪ್ರಾಂತ್ಯದ ನಿರ್ದೇಶಕರಾಗಿ, ಸಂಘಟಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆರೋಗ್ಯಕರ ಜೀವನಕ್ಕೆ ನೈಸರ್ಗಿಕ ಆಹಾರ ಮುಖ್ಯ ಎನ್ನುವದನ್ನು ಪ್ರತಿಪಾದಿಸುವ ಇವರು ಪ್ರತಿಷ್ಠಿತ ನೈಸರ್ಗಿಕ ಕೃಷಿ ವಿಜ್ಞಾನ ಶ್ರೀ ಸುಭಾಷ್ ಪಾಳೇಕಾರ್ ಮಹಾರಾಷ್ಟ್ರ ಇವರ ಪಟ್ಟದ ಶಿಷ್ಯರಾಗಿ ಸ್ವತಃ ಕೃಷಿಕರಾಗಿ ಕೃಷಿ ತರಬೇತಿಯನ್ನು ನೀಡುವುದರ ಜೊತೆಗೆ ಬೆಂಗಳೂರು ನಗರದಲ್ಲಿ "ಕೆನರಾ ಆಗ್ರ್ಯಾನಿಕ್ಸ್" ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ ಈ ಸಂಸ್ಥೆಯ ಮುಖಾಂತರ ಜನರಿಗೆ ಉತ್ತಮ ಆಹಾರ ಪದಾರ್ಥಗಳು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವಂತಹ ವ್ಯವಸ್ಥೆಯನ್ನು ಮಾಡಿರುತ್ತಾರೆ.



**ಬೈತಡ್ಕ ಜಾನಕಿ ಬೆಳ್ಯಪ್ಪ**

ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

21-16, ರೇಸ್‌ಕೋರ್ಸ್ ರಸ್ತೆ, ಎಲ್.ಐ.ಸಿ. ಹತ್ತಿರ, ಮಡಿಕೇರಿ - ಕೊಡಗು ಜಿಲ್ಲೆ

ದೂ : 08272 - 228047 ಮೊ : 9008571899

ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಇವರು ಲೇಖಕಿ - ಸಾಹಿತಿ ಹಾಗೂ ಜನಪದ ಕಲಾವಿದೆ. ಗೃಹಿಣಿಯಾಗಿ ಮನೆಕೆಲಸದೊಂದಿಗೆ ಬಿಡುವಿನ ವೇಳೆಯಲ್ಲಿ ಬೆಳಕಿಗೆ ಬಾರದೆ ಇರುವ ಜಾನಪದ ವಿಷಯಗಳನ್ನು ಸಂಗ್ರಹಿಸುವುದರ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ.

1997ರಿಂದ ಇವರು ಕೊಡಗು ಗೌಡ ಮಹಿಳಾ ಒಕ್ಕೂಟದ ಸಾಂಸ್ಕೃತಿಕ ವಿಭಾಗದಲ್ಲಿ ಜಾನಪದ, ಕೋಲಾಟ, ಸೋಬಾನೆ ಹಾಡುಗಳನ್ನು ಯುವತಿಯರಿಗೆ ತರಬೇತಿ ನೀಡಿ ಮೈಸೂರಿನ ರಂಗಾಯಣ, ಕಲಾಮಂದಿರ, ಮಂಡ್ಯ ಮತ್ತು ಕೊಡಗು ಉತ್ಸವದಲ್ಲಿ ನಾಲ್ವಡಿ ಕೃಷ್ಣರಾಜೇಂದ್ರ ಕಲಾಮಂದಿರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ದಸರಾ ಮೆರವಣಿಗೆ ಮೈಸೂರು, ಜನೋತ್ಸವ ದಸರ ಮಡಿಕೇರಿ, ಕೆ.ವಿ.ಜಿ.ಯವರ ಅಮೃತೋತ್ಸವ ಸುಳ್ಯ, ಕನ್ನಡ ಸಾಹಿತ್ಯ ಪರಿಷತ್‌ನ ಹಲವಾರು ವೇದಿಕೆಗಳಲ್ಲಿ ಇವರ ತಂಡ ಪ್ರದರ್ಶನ ನೀಡಿರುತ್ತಾರೆ.

ಶ್ರೀಮತಿಯವರು 1998ರಿಂದ ಒಕ್ಕೂಟದ ಮೂಲಕ ಮಡಿಕೇರಿ ಆಕಾಶವಾಣಿಯ ಮಹಿಳಾಲೋಕ ಮತ್ತು ಸ್ನೇಹ ಕಾವೇರಿ ವಿಭಾಗದ ಕನ್ನಡ ಮತ್ತು ಅರೆಭಾಷೆಯ ಹಲವಾರು ಕಾರ್ಯಕ್ರಮಗಳನ್ನು ಕೊಡುವುದರೊಂದಿಗೆ ಉದಯರಾಗಕ್ಕೆ ಅರೆಭಾಷೆಯ ಅತ್ಯುತ್ತಮ ಭಕ್ತಿಗೀತೆಗಳನ್ನು ರಚಿಸಿರುವುದಲ್ಲದೆ ಕೊಡವ ಭಾಷೆಯ ಗೀತೆ ಸಹ ಈಗ ವಾರಕ್ಕೊಮ್ಮೆ ಪ್ರಸಾರವಾಗುತ್ತಿದೆ.

ಇವರು ಸಂಗ್ರಹಿಸಿ ಬರೆದ "ಹತ್ತು ಕುಟುಂಬ ಹದಿನೆಂಟು ಗೋತ್ರ" ಗೌಡ ಜನಾಂಗದ ಸಂಸ್ಕೃತಿ ಪರಿಚಯದ ಸೋಬಾನೆ ಸಂಗ್ರಹ "ಹಸೆಮಣೆ" ಕೃತಿಗೆ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ 2006ರಲ್ಲಿ ಗೌರಮ್ಮ ದತ್ತಿ ಪ್ರಶಸ್ತಿ ಬಂದಿದೆ. ಕೊಡಗು ಜಿಲ್ಲೆಯ ಮಹಿಳಾ ಮುಖ್ಯ ಲೇಖಕಿಯರಲ್ಲಿ ಒಬ್ಬರೆಂದು ಪರಿಷತ್ತು ಪತ್ರಿಕಾಭವನದಲ್ಲಿ ಗೌರವಿಸಿದೆ. 2ನೇ ಕೃತಿ, ಕೊಡಗು ಗೌಡರ ಆಚರಣೆಗಳ ಸಂಗ್ರಹ "ಅಕ್ಷಯ" ಆಗಿನ ಮುಖ್ಯಮಂತ್ರಿ ಯಡಿಯೂರಪ್ಪನವರ ವೇದಿಕೆಯಲ್ಲಿ 2009ರಲ್ಲಿ ಕೊಡಗು ಗೌಡ ವಿದ್ಯಾ ಸಂಘದ ಶತಮಾನೋತ್ಸವದಲ್ಲಿ ಬಿಡುಗಡೆಗೊಂಡಿತು. ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆಯಿಂದ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ 2010ರಲ್ಲಿ ಜಾನಪದ ಕಲಾವಿದೆಯಾಗಿ ಸನ್ಮಾನಿತರಾದುದಲ್ಲದೆ, ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ 2011ರಂದು ಸಾಹಿತ್ಯ ಕ್ಷೇತ್ರದಲ್ಲಿ "ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯ ಪ್ರಶಸ್ತಿ", ಮಂಡ್ಯದ ಕವಿ ಕಾವ್ಯ ಮೇಳದಲ್ಲಿ "ಕಾವ್ಯಶ್ರೀ" ಪ್ರಶಸ್ತಿ 2011ರಲ್ಲಿ ಕನ್ನಡ ನಾಡು ನುಡಿ ಸೇವೆಗಾಗಿ ದ.ರಾ. ಬೇಂದ್ರೆ ಸಾಹಿತ್ಯೋತ್ಸವದಲ್ಲಿ "ಸುವರ್ಣ ಕರ್ನಾಟಕ ಸೇವಾ ಪ್ರಶಸ್ತಿಗೆ ಭಾಜನ" ಅಲ್ಲದೆ, ಕೊಡಗು ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 2011ರಲ್ಲಿ 4 ಪ್ರಶಸ್ತಿಗಳನ್ನು ಪಡೆದ ಕೀರ್ತಿ ಇವರದಾಗಿದ್ದು, ಸರಕಾರಿ ಪ್ರಾಥಮಿಕ ಶಾಲೆ ಬೆಟ್ಟಗೇರಿ ಶತಮಾನೋತ್ಸವದ ಸ್ಮರಣ ಸಂಚಿಕೆ "ಶತಸಂಭ್ರಮದ" 2012ರ ಸಂಪಾದಕಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಪಾಲೂರಿನ ಜೈತಪ್ಪ ಬೆಳ್ಯಪ್ಪನವರನ್ನು ವಿವಾಹವಾಗಿದ್ದು, ಮಡಿಕೇರಿ ನಗರದಲ್ಲಿ ನೆಲೆ ನಿಂತಿದ್ದಾರೆ. ಇಬ್ಬರು ಗಂಡು ಮಕ್ಕಳ ಸಂಸಾರ ಇವರದು.



**ಶ್ರೀ ಚೆರಿಯಮನೆ ಚಂದ್ರಶೇಖರ್**
ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಆಲೂರು ಸಿದ್ದಾಪುರ, ಸೋಮವಾರಪೇಟೆ ತಾಲೂಕು
ಮೊ : 9483834568

ಚೆರಿಯಮನೆ ಕೃಷ್ಣಪ್ಪ ಮತ್ತು ಮುತ್ತಮ್ಮ ದಂಪತಿಗಳ ಪುತ್ರನಾಗಿರುವ ಇವರು, ಪ್ರಾಥಮಿಕ ಮತ್ತು ಪ್ರೌಢ ಹಂತದ ವಿದ್ಯಾಭ್ಯಾಸವನ್ನು ಸೋಮವಾರಪೇಟೆ ಸರಕಾರಿ ಸ್ಕೂಲ್‌ನಲ್ಲಿಯೂ, ಪಿ.ಯು.ಸಿ. ವಿದ್ಯಾಭ್ಯಾಸವನ್ನು ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿಯೂ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ವಿಜ್ಞಾನದಲ್ಲಿ ಬಿ.ಎಸ್ಸಿ. ಪಡೆದಿರುತ್ತಾರೆ.

ಸಾರ್ವಜನಿಕ ಕ್ಷೇತ್ರ : ಐದು ವರ್ಷಗಳ ಪೂರ್ಣಾವಧಿ ಆಲೂರು ಗ್ರಾಮ ಪಂಚಾಯ್ತಿ ಚುನಾಯಿತ ಸದಸ್ಯರಾಗಿ ಕಾರ್ಯನಿರ್ವಹಿಸಿ ನಿಡ್ತ ಮಂಡಲ ಪಂಚಾಯ್ತಿಯ ಚುನಾಯಿತ ಸದಸ್ಯನಾಗಿ 5 ವರ್ಷಗಳ ಸೇವೆ ಸಲ್ಲಿಸಿ, ಬೇರೆ ಬೇರೆ ಅವಧಿಯಲ್ಲಿ ಆಲೂರು ಸಿದ್ದಾಪುರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷನಾಗಿ ಮತ್ತು ಕೆಲವು ವರ್ಷ ನಿರ್ದೇಶಕನಾಗಿ

ಸೇವೆ ಸಲ್ಲಿಸಿರುತ್ತಾರೆ. ತಾಲೂಕು ಪಂಚಾಯಿತ್ತಿಗಳ ರಚನೆಯಾದ ಚೊಚ್ಚಲ ತಾಲೂಕು ಪಂಚಾಯಿತ್ತಿಗೆ ಚುನಾಯಿತ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಪ್ರಸ್ತುತ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಇವರು ಮೂಲತಃ ಆಲೂರು ಸಿದ್ದಾಪುರ ಗ್ರಾಮದವರಾಗಿದ್ದು, ಕತ್ರಿಕೊಲ್ಲಿ ಕಾರ್ಯಪ್ಪ ಅವರ ಮಗಳಾದ ಕೆ. ರಾಣಿಯವರನ್ನು ವಿವಾಹವಾಗಿ ಇಬ್ಬರು ಗಂಡು ಮಕ್ಕಳಿದ್ದು, ಹಿರಿಮಗ ಮೇಜರ್ ಸಿ.ಸಿ. ನಿರಂಜನ್ ಇವರು, ಅಸಿಸ್ಟೆಂಟ್ ಕಮಿಷನರ್ ಆಫ್ ಕಸ್ಟಮ್ಸ್ (ಐ.ಆರ್.ಎಸ್) ಆಗಿ ಡೆಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರ ಪತ್ನಿ ಕೋಮಲ್ ಜಾ ಇವರೊಂದಿಗೆ ಡೆಲ್ಲಿಯಲ್ಲಿ ವಾಸವಾಗಿರುತ್ತಾರೆ. ಕಿರಿಯ ಮಗ ಮಧುಸೂದನ ಸಿ.ಸಿ. ಇವರು ಬಿ.ಎ. ಪದವಿ ಮಾಡಿದ್ದು ಮನೆಯಲ್ಲಿ ತಂದೆ - ತಾಯಿಯೊಂದಿಗೆ ಕೃಷಿಯಲ್ಲಿ ತೊಡಗಿಸಿಕೊಂಡಿರುತ್ತಾರೆ.



**ತುಂತಜೆ ವೆಂಕಟೇಶ್ (ಗಣೇಶ್)**
ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಬಿಳಿಗೇರಿ ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲೂಕು
ಚಲನವಾಣಿ : 9448128529

ವೆಂಕಟೇಶ್ (ಗಣೇಶ್) ಮೂಲತಃ ಮಡಿಕೇರಿ ತಾಲೂಕು, ಬಿಳಿಗೇರಿ ಗ್ರಾಮದ ತುಂತಜೆ ದಿವಂಗತ ರಾಮಪ್ಪ ಮತ್ತು ಪಾರ್ವತಿಯವರ ಹಿರಿಯ ಪುತ್ರನಾಗಿ 1957ರಲ್ಲಿ ಜನಿಸಿದರು.

1986ರಲ್ಲಿ ಅರುವತೊಕ್ಲು ಗ್ರಾಮದ ಕಡ್ಯದ ವೆಂಕಪ್ಪ ಮತ್ತು ಅಮ್ಮವ್ವನವರ ಎರಡನೆಯ ಪುತ್ರಿ ನೈನಾಳನ್ನು ವಿವಾಹವಾಗಿ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದು, ಮಗ ವಿದ್ಯಾಭ್ಯಾಸ ಮುಗಿಸಿ ಉದ್ಯೋಗದಲ್ಲಿರುದಲ್ಲದೆ, ಮಗಳು ಎಂ.ಬಿ.ಎ. ಓದುತ್ತಿದ್ದಾಳೆ.

1977ರಲ್ಲಿ ರಾಜಕೀಯ ಪ್ರವೇಶ ಮಾಡಿದ್ದು, 1982ರಲ್ಲಿ ಹಾಕತ್ತೂರಿನ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾಗಿದ್ದು, 1986ರಲ್ಲಿ ಬ್ಯಾಂಕಿನಲ್ಲಿ ಮರು ಆಯ್ಕೆಯಾಗಿ 1986 ರಿಂದ 1991ರವರೆಗೆ ಅಧ್ಯಕ್ಷನಾಗಿ ಉತ್ತಮ ಆಡಳಿತ ನೀಡಿರುವುದಲ್ಲದೆ, ಜಿಲ್ಲಾ ಮಟ್ಟದ ಉತ್ತಮ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ. 1986ರಲ್ಲಿ ಹಾಕತ್ತೂರು ಮಂಡಳ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದು ನಿರ್ದೇಶಕರಾಗಿ 5 ವರುಷ ಸೇವೆ ಸಲ್ಲಿಸಿರುತ್ತಾರೆ. 1991 ರಿಂದ 1997ರವರೆಗೆ ತಾಲೂಕು ಮಾರ್ಕೆಟಿಂಗ್ ಸೊಸೈಟಿ ಮೂರ್ನಾಡು ಈ ಸಂಸ್ಥೆಯಲ್ಲಿ ನಿರ್ದೇಶಕರಾಗಿಯೂ, ಐದು ವರ್ಷ ಉಪಾಧ್ಯಕ್ಷನಾಗಿಯೂ, ಎರಡು ಅವಧಿಯಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. 1995ರಲ್ಲಿ ಮಡಿಕೇರಿ ತಾಲೂಕು ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿಯಾಗಿ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. 1994 ರಿಂದ ಬಿಳಿಗೇರಿ ಗ್ರಾಮದ ಭಗವತಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿ, 1997ರಿಂದ ಮಡಿಕೇರಿ ತಾಲೂಕು ಮಾರ್ಕೆಟಿಂಗ್ ಸೊಸೈಟಿ (ಆರ್.ಎಂ.ಸಿ.) ಯಲ್ಲಿ ನಿರ್ದೇಶಕರಾಗಿ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. 1987 ರಿಂದ ತುಂತಜೆ ಕುಟುಂಬದ ಐನ್‌ಮನೆಯ ಅಧ್ಯಕ್ಷರಾಗಿ ಈವರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ.

1997 ರಿಂದ ಇಲ್ಲಿಯವರೆಗೆ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರಾಗಿ ಹಲವಾರು ಕಾರ್ಯಕ್ರಮಗಳನ್ನು ಅಂದರೆ ಕುಟುಂಬವಾರು ಕ್ರಿಕೆಟ್ ಪಂದ್ಯಾಟ, ಕುಟುಂಬವಾರು ವಾಲಿಬಾಲ್, ಥ್ರೋಬಾಲ್,

ಹಗ್ಗ ಜಗ್ಗಾಟ, ಕೆಸರು ಗದ್ದೆ ಕ್ರೀಡಾಕೂಟ, ಹುತ್ತರಿ, ಕೈಲುಮುಹೂರ್ತ ಸಂತೋಷಕೂಟ, ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಆಚಾರ ವಿಚಾರಗಳ ಬಗ್ಗೆ ಮುಖ್ಯಸ್ಥರನ್ನು ಸೇರಿಸಿ ಸಭೆ ನಡೆಸಿರುವುದಲ್ಲದೆ, 2010ರಲ್ಲಿ ಗುಡ್ಡೆಮನೆ ಅಪ್ಪಯ್ಯಗೌಡರ ಸ್ಮಾರಕ ಸಮಿತಿಯ ಅಧ್ಯಕ್ಷರಾಗಿ ಎರಡು ವರುಷದಲ್ಲಿ ಅವರ ಪ್ರತಿಮೆಯನ್ನು ನಿರ್ಮಿಸಿ ನಿಲ್ಲಿಸಿದ ಕೀರ್ತಿ ಇವರದ್ದಾಗಿದೆ.

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ಸರಕಾರದ ವತಿಯಿಂದ ಪಡೆಯುವಲ್ಲಿ ಹಲವಾರು ವರ್ಷಗಳಿಂದ ಇವರ ನಾಯಕತ್ವದಲ್ಲಿ ಸರಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತ ಬಂದು ಅಕಾಡೆಮಿಯನ್ನು ಪಡೆಯುವಲ್ಲಿ ಯಶಸ್ವಿಯಾಗಿರುವುದು ಅಲ್ಲದೆ, ಇದರಲ್ಲಿ ಹಾಲಿ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.



**ಲೋಕಯ್ಯಗೌಡ ಕೆ.**
ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ
ಮನೆತನ : ಕಲ್ಲುಗುಂಡಿ, ವಾಸ :ಗೂನಡ್ಕ ಬೈಲೆ, ಖಾಯಂ ವಾಸ : ಮಂಗಳೂರು
ಮೊಬೈಲ್: 94494 71044

ಶ್ರೀ ಲೋಕಯ್ಯ ಗೌಡರು 64 ವರ್ಷ ಪ್ರಾಯದವರಾಗಿದ್ದು,1976 ರಿಂದ 2005ರ ತನಕ ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾಗಿ 2005ರಲ್ಲಿ ಅಧ್ಯಕ್ಷರಾಗಿ ನಿವೃತ್ತಿಯಾದರು. ಮಂಗಳೂರು ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘದಲ್ಲಿ 1982 ರಿಂದ ನಿರಂತರ ಸೇವೆಯ ಸದಸ್ಯರಾಗಿ, ಸಹ ಕಾರ್ಯದರ್ಶಿಯಾಗಿ, ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದು, ಅಲ್ಲದೆ ಪ್ರಸಕ್ತ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಣೆಯ ಈ ಸಂದರ್ಭದಲ್ಲಿ ಸಂಘದ 4 ಮಹಡಿಗಳ ಕಟ್ಟಡ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ದ.ಕ. ಗೌಡ ವಿದ್ಯಾಸಂಘದ ಪ್ರಸಕ್ತ ನಿರ್ದೇಶಕರಲ್ಲದೆ, ಮಂಗಳೂರು ಮಹಾನಗರ ಪಾಲಿಕೆಯ ನೌಕರರ ಸಹಕಾರಿ ಸಂಘದಲ್ಲಿ 2 ವರ್ಷ ನಿರ್ದೇಶಕರಾಗಿ, $7^1/_2$ ವರ್ಷ ಗೌರವ ಕಾರ್ಯದರ್ಶಿಯಾಗಿ ನಂತರ $3^1/_2$ ವರ್ಷ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿರುತ್ತಾರೆ. ಸಧ್ಯ ಅರೆಭಾಷೆ ಅಕಾಡೆಮಿ ಸದಸ್ಯರಾಗಿ ಆಯ್ಕೆ.




**ಶ್ರೀ ತಳೂರು ಕಿಶೋರ್‌ಕುಮಾರ್**
ಅರ್ವತ್ತೊಕ್ಲು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲೂಕು
ಚಲನವಾಣಿ : 94492 02082

ಶ್ರೀ ತಳೂರು ಕಿಶೋರ್‌ಕುಮಾರ್‌ನವರು ಅಚ್ಚಯ್ಯ ಮತ್ತು ಬೊಳ್ಳವ್ವನವರ ಮೂರನೇ ಮಗನಾಗಿ 2.10.1960 ರಲ್ಲಿ ಅರ್ವತ್ತೊಕ್ಲು ಗ್ರಾಮದಲ್ಲಿ ಜನಿಸಿದರು. ಎಂ.ಎ. ಪದವಿಯನ್ನು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಪಡೆದಿರುತ್ತಾರೆ.

ಬೆಟ್ಟಗೇರಿ ಉದಯ ವಿದ್ಯಾಸಂಸ್ಥೆಯಲ್ಲಿ ಅಧ್ಯಕ್ಷರಾಗಿ ಹದಿನಾಲ್ಕು ವರ್ಷ ಸೇವೆ ಸಲ್ಲಿಸಿ, ಹಾಲಿ ನಿರ್ದೇಶಕನಾಗಿರುತ್ತಾರೆ. ಸಹಕಾರ ಕ್ಷೇತ್ರದಲ್ಲಿ ಹಾಲಿ ಬೆಟ್ಟಗೇರಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದಲ್ಲಿ ಅಧ್ಯಕ್ಷರಾಗಿ ದುಡಿಯುತ್ತಿರುವುದು ಅಲ್ಲದೆ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕನಾಗಿ ಮತ್ತು ಕಾಫಿ ಬೆಳೆಗಾರರ

ಸಹಕಾರ ಸಂಘದ ನಿರ್ದೇಶಕರಾಗಿ, ಸಂಪಾಜೆಯ ಪಯಸ್ವಿನಿ ಸಹಕಾರ ಸಂಘದ ನಿರ್ದೇಶಕನಾಗಿ, ಮಡಿಕೇರಿ ತಾಲೋಕಿನ ಕೃಷಿ ಇಲಾಖೆಯಲ್ಲಿ ನಿರ್ದೇಶಕನಾಗಿ, ನಾಪೋಕ್ಲು ಸರಕಾರಿ ಪದವಿ ಕಾಲೇಜಿನ ನಿರ್ದೇಶಕರಾಗಿಯೂ ಸಹ ದುಡಿಯುತ್ತಿರುವರು.

ಅಲ್ಲದೆ, ಈ ಹಿಂದೆ ಭಾರತ ಸರಕಾರದ ಕೇಂದ್ರ ಜವಳಿ ನಿಗಮದ ನಿರ್ದೇಶಕರರಾಗಿ, ದೂರವಾಣಿ ಇಲಾಖೆಯ ಸಲಹಾ ಸಮಿತಿ ಸದಸ್ಯರಾಗಿ, ಮಡಿಕೇರಿ ತಾಲೋಕಿನ ತಾಲೋಕು ಪಂಚಾಯಿತ್ತಿ ಅಧ್ಯಕ್ಷರಾಗಿ, ಹಾಲಿ ವೀರಾಜಪೇಟೆ ವಿಧಾನ ಸಭಾ ಕ್ಷೇತ್ರದ ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವರು. ಪ್ರಸ್ತುತ ಸುಳ್ಯದ ಶಾರದ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿರುವ ಸ್ವರ್ಣಕಲಾರನ್ನು ಲಗ್ನವಾಗಿ ಒಬ್ಬ ಸುಪುತ್ರನನ್ನು ಪಡೆದಿರುತ್ತಾರೆ.



**ಶ್ರೀ ಇಡ್ಯಡ್ಕ ಮೋಹನಗೌಡ**
ಸದಸ್ಯರು, ನ್ಯಾಯವಾದಿ, ಬಾರೆಂಗಳ ಗುತ್ತ್, ಚಾರ್ವಾಕ
ಪುತ್ತೂರು ತಾಲೂಕು, ದಕ್ಷಿಣ ಕನ್ನಡ, ಮೊಬೈಲ್ : 9448445868

ದಿನಾಂಕ 13.9.1958 ರಲ್ಲಿ ದ. ಕ. ಜಿಲ್ಲೆಯ ಸುಳ್ಯ ತಾಲೂಕು ಪಂಜೆತ್ತಾಡಿ ಗ್ರಾಮದ ಬಾಬ್ಲು ಬೆಟ್ಟು ತಿಮ್ಮಪ್ಪಗೌಡ ಮತ್ತು ಚಿನ್ನಮ್ಮ ದಂಪತಿಗಳ ಮಗನಾಗಿ ಜನಿಸಿದ ಇವರು ಓದಿದ್ದು ಬಿ.ಎ., ಎಲ್.ಎಲ್.ಬಿ. ಹಾಲಿ ಬೆಂಗಳೂರಿನಲ್ಲಿ ನ್ಯಾಯವಾದಿ.

ಪುತ್ತೂರು ತಾಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷರಾಗಿ 12 ವರ್ಷದ ಸೇವೆ. ಸದ್ಯ ಇದರ ಗೌರವಾಧ್ಯಕ್ಷರಾಗಿ ಕಾರ್ಯ ತತ್ಪರ. ಪುತ್ತೂರು ತಾಲೂಕು ಚಾರ್ವಾಕ ಶ್ರೀ ಕಪಿಲೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿದ್ದಾರೆ. ಮೋಹನಗೌಡ ಇಬ್ಬರು ಮಕ್ಕಳನ್ನು ಪಡೆದ ಚಿಕ್ಕ ಸಂಸಾರವಾಗಿದೆ.



**ಅಮೆ ಪಾಲಾಕ್ಷ**
ಸಹ ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ನಂ. 3-41, "ಚಂಪಾ", ಗಣಪತಿ ಬೀದಿ, ಮಡಿಕೇರಿ
ಚಲನವಾಣಿ : 9449767424

ಅಮೆ ಕೃಷ್ಣಪ್ಪ ಮತ್ತು ಶ್ರೀಮತಿ ಸರೋಜಮ್ಮ ದಂಪತಿಯ ತೃತೀಯ ಪುತ್ರ ಅಮೆ ಪಾಲಾಕ್ಷ ಇವರಿಗೆ ಇದೀಗ 62 ವರ್ಷ ಪ್ರಾಯ. ಬಿ.ಕಾಂ. ಪದವೀಧರರು. ಕೂರನ ಕುಟುಂಬದ ಚಂದ್ರಮ್ಮ ಇವರ ಧರ್ಮಪತ್ನಿ. ವೈದ್ಯೆಯಾಗಿರುವ ಪುತ್ರಿ ಶ್ರೀಮತಿ ಅರ್ಚನ ಸುಮನ್ ಹಾಗೂ ಪುತ್ರ ದೀಪಕ್ ಇಂಜಿನಿಯರ್ ಇವರನ್ನೊಳಗೊಂಡ ಸಂತೃಪ್ತ ಬದುಕು.

ಹವ್ಯಾಸ ಪತ್ರಕರ್ತರೂ ಆಗಿರುವ ಇವರು ಜಿಲ್ಲೆಯ ಮುಂಚೂಣಿಯಲ್ಲಿರುವ "ಶಕ್ತಿ" ದಿನಪತ್ರಿಕೆಯ ಉಪಸಂಪಾದಕರಾಗಿ, ತಮ್ಮ ಸ್ವಂತ "ಸೂಜಿ" ಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿ ಅನುಭವ ಗಳಿಸಿದ್ದಾರೆ.

ಸಾಹಿತ್ಯ ಕ್ಷೇತ್ರದತ್ತ ಆಕರ್ಷಿತರಾಗಿರುವ ಇವರು, ತಮ್ಮ ವಿದ್ಯಾರ್ಥಿ ದಿನಗಳಲ್ಲಿ ಬರವಣಿಗೆಯ ಜೊತೆಗೆ ಹಲವಾರು ನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ. ಚಲನಚಿತ್ರ ನಟ ವಿ. ರಾಜಾನಂದ್‌ರವರ ವಿಜಯಶ್ರೀ ನಿಕೇತನ

ಎಂಬ ಕನ್ನಡ ಸಂಘ ಗರಡಿಯಲ್ಲಿ ಪಳಗಿದ ಇವರು ಅಂತರ ಕಾಲೇಜು ಮಟ್ಟದ ನಾಟಕ ಸ್ಪರ್ಧೆಯಲ್ಲಿ "ಅಮೃತ ಧಾರೆ" ಎಂಬ ನಾಟಕವನ್ನು ಅಭಿನಯಿಸಿದ್ದಲ್ಲದೆ, ಪ್ರದರ್ಶಿಸಿ, ನಿರ್ದೇಶಿಸಿ, ಅತ್ಯುತ್ತಮ ನಿರ್ದೇಶಕರು ಹಾಗೂ ವೈಯಕ್ತಿಕ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಅಖಿಲ ಕರ್ನಾಟಕ ಮಟ್ಟದ ನಾಟಕ ಸ್ಪರ್ಧೆಯಲ್ಲಿ "ಭಗವಾನ್ ಭಾರ್ಗವ" ಎಂಬ ನಟ ರಾಜಾನಂದ್‌ರವರ ನಾಟಕದಲ್ಲಿ ದಶರಥನ ಪಾತ್ರ ನಿರ್ವಹಿಸಿದ್ದು, ಈ ನಾಟಕಕ್ಕೆ ಪ್ರಥಮ ಬಹುಮಾನ ಬಂದಿರುತ್ತದೆ. ಈ ನಾಟಕ ಪುಸ್ತಕವನ್ನು ಮುದ್ರಿಸಿ, ಪ್ರಕಾಶಿಸಿದ್ದಾರೆ.

ಹಲವಾರು ಕವನಗಳನ್ನು ರಚಿಸಿರುವ ಇವರು ಮಾತೆ ಶ್ರೀ ಕಾವೇರಿ ಬಗ್ಗೆ ಬರೆದಿರುವ ಅರೆಭಾಷೆ ಕವನವೊಂದು ಮಡಿಕೇರಿ ಆಕಾಶವಾಣಿಯಲ್ಲಿ ಆಗಾಗ್ಗೆ ಪ್ರಸಾರಗೊಳ್ಳುತ್ತಿದೆ. ಅರೆಭಾಷಾ ಅಕಾಡೆಮಿಯ ಉದ್ಘಾಟನಾ ಸಮಾರಂಭಕ್ಕೆ ರಚಿಸಿದ "ಉದಯಗೀತೆ" ವೇದಿಕೆಯಲ್ಲಿ ಹಾಡಲ್ಪಟ್ಟು, ಮೆಚ್ಚುಗೆಗೆ ಪಾತ್ರವಾಗಿದೆ. ಕೊಡಗು ಗೌಡ ವಿದ್ಯಾಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಹಾಡಿದ "ಸ್ವಾಗತ ಗೀತೆ " ಕೂಡ ಇವರ ರಚನೆಯಾಗಿರುತ್ತದೆ.

ಪ್ರಸ್ತುತ ಭಾರತ ಸೇವಾದಳದ ಕೇಂದ್ರ ಸಮಿತಿ ಸದಸ್ಯರಾಗಿರುವ ಇವರು, ಕೂಡ ಜಿಲ್ಲಾ ಪತ್ರಕರ್ತರ ಸಂಘದ ಖಜಾಂಚಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಮಡಿಕೇರಿ ನಗರಾಭಿವೃಧಿ ಪ್ರಾಧಿಕಾರ (ಮೂಡಾ)ದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಇದೀಗ ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ನಿರ್ದೇಶಕರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಉಸ್ತುವಾರಿ ಸಮಿತಿ ಕಾರ್ಯದರ್ಶಿಯಾಗಿದ್ದಾರೆ. ಕೊಡಗು ಗೌಡ ವಿದ್ಯಾ ಸಂಘದ ನಿರ್ದೇಶಕರಾಗಿ ಜನಾಂಗದ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ.



**ಶ್ರೀ ತೇನನ ರಾಜೇಶ್**
ಸಹ ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
"ಅಲ್ಫಾ ಮ್ಯಾನೋರ್" 39/1-9&10, ಕೃಷ್ಣ ಬಡಾವಣೆ, ಹುಳಿಮಾವು
ಬೆಂಗಳೂರು - 560076     ಚಲನವಾಣಿ : 9845519241

ತೇನನ ರಾಜೇಶ್‌ರವರ ಜನನ ಕೊಡಗಿನ ಗಾಳಿಬೀಡು ಗ್ರಾಮದಲ್ಲಿ 19.12.1974ರಲ್ಲಿ ಜನಿಸಿದರು. ಇವರ ತಂದೆ ತೇನನ ಸೋಮಣ್ಣ ಮತ್ತು ತಾಯಿ ಲಲಿತಾರವರು. ಬಾಲ್ಯದಿಂದಲೇ ವಿದ್ಯಾರ್ಥಿನಿಲಯದಲ್ಲಿ ಬೆಳೆದ ಇವರು 1997ರಲ್ಲಿ ಎಂ.ಎಸ್ಸಿ. ಸ್ನಾತಕೋತರ ಪದವಿಯನ್ನು ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಡೆದರು. ಇವರು ಫುಟ್ಬಾಲ್ ಆಟಗಾರರಾಗಿದ್ದು, ಶ್ರೀ ಅಮೆ ಕೆ. ಶಿವರಾಯ್ ಮತ್ತು ಚಂದ್ರಪ್ರಭಾ ದಂಪತಿಗಳ ಮಗಳಾದ ಡಾ. ಅಶ್ವಿನಿಯವರನ್ನು ವಿವಾಹವಾಗಿದ್ದು, ಇಬ್ಬರು ಮಕ್ಕಳನ್ನು ಪಡೆದಿರುತ್ತಾರೆ.

1997 ರಿಂದ 2033 ರವರೆಗೆ ಜರ್ಮನಿಯ ಬಹುರಾಷ್ಟ್ರೀಯ ಕಂಪೆನಿಗಳಲ್ಲೊಂದಾದ ಮೆರಕ್ ಲಿಮಿಟೆಡ್‌ನಲ್ಲಿ ಸೇವೆ ಸಲ್ಲಿಸಿ 2003ರಲ್ಲಿ ತಮ್ಮದೇ ಆದ "ಆಲ್ಫಾ ಗ್ರೂಫ್" ಕಂಪೆನಿಯನ್ನು ಸ್ಥಾಪಿಸಿ ಹೆಚ್ಚಿನ ಬೆಳವಣಿಗೆಗಾಗಿ 2004 ರಿಂದ ಪಾಲುದಾರರಾಗಿ ಹೈದರಬಾದ್, ಚೆನ್ನೈ ಮತ್ತು ಮುಂಬೈನಲ್ಲಿ ಶಾಖೆಗಳನ್ನು ತೆರೆದುದಲ್ಲದೆ, ಈ ಸಂಸ್ಥೆಯು "ಫಾರ್ಮಾಸ್ಯುಟಿಕಲ್ ಕೆಮಿಕಲ್ಸ್" ಪ್ರಯೋಗಾಲಯದ ಉಪಕರಣಗಳು ಮತ್ತು ಫಾರ್ಮಸ್ಯುಟಿಕಲ್ ಸಂಸ್ಥೆಗಳಿಗೆ ಬೇಕಾಗುವ ವಿವಿಧ ವಸ್ತುಗಳನ್ನು ಇತರ ದೇಶಗಳಿಂದ ಆಮದುಮಾಡಿ ಭಾರತವಲ್ಲದೆ ವಿಯೆಟ್ನಾಂ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ದೇಶಗಳಿಗೆ ರಫ್ತು ಮಾಡುವ ಸಂಸ್ಥೆಯಾಗಿ ಹೊರ ಹೊಮ್ಮಿ ಸುಮಾರು 50 ರಿಂದ 60

ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿದೆ. ಇವರ ಸಂಸ್ಥೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಸದಸ್ಯರಾಗಿ ಹಲವಾರು ದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಪಾರ ಅನುಭವ ಇರುತ್ತದೆ.

1994-95ರ ಪುತ್ತೂರು ತಾಲೂಕು ಗೌಡ ವಿದ್ಯಾಸಂಘದ ಗೌರವ ಕಾರ್ಯದರ್ಶಿಯಾಗಿದ್ದು, 1997 ರಿಂದ 2008ರವರೆಗೆ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಬೆಂಗಳೂರು ಇದರ ನಿರ್ದೇಶಕರಾಗಿ ನಂತರ 2008 ರಿಂದ ಸಮಾಜದ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಕಾಲ್ಚೆಂಡು ತಂಡದ ನಾಯಕ ಆಟಗಾರನಾಗಿದ್ದು, ಕಾಲೇಜು ಜೀವನದಲ್ಲಿ ಎನ್.ಸಿ.ಸಿ. "ಸಿ" ದೃಢೀಕರಣ ಪಡೆದಿದ್ದು ಅಲ್ಲದೆ, ಎನ್.ಸಿ.ಸಿ. ಸೀನಿಯರ್ ಅಂಡರ್ ಆಫೀಸರ್ ಆಗಿ ಸೇವೆ ಸಲ್ಲಿಸಿರುತ್ತಾರೆ. ಹಾಲಿ ಅಕಾಡೆಮಿ ಸಹ ಸದಸ್ಯನಾಗಿ ಆಯ್ಕೆಯಾಗಿದ್ದಾರೆ.



**ಶ್ರೀಮತಿ ತೆಕ್ಕಡೆ ಶೋಭಾ ಮೋಹನ್**
ಸಹ ಸದಸ್ಯರು, ಕರ್ನಾಟಕ ಅರೆಭಾಷೆ ಮತ್ತು ಸಾಹಿತ್ಯ ಅಕಾಡೆಮಿ
ಹೊದ್ದೂರು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲೂಕು
ಚಲನವಾಣಿ : 94494 02260

ತೆಕ್ಕಡೆ ಶೋಭಾ ಮೋಹನ್‌ನವರು ತೆಕ್ಕಡೆ ಮೋಹನ್‌ನವರ ಪತ್ನಿ. ಇವರು 22.2.1968ರಲ್ಲಿ ಜನಿಸಿದ್ದಾರೆ. ಗೃಹಿಣಿ ಶ್ರೀಯುತೆ ಬಿ.ಕಾಂ., ಎ.ಎಂ.ಎಫ್.ಐ., ಕಂಪ್ಯೂಟರ್ ಟ್ಯಾಲಿ ಕಲಿತಿರುವರು.

ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಇವರು ಭಾರತೀಯ ಜೀವ ವಿಮಾ ನಿಗಮದ ಮ್ಯೂಚಲ್ ಫಂಡ್‌ನ ಸಲಹೆಗಾರಳಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಮೂರ್ನಾಡಿನಲ್ಲಿ ಒಂದು ಸಂಘವನ್ನು ಸ್ಥಾಪಿಸಿಕೊಂಡು ಅದರ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಇವರು ತದನಂತರ 2006ರಿಂದ ರಾಜಕೀಯಕ್ಕೆ ಪ್ರವೇಶ, 2006 ರಿಂದ 2011ರವರೆಗೆ ಮಡಿಕೇರಿ ತಾಲೂಕು ಪಂಚಾಯಿತಿ ಸದಸ್ಯಳಾಗಿ ಸೇವೆ ಸಲ್ಲಿಸಿರುತ್ತಾರೆ.

2009 ರಿಂದ 2011ರವರೆಗೆ ಕನ್ನಡ ಸಾಹಿತ್ಯ ಪರಿಷತ್‌ನ ಮೂರ್ನಾಡ್ ಹೋಬಳಿ ಘಟಕದ ಸಲಹೆ ಸಮಿತಿ ಸದಸ್ಯಳಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಸಮಿತಿಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯಳಾಗಿ ಸೇವೆ ಸಲ್ಲಿಸುತ್ತಿರುವರು. 2009ರಲ್ಲಿ ನಡೆದ ಗೌಡ ವಿದ್ಯಾಸಂಘದ ಶತಮಾನೋತ್ಸವ ಸಮಿತಿಯಲ್ಲಿ ಹಣಕಾಸು ಸಮಿತಿಯ ಸದಸ್ಯಳಾಗಿ ಕಾರ್ಯ ನಿರ್ವಹಿಸಿರುವ ಇವರು ಈಗ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿಯ ಸಹ ಸದಸ್ಯರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀ ಪಟ್ಟಡ ಮುತ್ತಂಣ ಪ್ರಭಾಕರ್**

ಸಂಪಾದಕರು, ಸುರಗಿ ತ್ರೈಮಾಸಿಕ ಪತ್ರಿಕೆ
ಅವಂದೂರು ಗ್ರಾಮ ಮತ್ತು ಅಂಚೆ, ಮಡಿಕೇರಿ - 571 201
ದೂರವಾಣಿ : 08272 - 245644
ಚಲನವಾಣಿ : 94490 35449

ಶ್ರೀ ಪಟ್ಟಡ ಮುತ್ತಂಣ ಪ್ರಭಾಕರ್ ಇವರು ಮಡಿಕೇರಿ ತಾಲೂಕು, ಅವಂದೂರು ಗ್ರಾಮದಲ್ಲಿ 10-6-1949ರಲ್ಲಿ ಜನಿಸಿದರು. ಇವರ ತಂದೆ ಮುತ್ತಂಣ, ತಾಯಿ ನೀಲಮ್ಮನವರು. ಶ್ರೀಯುತರು ತಮ್ಮ ವಿದ್ಯಾಭ್ಯಾಸವನ್ನು

ಬೆಟ್ಟಗೇರಿ ಶಾಲೆಯಲ್ಲಿಯೂ, ನಂತರ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗಲೇ 1968ರಲ್ಲಿ ಭಾರತೀಯ ವಾಯುದಳಕ್ಕೆ ಸೇರ್ಪಡೆಗೊಂಡು, 1983ರಲ್ಲಿ ನಿವೃತ್ತಿಯಾಗಿ 1985ರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ 30.6.2009ರಲ್ಲಿ ನಿವೃತ್ತಿಯಾದರು. 1971ರ ಇಂಡೋ-ಪಾಕ್ ಸಮರದಲ್ಲಿ ಭಾಗವಹಿಸಿದ್ದ ಇವರು, 1977ರಲ್ಲಿ ಕರ್ಣಯ್ಯನ ಚಿಣ್ಣಪ್ಪನವರ ಕೊನೆಯ ಪುತ್ರಿ ಶೀಲಾಮಣಿಯನ್ನು ಲಗ್ನವಾಗಿ ಒಬ್ಬ ಪುತ್ರ ಮತ್ತು ಪುತ್ರಿಯನ್ನು ಪಡೆದಿರುತ್ತಾರೆ.

**ಶ್ರೀಯುತರ ಸಾಧನೆ :** 1983 ರಿಂದ 2000 ಇಸವಿಯ ತನಕ 17 ವರ್ಷಗಳ ಕಾಲ ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ ಇಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. 1976ರಲ್ಲಿ ತಮ್ಮ ಮಾತೋಶ್ರೀ ಪಟ್ಟಡ ನೀಲಮ್ಮನವರ ಹೆಸರಿನಲ್ಲಿ ವಿದ್ಯಾರ್ಥಿ ವೇತನವನ್ನು ಕೊಡಗು ಗೌಡ ವಿದ್ಯಾ ಸಂಘದ ಸುಪರ್ದಿಗೆ ನೀಡಿ, ವಿದ್ಯಾರ್ಥಿ ವೇತನ ನಿಧಿಯ ಮೂಲ ಸ್ಥಾಪಕರಾಗಿದ್ದಾರೆ. 1994 ರಲ್ಲಿ "ನನ್ನ ಕನಸಿನ ಮಡಿಕೇರಿ" ಎಂಬ ಉಪಯುಕ್ತ ಪುಸ್ತಕವನ್ನು ಬರೆದು ಕನ್ನಡ ಸ್ವಾರಸ್ವತ ಲೋಕಕ್ಕೆ ಅರ್ಪಿಸಿದ್ದಾರೆ. 1986ರಲ್ಲಿ ಮಂಡ್ಯ ನಗರದಲ್ಲಿ ಅರೆಬಾಸಿಕರ ಸಂಘಟನೆಯಾಗಿ "ಸಂತೋಷ ಕೂಟ"ವನ್ನು ಸ್ಥಾಪಿಸಿ, 1989ರಲ್ಲಿ ಮಂಡ್ಯ ಜಿಲ್ಲೆಯ ತೂಬಿನಕೆರೆ ಸಮೀಪ ಸೈನಿಕ ನಗರ ನಿರ್ಮಿಸಿ, ಜಿಲ್ಲೆಯ ಸೈನಿಕ ಮತ್ತು ಅವರ ಅವಲಂಬಿತರಿಗೆ ಸುಮಾರು 200 ನಿವೇಶನಗಳನ್ನು ಹಂಚಿದಲ್ಲದೆ, ಸೈನಿಕ ನಗರದ ಸ್ಥಾಪಕರೂ ಆದ ಶ್ರೀಯುತರು ಸೈನಿಕ ನಗರ ನಿರ್ಮಿಸುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. 1995 ರಲ್ಲಿ ಮಂಡ್ಯದ ಸೈನಿಕ ನಗರದ "ಮಾಜಿ ಸೈನಿಕರ ವಿದ್ಯಾಸಂಸ್ಥೆ"ಯ ಸ್ಥಾಪಕರಾಗಿ, ಮಾಜಿ ಸೈನಿಕರ ನರ್ಸರಿ ಸ್ಕೂಲ್‌ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸೇವೆಯನ್ನು ಸ್ಮರಿಸಿ ಮಂಡ್ಯ ಜಿಲ್ಲೆಯ ಗ್ರಾಮ ಬೆಳಕು-ಸಾಂಸ್ಕೃತಿಕ ವೇದಿಕೆ ಮತ್ತು ಮಂಡ್ಯ ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಸನ್ಮಾನಿಸಲ್ಪಟ್ಟಿದ್ದಾರೆ.

ಕೊಡಗು ಗೌಡ ಅಕಾಡೆಮಿ ಮಡಿಕೇರಿ, ಗೌಡ ಸಮಾಜ ವಿರಾಜಪೇಟೆ, ಕೊಡಗು ಗೌಡ ಮಾಜಿ ಸೈನಿಕರ ಸಂಘ, ಮೈಸೂರು, ಅರೆಭಾಷೆಯ ಸಾಂಸ್ಕೃತಿಕ ಸಮಿತಿ ಮೈಸೂರು, ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಮಹಿಳಾ ಒಕ್ಕೂಟ ಮೈಸೂರು ಇವುಗಳ ಸ್ಥಾಪನೆಗೆ ಮೂಲ ಪ್ರೇರಕರಾಗಿದ್ದಾರೆ. 1987ರಿಂದಲೂ ಮುಖತಃ ಮತ್ತು ಸಂಗಾತಿ ಪತ್ರಿಕೆಯ ಮೂಲಕ ಸಂಪರ್ಕವಿರಿಸಿದ ಫಲವಾಗಿ ಇಂದುಗೌಡರ ಬಾಸೆ "ಅರೆಬಾಷೆ"ಯಲ್ಲಿ ಆಕಾಶವಾಣಿ ಮಡಿಕೇರಿಯಲ್ಲಿ ಸುದ್ದಿ ಬಿತ್ತರವಾಗಲೂ ಕಾರಣರಾಗಿದ್ದಾರೆ.

1997ರಲ್ಲಿ "ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆಯ ಗೌರವ ಸಂಪಾದಕ ಮತ್ತು ವ್ಯವಸ್ಥಾಪಕರಾಗಿಯೂ 88 ತಿಂಗಳು ಸತತವಾಗಿ ಮುನ್ನಡೆಸಿದ್ದಾರೆ. ಅಲ್ಲದೆ ಮೈಸೂರು ಗೌಡ ಸಮಾಜದ ಖಜಾಂಚಿಯಾಗಿ, ಮೈಸೂರಿನ ವಿಜಯ ನಗರದ 4ನೇ ಹಂತದ ನಿವಾಸಿಗಳ ಮತ್ತು ನಿವೇಶನದಾರರ ಸಂಘದ ಖಜಾಂಚಿಯಾಗಿ ಹಾಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, 2009ರ ಮಾರ್ಚ್ ತಿಂಗಳಲ್ಲಿ ನಡೆದ ಕೊಡಗು ಗೌಡ ವಿದ್ಯಾ ಸಂಘ (ರಿ.) ಮಡಿಕೇರಿ ಇದರ ಶತಮಾನೋತ್ಸವ ಸಂದರ್ಭದಲ್ಲಿ "ಕದಿರು"ಸ್ಮರಣ ಸಂಚಿಕೆಯ ಗೌರವ ಸಂಪಾದಕರಾಗಿಯೂ 2012ರಲ್ಲಿ ಬೆಟ್ಟಗೇರಿ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಶತಮಾನೋತ್ಸವದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ದುಡಿದಿದ್ದಾರೆ. ಅಕಾಡೆಮಿ ಹೊರತರುವ "ಸುರಗಿ ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

# ಗೌಡ ಕನ್ನಡ / ಅರೆಬಾಸೆ



*ಲೇಖಕರು :* **ಪ್ರೊ. ಕೆ. ಕುಶಾಲಪ್ಪ ಗೌಡ**

1. ವ್ಯಾಪ್ತಿ- ಪ್ರದೇಶ

ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವ ಭಾಗ, ಕೇರಳಕ್ಕೆ ಸೇರಿದ ಕಾಸರಗೋಡು ಜಿಲ್ಲೆಯ ಪೂರ್ವಭಾಗ, ಕೊಡಗು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ತಮ್ಮದೇ ಆದ ವಿಶಿಷ್ಟ ಸಂಪ್ರದಾಯ ಮತ್ತು ಕುಲಧರ್ಮವನ್ನು ಆಚರಿಸುತ್ತಿರುವ ಸಭ್ಯ ಕೃಷಿಕರೂ, ಶ್ರಮಜೀವಿಗಳೂ ಆದ ಜನಾಂಗವೇ ಗೌಡರೆಂದು ಹೆಸರು ಪಡೆದವರು. ಇವರು ವಲಸೆ ಬಂದವರೇ? ಎಲ್ಲಿಂದ ಬಂದರು? 'ಗೌಡ' ಪದದ ಅರ್ಥವೇನು? ಎಂದು ಸ್ಪಷ್ಟವಾಗಿ ಹೇಳಲು ಆಧಾರಗಳೇನೂ ಇಲ್ಲ. ಕೆಲವರು ಊಹಾಮಾತ್ರದಿಂದ ಕೆಲವು ಅಭಿಪ್ರಾಯಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಆ ಪ್ರಕಾರ ಇವರು ಐಗೂರು ಸೀಮೆಯಿಂದ (ಸಕಲೇಶಪುರದ ಸಮೀಪ) ಪಶ್ಚಿಮಾಭಿಮುಖವಾಗಿ ಹೊರಟು ಗಟ್ಟವಿಳಿದು ಬಂದು ಒಂದು ಶಾಖೆ ಪಶ್ಚಿಮಾಭಿಮುಖವಾಗಿ ಕೊಡಗು ಜಿಲ್ಲೆಗೆ ಹರಡಿಕೊಂಡರು. ತಾವು ನೆಲಸಿದ ಜನವಸತಿಯಿಲ್ಲದೆಡೆ ಕಾಡನ್ನು ಕಡಿದು ಕೃಷಿಭೂಮಿಯನ್ನಾಗಿ ಮಾಡಿ, ಬೇಸಾಯ ಮಾಡಲು ತೊಡಗಿದರು. ಕಾಲಕ್ರಮದಲ್ಲಿ ಭೂಮಾಲಿಕರಾದರು. ದಕ್ಷಿಣ ಕನ್ನಡ ಭಾಗದಲ್ಲಿ ಮೊದಲೇ ಜನವಸತಿಯಿದ್ದು, ಸ್ಥಳೀಯರೇ ಭೂಮಾಲೀಕರಾಗಿದ್ದುದರಿಂದ ಆಗಂತುಕರಾಗಿ ಬಂದವರಿಗೆ ಮೇಲೆ ಹೇಳಿದಂತೆ ಅನೇಕರಿಗೆ ಸ್ವತಂತ್ರವಾದ ಭೂಮಾಲಿಕರಾಗುವ ಸೌಲಭ್ಯ ದೊರೆಯಲಿಲ್ಲ. ಅವರು ದೊಡ್ಡ ದೊಡ್ಡ ಹಿಡುವಳಿಗಳಿದ್ದ ಧನಿಕರಿಂದ ಭೂಮಿಯನ್ನು ಗೇಣಿಗೆ ಪಡೆದು ಕೃಷಿ ಕಾರ್ಯಗಳನ್ನು ಮಾಡುವವರಾದರು. ಬಹಳ ಕಾಲದವರೆಗೆ ಈ ವ್ಯವಸ್ಥೆಯೇ ನಡೆಯಿತು. ಕೊಡಗಿನ ಅರಸರು ದೂರದಿಂದ ಬಂದ ಜನರು ಕಾಡನ್ನು ಕಡಿದು ಭೂಮಿಯನ್ನು ಬೇಸಾಯಕ್ಕೆ ಅನುಗೊಳಿಸುವುದನ್ನು ಪ್ರೋತ್ಸಾಹಿಸುತ್ತಿದ್ದರು. ಆರಂಭದಲ್ಲಿ ಅವರಿಗೆ ಅಗತ್ಯವಾದ ಎಲ್ಲ ಸಹಾಯಗಳನ್ನು ಕೊಡುತ್ತಿದ್ದರು.

2. ಸಾಮಾಜಿಕ

ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ಬಂದ ಗೌಡರು ಸ್ಥಳೀಯ ಪ್ರಮುಖ ಭಾಷೆಯಾದ ತುಳುವಿನಿಂದ ಪ್ರಭಾವಿತರಾಗಿ, ಕಾಲಕ್ರಮದಲ್ಲಿ ಅದನ್ನೇ ತಮ್ಮ ಮಾತೃಭಾಷೆಯನ್ನಾಗಿ ಸ್ವೀಕರಿಸಿದರು. ಇದು ತೀರಾ ಸಹಜ. ಅಮೇರಿಕಾಕ್ಕೆ ವಲಸೆ ಬಂದ ಯುರೋಪಿನವರು ಬೇರೆ ಮಾತೃಭಾಷೆಗಳನ್ನಾಡುವವರು ಎರಡನೆ ತಲೆ ಮಾರಿಗಾಗುವಾಗ ಸ್ಥಳೀಯ ಪ್ರಧಾನ ಭಾಷೆಯಾದ ಇಂಗ್ಲೀಷನ್ನೆ ಮಾತೃಭಾಷೆಯನ್ನಾಗಿ ಸ್ವೀಕರಿಸಿದರು. ತಮ್ಮ ಭಾಷೆಯನ್ನು ಬದಲಾಯಿಸಿಕೊಂಡರೂ ಗೌಡರು ತಮ್ಮ ಸಂಸ್ಕೃತಿಯನ್ನು ಬದಲಿಸಲಿಲ್ಲ. ಶೃಂಗೇರಿಯ ಜಗದ್ಗುರುಗಳ ಮಾರ್ಗದರ್ಶನದಂತೆ ತಮ್ಮ ಸಾಮಾಜಿಕ ರೀತಿನೀತಿಗಳನ್ನು ರೂಪಿಸಿಕೊಂಡರು. ಕಟ್ಟೆಮನೆ ಗೌಡರು, ಮಾಗಣೆ ಗೌಡರು, ಊರು ಗೌಡರು ಮುಂತಾದ ವಿವಿಧ ಶ್ರೇಣಿಯ ಅಧಿಕಾರಸ್ಥರು ಗೌಡರ ಸಾಮಾಜಿಕ ನಡವಳಿಕೆಗಳನ್ನು ನಿಯಂತ್ರಿಸುತ್ತಿದ್ದರು. ಮದುವೆ, ಸಾವು ಮುಂತಾದ ಸಂದರ್ಭಗಳಲ್ಲಿರುವ ವಿಶಿಷ್ಟ ನಿಯಮಾವಳಿಗಳಿಗೆ ಚ್ಯುತಿ ಬಾರದಂತೆ ಇವರು ನೋಡಿಕೊಂಡು ನಡೆಸುತ್ತಾರೆ. ಈ ಸಾಂಸ್ಕೃತಿಕ ರೂಪಗಳೆಲ್ಲ ತುಳುಭಾಷೆಯವರಿಗೂ, ಅರೆ ಬಾಸೆಯವರಿಗೂ ಸಮಾನವಾಗಿವೆ.

3. **ಕುಟುಂಬಗಳು- ಗೋತ್ರಗಳು :**

ಗೌಡರು ಹತ್ತು ಕುಟುಂಬ ಮತ್ತು ಹದಿನೆಂಟು ಗೋತ್ರಗಳಿಗೆ ಸೇರಿದವರು. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯುಳ್ಳವರು. ಕುಟುಂಬಗಳು ಹತ್ತು ಆಗಿದ್ದು, ಬಳಿಗಳು ಹದಿನೆಂಟಾಗಲು ಕಾರಣವೇನೆಂಬ ಪ್ರಶ್ನೆಯೇಳುತ್ತದೆ. ಕಾಲಾನುಕ್ರಮದಲ್ಲಿ ಬೇರೆ ಜಾತಿಗೆ ಸೇರಿದ್ದ ಜನರನ್ನು ತಮ್ಮ ಜನಾಂಗದೊಳಗೆ ಸೇರಿಸಿಕೊಂಡುದರಿಂದ ಹೀಗಾಗಿರಬಹುದು ಎಂದು ಊಹೆ ಮಾಡಬೇಕಾಗುತ್ತದೆ. ಕೆಲವು

ಬಳಿಗಳು ಬೇರೊಂದು ಬಳಿಗೆ ಕೂಡು ಬಳಿಯೆಂದಿದೆ. ಅಂದರೆ ಇವೆರಡು ಬಳಿಗಳು ಒಂದೇ ಎಂಬ ಭಾವನೆ. ಒಂದೇ ಗೋತ್ರ ಅಥವಾ ಬಳಿಗಳಿಗೆ ಸೇರಿದ ಗಂಡು ಹೆಣ್ಣುಗಳೊಳಗೆ ವಿವಾಹ ಸಂಬಂಧ ಸಾಧ್ಯವಿಲ್ಲ. ಇದು ಕೂಡುಬಳಿಗೂ ಅನ್ವಯಿಸುವ ನಿಯಮ. ಬಳಿ ಅಥವಾ ಗೋತ್ರದ ವ್ಯವಸ್ಥೆಯಿರುವುದು ಈ ಗೌಡರಲ್ಲಿ ಮಾತ್ರ. ಗಟ್ಟದ ಮೇಗಣ, ಮೈಸೂರು ಕಡೆಯ ಒಕ್ಕಲಿಗ ಗೌಡರು ಈ ವಿಷಯದಲ್ಲಿ ಭಿನ್ನರು. ಅವರಿಗೆ ಗೋತ್ರಗಳಿಲ್ಲ. ಈ ಒಕ್ಕಲಿಗ ಗೌಡರೊಡನೆ ದಕ್ಷಿಣ ಕನ್ನಡ ಮತ್ತು ಕೊಡಗಿನ ಗೌಡರು ವಿವಾಹ ಸಂಬಂಧಗಳನ್ನು ಬೆಳೆಸುವುದು ತೀರಾ ಇತ್ತೀಚಿನ ದಿನಗಳಲ್ಲಿ ಮಾತ್ರ.

## 4. ಗೌಡ ಕನ್ನಡ ಪ್ರಯೋಗ

ಪೂರ್ವ ವಲಯದ ಗೌಡರು ಕನ್ನಡದ ಒಂದು ಪ್ರಬೇಧವನ್ನು ಮಾತಾಡುತ್ತಾರೆ. ಪಶ್ಚಿಮದ ಗೌಡರು ಸ್ಥಳೀಯವಾದ ತುಳು ಮಾತೃಭಾಷೆಯವರಾಗಿದ್ದಾರೆ. ಪ್ರೊ. ಮರಿಯಪ್ಪ ಭಟ್ಟರು ಬರೆದ ಒಂದು ಸಂಪ್ರಬಂಧದಲ್ಲಿ ಗೌಡರ ಮಾತೃಭಾಷೆಯಾದ ಕನ್ನಡವನ್ನು 'ಗೌಡ ಕನ್ನಡ' ಎಂದು ಕರೆದಿದ್ದರು ಉಪಭಾಷೆ (dialects)ಗಳನ್ನು ಆ ಮಾತನ್ನಾಡುವ ಜನರ ಜಾತಿಯ ಅಂಕಿತದಿಂದಲೇ ಗುರುತಿಸುವ ರೂಢಿಗನುಸರಿಸಿ, ಉದಾ: ಹವ್ಯಕ ಕನ್ನಡ, ಕುರುಬ ಕನ್ನಡ ಎಂಬಂತೆ 'ಗೌಡ ಕನ್ನಡ' ಎಂದು ಕರೆದಿದ್ದರು. ಅವರನ್ನನುಸರಿಸಿ ನಾನೂ ನನ್ನ ಎಲ್ಲ ಭಾಷಿಕ ಬರಹಗಳಲ್ಲಿ 'ಗೌಡ ಕನ್ನಡ' ವೆಂಬ ಹೆಸರನ್ನೇ ಬಳಸಿದೆ.

ಇದರ ಭಾಷಿಕ ಅಧ್ಯಯನವನ್ನು (dinguistic study) ಪುಸ್ತಕ ರೂಪದಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದಾಗ ಆ ಪುಸ್ತಕಕ್ಕೂ 'ಗೌಡ ಕನ್ನಡ' ವೆಂದೇ ಶೀರ್ಷಿಕೆ ಕೊಟ್ಟೆ.

Gowda Kannada<br>by<br>Dr. K. Kushalappa Gowda<br>Annamalai University<br>Annamalainagar<br>India 1970

ಈ ಹೆಸರನ್ನು ಗೌಡರಿಗೆ ಅನ್ವಯಿಸಿ ಹೇಳುವಲ್ಲಿ ಒಂದು ತೊಂದರೆಯಿದೆ. ಅಂದರೆ ಎಲ್ಲ ಗೌಡರೂ ಇದೇ ಉಪಭಾಷೆಯನ್ನು ಬಳಸುವುದಿಲ್ಲ. ತುಳು ಮಾತಾಡುವ ಗೌಡರೂ ಇದ್ದಾರೆಂದು ಮೊದಲೇ ಹೇಳಿದೆ. ಹವ್ಯಕರಲ್ಲಾದರೆ, ಎಲ್ಲ ಪ್ರದೇಶಗಳ ಹವ್ಯಕರೂ ಆ ಕನ್ನಡ ಪ್ರಬೇಧವನ್ನೇ ಮಾತಾಡುತ್ತಾರೆ. ಆದುದರಿಂದ ಅದರ ಹೆಸರಿನ ಬಳಕೆಗೆ ಅಡ್ಡಿಯೇನೂ ಇಲ್ಲ. ಗೌಡ ಕನ್ನಡ ಪ್ರದೇಶದಲ್ಲಿರುವ ಅನ್ಯ ಭಾಷಾವ್ಯಕ್ತಿಗಳು ಈ ಪ್ರಬೇಧವನ್ನು ಅರೆಬಾಸೆ, ಅರೆಗನ್ನಡ ಎಂದೆಲ್ಲ ಕರೆಯುತ್ತಾರೆ. ಭಾಷೆಯನ್ನು ಅರ್ಧ, ಕಾಲು ಎಂದು ವಿಭಜಿಸಿಲು ಹೇಗೆ ಸಾಧ್ಯ? ಭಾರತದಲ್ಲಿರುವ ಭಾಷೆಗಳನ್ನು ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮತ್ತು ಪೈಶಾಚಿಕ-ಎಂದು ಹೆಸರಿಸಿ, ಕೊನೆಯದಕ್ಕೆ ಪೂರ್ಣ ಸ್ಥಾನವಿಲ್ಲದೆ ಅರ್ಧವೆಂದು ಗಣಿಸಿ, ಮೂರುವರೆ ಭಾಷೆಗಳೆಂದು ಹಿಂದಿನ ಪಂಡಿತರು ಕರೆದಿದ್ದಾರೆ. ಈ ಪ್ರದೇಶದಲ್ಲಿ ಮರಾಠಿ ವರ್ಗಕ್ಕೆ ಸೇರಿದವರು ಮಾತಾಡುವ ಭಾಷೆಯನ್ನು 'ಅರೆ ಮರಾಟಿ' ಎಂದು ಕರೆಯುವ ವಾಡಿಕೆಯಿದೆ. ಇದು ಒಂದು ರೀತಿಯ ಕುಚೋದ್ಯ ಅಥವಾ ಬೇರೆ ಮಾತಿನವರ ದಬ್ಬಾಳಿಕೆಯ ಪ್ರತೀಕವೋ ಎಂದಾಗುತ್ತದೆ. ಇದಕ್ಕಾಗಿ ಗೌಡ ಕನ್ನಡ ಎಂದು ಕರೆದರೆ, ಸುಮಾರು ಅರ್ಧಾಂಶದಷ್ಟು ಗೌಡರು ತುಳುಮಾತಿನವರಾಗಿರುವುದರಿಂದ ಇದಕ್ಕೆ ತೊಡಕುಂಟಾಗುತ್ತದೆ. ಇತ್ತೀಚೆಗೆ ಕರ್ನಾಟಕ ಸರಕಾರವು ಈ ಉಪಭಾಷೆಗೆ ಅರೆಬಾಸೆಯ ಅಕಾಡೆಮಿ ಒಂದನ್ನು ರಚಿಸಿರುವುದರಿಂದ ಇನ್ನು ಮುಂದೆ 'ಗೌಡ ಕನ್ನಡ' ಎಂಬುದನ್ನು ಬಿಟ್ಟು 'ಅರೆಬಾಸೆ' ಎಂಬ ಹೆಸರೇ ಸ್ಥಿರವಾಗಿ ಉಳಿಯುವಂತಾಗಿದೆ.

## 5. ಅರೆಬಾಸೆ-ಪ್ರಾಚೀನತೆ

ನಾನು ಈ ಉಪಭಾಷೆಯ ಲಿಂಗ, ವಚನ ಪ್ರತ್ಯಯಗಳ ಅಧ್ಯಯನ ಮಾಡಿ ಒಂದು ಸಂಪ್ರಬಂಧವನ್ನು ಪ್ರಕಟಿಸಿದ್ದೆ.

"Gender distinction in Gowda Kannada" Studies in Indian linguistics-

"Prof Emeneau 61st Birthday volume, Ed: Bh. Krishnamurti, Deccan College, Poona and Annamalai University 1968

ಎಲ್ಲ ದ್ರಾವಿಡ ಭಾಷೆಗಳ ಲಿಂಗ ವ್ಯವಸ್ಥೆಗಳನ್ನು ಅಧ್ಯಯನ ಮಾಡಿದಾಗ ನನ್ನ ಪ್ರಬಂಧವನ್ನು ಸೇರಿಸಿಕೊಂಡು ನನ್ನ ಮಿತ್ರರು ತೌಲನಿಕ ಅಧ್ಯಯನ ಮಾಡಿದರು. ಅವರ ಅಧ್ಯಯನದ ಪ್ರಕಾರ ಗೌಡರು ಬಳಸುವ ಕನ್ನಡ ಪ್ರಭೇದದ (=ಅರೆಬಾಸೆಯ) ಲಿಂಗ ವಚನ ವ್ಯವಸ್ಥೆ ಉತ್ತರ ದ್ರಾವಿಡ ವಿಭಾಗದ ಬ್ರಾಹೂಯಿಯ ಅನಂತರದ ಹಂತಕ್ಕೆ ಸೇರುತ್ತದೆಂದು ತಿಳಿದು ಬಂದಿದೆ. (S.V. Shanmugam, Annamalai University, Annamalainagara) ಅತೀ ಪೂರ್ವದಲ್ಲಿದ್ದಿರಬಹುದಾದ ದ್ರಾವಿಡ ವರ್ಗದ ಭಾಷೆಗಳ ಮೂಲರೂಪವನ್ನು ಪ್ರಾಗ್ದ್ರಾವಿಡ (Proto Dravidian) ಎಂದು ಕರೆಯುತ್ತಾರೆ. ಇದು ಮುಂದೆ ಮೂರು ಕವಲಾಗಿ, ಉತ್ತರ, ಮಧ್ಯ ಮತ್ತು ದಕ್ಷಿಣ ದ್ರಾವಿಡವೆಂದು ವಿಭಾಗವಾಗುತ್ತದೆ. ಕುರುಖ್, ಮಾಲ್ತೊ ಬ್ರಾಹೂಯಿ ಎಂಬವು ಉತ್ತರ ದ್ರಾವಿಡ ಭಾಷಾ ವರ್ಗಕ್ಕೆ ಸೇರಿವೆ. ಬ್ರಾಹೂಯಿ ಈಗಣ ಪಾಕಿಸ್ತಾನದ ಬಲೂಚಿ ಪ್ರದೇಶದ ಜನರ ಆಡುಭಾಷೆಯಾಗಿದೆ. ಪ್ರಾಗ್ದ್ರಾವಿಡ ಮೊದಲ ಹಂತ; ಉತ್ತರ, ಮಧ್ಯ ಮತ್ತು ದಕ್ಷಿಣ ಎಂದು ಕವಲೊಡೆದುದು ಎರಡನೆ ಹಂತ. ಕಾಲಮಾನದ ದೃಷ್ಟಿಯಿಂದ ಹೇಳುವುದಿದ್ದರೆ ಮೊದಲ ಹಂತ ಅತಿ ಪ್ರಾಚೀನ- ಕೆಲವು ಸಾವಿರ ವರ್ಷಗಳ ಹಿಂದಿನದಾಗಿರಬಹುದು. ಒಂದಾಗಿದ್ದುದು ಮೂರಾಗಿ ಕವಲೊಡೆಯಲೂ ಸಾವಿರದ ಲೆಕ್ಕದ ವರ್ಷಗಳಾಗಿರಬಹುದು. ಈ ಹಂತದ ಭಾಷೆಯೊಡನೆ ಸಾಮೀಪ್ಯ ತೋರುವುದೆಂದರೆ ಆ ಉಪಭಾಷೆಯ ಚರಿತ್ರೆಯೂ ಕೆಲವು ಸಾವಿರ ವರ್ಷಗಳಷ್ಟು ಹಿಂದೆ ಹೋಗಬಹುದೆಂದು ನಾವು ಊಹಿಸಬಹುದು. ಆದುದರಿಂದ ಅರೆಬಾಸೆ ಇಂದು ನಿನ್ನೆಯದಲ್ಲ. ಎಷ್ಟೊ ಹಿಂದಿನಿಂದಲೆ ಬೆಳೆದು ಬಂದಿದೆ. ಇದನ್ನಾಡುವ ಜನರು ಇದನ್ನು ಜತನದಿಂದ ಇಷ್ಟರವರೆಗೆ ಉಳಿಸಿಕೊಂಡು ಬಂದಿದ್ದಾರಲ್ಲ ಎಂಬುದು ನಮ್ಮನ್ನು ಬೆರಗಾಗಿಸುವ ಸಂಗತಿ. ಸಾಂಸ್ಕೃತಿಕವಾದ ಈ ಅಮೂಲ್ಯವಾದ ಶಬ್ದ ಸಂಪತ್ತನ್ನು ಗಳಿಸಿ ಉಳಿಸಿ ನಮಗೆ ಬಳುವಳಿಯಾಗಿ ಬಿಟ್ಟುಹೋದ ಆ ಹಿರಿಯರು, ನಾಗರಿಕತೆಯಲ್ಲಿ ಹಿಂದುಳಿದವರಾಗಿದ್ದಿರಬಹುದು. ನಾಡನ್ನು ಕಟ್ಟಿ ಆಳದೆ, ಇನ್ನೊಬ್ಬರ ಮೇಲೆ ದಬ್ಬಾಳಿಕೆಗೆ ಮಾಡದೆ, ಎಲೆ ಮರೆಯ ಕಾಯಂತೆ ಬದುಕಿ ಈ ಪ್ರಪಂಚವನ್ನು ಬಿಟ್ಟು ಹೋಗಿರಬಹುದು. ಒಂದೇ ಒಂದು ಶಬ್ದವನ್ನು ಹೊಸತಾಗಿ ಉಂಟು ಮಾಡಲು ನಾವು ಶಕ್ತರಲ್ಲ ಎಂದು ಪರಿಭಾವಿಸಿದಾಗ ನಾವು ಆ ಹಿಂದಿನವರನ್ನು ಭಕ್ತಿಯಿಂದ ನಮಿಸಬೇಕು ಎಂದಾಗುತ್ತದೆ. ಇದು ಮಾತೃಭಾಷೆಯಾಗುಳ್ಳ ಇಂದಿನವರು ಆಧುನಿಕತೆಯ ಫ್ಯಾಷನ್ನಿಗೊಳಗಾಗಿ ಇದನ್ನು ಬಿಟ್ಟು ಶಿಷ್ಟ ಕನ್ನಡವನ್ನು ಮನೆ ಮಾತಾಗಿ ಬಳಸುವುದು ದೊಡ್ಡ ಅಪರಾಧವೆಂದು ಪರಿಗಣಿಸಬೇಕು. ಇದು ಕಣ್ಮರೆಯಾಗಿ ಹೋದರೆ ಎಷ್ಟೋ ವರ್ಷಗಳಿಂದ ಬೆಳೆದು ಬಂದ ಅಮೂಲ್ಯ ಸಾಂಸ್ಕೃತಿಕ ಸಂಪತ್ತನ್ನು ನಾವು ಮತ್ತೆ ಗಳಿಸಲಾಗದಂತೆ ಕಳಕೊಂಡಂತಾಗುತ್ತದೆ. ಈ ದಾರಿದ್ರ್ಯಾವಸ್ಥೆಗೆ ನಾವು ಒಳಗಾಗಬಾರದು. ಈಗ ಎಲ್ಲ ಕನ್ನಡಿಗರಿಗೂ ಮಾನ್ಯವಾದ, ಕರ್ನಾಟಕದ ಎಲ್ಲೆಡೆಗಳಲ್ಲೂ ಬಳಕೆಯಲ್ಲಿರುವ ಕನ್ನಡಕ್ಕೆ ಈ ಉಪಭಾಷೆಗಳಷ್ಟು ಹಳೆಯ ಚರಿತ್ರೆಯಿರಲಾರದು. ಆದರೂ ಅದರ ಮೂಲರೂಪ ಕನ್ನಡದ ಹಲವು ಉಪಭಾಷೆಗಳಲ್ಲಿ ಒಂದಾಗಿದ್ದು, ಕಾಲಕ್ರಮದಲ್ಲಿ ಕೆಲವಂಶಗಳನ್ನು ಸೇರಿಸಿ, ಕೆಲವಂಶಗಳನ್ನು ಕಳೆದು ಬದಲಾವಣೆಗೊಂದು ಈಗಿನ ಸ್ಥಿತಿಗೆ ತಲಪಿದೆ. ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದ ನೃಪತುಂಗ ಅಮೋಘವರ್ಷನ ಕಾಲದಲ್ಲಿ (ಕ್ರಿ.ಶ. 814-880) ವಿಸ್ತಾರವಾಗಿದ್ದ ಕರ್ನಾಟಕದಲ್ಲಿ ಹಲವು ಕನ್ನಡದ ಪ್ರಭೇದಗಳಿದ್ದುವೆಂದು 'ಕವಿರಾಜ ಮಾರ್ಗ' ವೆಂಬ ಕೃತಿಯಿಂದ ತಿಳಿಯುತ್ತದೆ. ಒಂಕುಂದ, ಕೊಪಣನಗರ, ಪುಲಿಗೆರೆ, ಕಿಸುವೊಳಲ್ ಎಂಬ ಪಟ್ಟಣಗಳ ನಡುವಣನಾಡೆ ಕನ್ನಡದ ತಿರುಳ್ (=ತಿರುಳ್ಗನ್ನಡದ ಪ್ರದೇಶ) ಎಂದು ಆಕೃತಿಯ ಕರ್ತೃ ಹೇಳಿದ್ದಾನೆ. ಹಳಗನ್ನಡದಲ್ಲಿ ಕೃತಿರಚನೆ ಮಾಡಿದ ಕವಿಗಳೆಲ್ಲ ಪುಲಿಗೆರೆಯ ತಿರುಳ್ಗನ್ನಡದಲ್ಲಿ ತಾವು

ಕಾವ್ಯರಚನೆ ಮಾಡುತ್ತಿದ್ದೇವೆಂದು ಹೇಳಿಕೊಂಡಿದ್ದಾರೆ. ಈಗ ನಾವು ತಿರುಳ್ಗನ್ನಡವೆಂಬುದು ಈಗಣ ಕರ್ನಾಟಕದ ಉತ್ತರ ಮೇರೆಯ ಕನ್ನಡ ಪ್ರಭೇದವನ್ನಲ್ಲ. ಆಗಿನ ಕರ್ನಾಟಕದ ದಕ್ಷಿಣ ಮೇರೆಯಲ್ಲಿದ್ದ ಪ್ರಭೇದವೇ ಕೆಲವು ಬೆಳವಣಿಗೆಗೊಳಗಾಗಿ ಈಗಿನ ಶಿಷ್ಟ ಕನ್ನಡ (Standard Kannada) ಎಂದಾಗಿದೆ. ಅರೆಬಾಸೆಯಂತೆ ಒಂದು ಕಾಲದಲ್ಲಿ ಈ ಶಿಷ್ಟ ಕನ್ನಡವೆನ್ನುವುದರ ಹಳೆಯ ರೂಪವೂ ಒಂದು ಉಪಭಾಷಾ ಪ್ರಭೇದವೇ ಆಗಿತ್ತು. ಆ ಪ್ರದೇಶದಲ್ಲಿದ್ದ ಕನ್ನಡಿಗರು ಪ್ರಬಲರಾಗಿ, ನಾನಾ ಚಟುವಟಿಕೆಗಳಿಂದ ಕೂಡಿದವರಾಗಿದ್ದುದರಿಂದ ಅವರು ಬಳಸುವ ಕನ್ನಡಕ್ಕೂ ಪ್ರಾಶಸ್ತ್ಯ ಬಂದು, ಅದು ಪ್ರಮುಖ ಭಾಷೆಯೆಂದು ಎಲ್ಲರಿಗೂ ಮಾನ್ಯವಾದ ಭಾಷೆಯೆಂದಾಯ್ತು.

## 6. ಅರೆಬಾಸೆಯ ಸ್ವರೂಪ ವಿವೇಚನೆ:

ಇನ್ನು ಅರೆಬಾಸೆಯ ಸ್ವರೂಪವನ್ನು ನೋಡೋಣ. ಸ್ವರ ಮತ್ತು ವ್ಯಂಜನಗಳು ಒಂದು ಭಾಷೆಯ ಮೂಲ ಘಟಕಗಳು. ಅವುಗಳ ವಿಶಿಷ್ಟ ಸಂಯೋಜನೆಯಿಂದ ಅರ್ಥವತ್ತಾದ ಘಟಕಗಳಾಗಿ 'ಶಬ್ದ' ಅಥವಾ 'ಪದ'ಗಳನ್ನಿಸಿಕೊಳ್ಳುತ್ತವೆ. ಈ ಪದಗಳಲ್ಲಿ ಕೆಲವು ವ್ಯಕ್ತಿ ಅಥವಾ ವಸ್ತು ಇಲ್ಲವೆ ಸ್ಥಳವನ್ನು ಕುರಿತು ಹೇಳುತ್ತವೆ. ಕೆಲವು ಕೆಲಸವನ್ನು ಮಾಡುವವುಗಳನ್ನು ನಿರ್ದೇಶಿಸುತ್ತವೆ. ಆ ಕೆಲಸ ಈಗ ನಡೆಯುತ್ತದೆಯೋ, ಹಿಂದೆ ನಡೆದಿದೆಯೋ, ಅಲ್ಲ ಇನ್ನು ನಡೆಯಬೇಕಾಗಿದೆಯೋ ಎಂಬುದನ್ನು ಸೂಚಿಸುವ ವ್ಯವಸ್ಥೆಯೂ ಭಾಷೆಯಲ್ಲಿದೆ. ಹೀಗೆ ಈ ಪದಗಳಿಗೆ, ಪದಭಾಗಗಳಿಗೆ ತಮ್ಮದೇ ಆದ ವಿಶಿಷ್ಟ ಹೆಸರುಗಳಿದ್ದು, ಉದಾ: ನಾಮಪದ, ಸರ್ವನಾಮ, ಕ್ರಿಯಾಪದ, ವಿಶೇಷಣ, ವರ್ತಮಾನ, ಭೂತ, ಭವಿಷ್ಯತ್ಕಾಲಕಗಳು, ಲಿಂಗವಚನ ಪ್ರತ್ಯಯಗಳು ಎಂದಿತ್ಯಾದಿಯಾಗಿ ಇವುಗಳು ವಿಶಿಷ್ಟವಾಗಿ ಪರಸ್ಪರ ಸಂಬಂಧಿಸಿರುವುದನ್ನು ಶಾಸ್ತ್ರೀಯವಾಗಿ ತಿಳಿಸಿಕೊಡುವ ವ್ಯವಸ್ಥೆಯನ್ನು ಪಾರಿಭಾಷಿಕವಾಗಿ, ಆ ಭಾಷೆಯ ವ್ಯಾಕರಣವೆನ್ನುತ್ತೇವೆ. ಪ್ರತಿಯೊಂದು ಬಳಕೆಯಲ್ಲಿರುವ ಭಾಷೆಗೆ ಅದರದೇ ಆದ ವ್ಯಾಕರಣವೊಂದಿರುತ್ತದೆ. ಬರಹ ರೂಪದಲ್ಲಿ ಅದು ಇಲ್ಲವೆಂದಾದರೂ ಅದು ಅಲಿಖಿತ ರೂಪದಿಂದಿರುತ್ತದೆ. ಆ ಭಾಷೆಯನ್ನಾಡುವವನು ಓದು ಬರಹ ಗೊತ್ತಿಲ್ಲದವನೇ ಆದರೂ ಅವನ ಮಾತೃಭಾಷೆಯ ಮಟ್ಟಿಗೆ ಅವನೊಬ್ಬ ಒಳ್ಳೆಯ ವೈಯಾಕರಣಿಯೇ ಆಗಿದ್ದಾನೆ. ಆದರೆ ಅವನು ಅದನ್ನು ವಿವರಿಸಲು ಮಾತ್ರ ಶಕ್ತನಲ್ಲ. ಒಬ್ಬನು ಎಳವೆಯಲ್ಲೇ ತನ್ನ ತಾಯ್ತಂದೆಯರಿಂದ ಮತ್ತು ತನ್ನ ಜತೆಗಾರರಿಂದ ಆ ಭಾಷೆಯನ್ನು ಕಲಿತುಕೊಳ್ಳುತ್ತಾನೆ. ಆ ಭಾಷೆಯ ವ್ಯಾಕರಣ ವ್ಯವಸ್ಥೆ ಅವನಲ್ಲಿ ಅಂತರ್ಗತವಾಗಿ ಹೋಗಿರುತ್ತದೆ. ಭಾಷೆಯನ್ನು ಒಂದು ಯಂತ್ರಕ್ಕೆ ಹೋಲಿಸುವುದಾದರೆ, ಅವನಿಗೆ ಆ ಯಂತ್ರದ ವಿವಿಧಾಂಗಗಳು ಸೇರಿ ಅವೆಲ್ಲ ಹೇಗೆ ಕೆಲಸ ಮಾಡುತ್ತವೆಂದು ವಿವರಿಸಲಾರನಾದರೂ ಅದನ್ನಾತ ಲೀಲಾಜಾಲವಾಗಿ ಬಳಸಬಲ್ಲ.

## 7. ಅರೆಬಾಸೆಯ ವ್ಯಾಕರಣ-ಸ್ಥೂಲ ವಿವರಣೆ:

ವ್ಯಾಕರಣದ ಮೊದಲ ಮೆಟ್ಟಿಲಾಗಿ ಆ ಭಾಷೆಯ ಧ್ವನಿಗಳ ಪರಿಶೀಲನೆ ನಡೆಯುತ್ತದೆ.

**7.1 ಧ್ವನಿ-ಧ್ವನಿಮಾ:** ಧ್ವನಿಗಳಲ್ಲಿ ಎರಡು ವಿಧಃ (1) ಸ್ವರಗಳು (2) ವ್ಯಂಜನಗಳು.

### 7.1.1 ಅರೆಬಾಸೆಯ ಧ್ವನಿಗಳ ವಿವರಣೆ:

ಸ್ವರಗಳು

| ಹ್ರಸ್ವ | | | ದೀರ್ಘ | |
|---|---|---|---|---|
| *i* | *i* | *u* | *l:* | *u;* |
| *e* | *a* | *o* | *e:* | *o:* |
| | *a* | | *a:* | |

ಅಂತಾರಾಷ್ಟ್ರೀಯ ಧ್ವನಿಲಿಪಿಯನ್ನನುಸರಿಸಿ ಇಂಗ್ಲಿಷ್ ಮೂಲದ ಲಿಪಿಯನ್ನು ಇಲ್ಲಿ ಅಳವಡಿಸಿದೆ. ಈ ಸ್ವರಗಳನ್ನು ಉಚ್ಚರಿಸುವಾಗ ನಾಲಗೆಯ ತುದಿ ಉನ್ನತ, ಮಧ್ಯ ಮತ್ತು ನಿಮ್ನವೆಂಬ ಸ್ಥಳಗಳಲ್ಲಿರುವುದನ್ನು ಸಾಪೇಕ್ಷವಾಗಿ ಪ್ರಥಮ ಸಾಲು ತೋರಿಸುತ್ತದೆ. ಮೂರನೆಯ (ಕೊನೆಯ) ಸಾಲು ನಾಲಗೆಯ ಬುಡದ

ಸ್ಥಾನವನ್ನು, ಇವೆರಡರ ಮಧ್ಯದ ಸ್ಥಾನ ನಾಲಗೆಯ ಮಧ್ಯದ ಸ್ಥಿತಿಯನ್ನು ತೋರಿಸುತ್ತದೆ.

ಅರೆಬಾಸೆಯಲ್ಲಿ ಶಿಷ್ಟ ಕನ್ನಡದಲ್ಲಿರುವ ಸ್ವರಗಳಿಗಿಂತ ಹೆಚ್ಚು ಸ್ವರಗಳಿವೆ. ಅವು i, a, e ಮತ್ತು o ಎಂಬವುಗಳು. ಎರಡು ಧ್ವನಿಗಳು ಒಂದೇ ಪರಿಸರದಲ್ಲಿ ಬಂದು ಅರ್ಥ ವೈದೃಶವನ್ನು ತೋರಬಲ್ಲವಾದರೆ ಆ ಧ್ವನಿಗಳನ್ನು ಧ್ವನಿಮಾಗಳೆಂದು ಆಧುನಿಕ ಭಾಷಾವಿಜ್ಞಾನದ ಪರಿಭಾಷೆಯಲ್ಲಿ ಕರೆಯುತ್ತಾರೆ. ಉದಾ: ಕರಿ-ಗರಿ ಎಂಬ ಪದಗಳಲ್ಲಿ ಕ್ ಮತ್ತು ಗ್ ಒಂದೇ ಪರಿಸರದಲ್ಲಿ (= ಪದಾದಿಯಲ್ಲಿ) ಮತ್ತು ರಿ ಎಂಬುದರ ಪೂರ್ವದಲ್ಲಿ ಬರುತ್ತವೆ. ಎರಡೂ ಪದಗಳಲ್ಲಿ ಬೇರೆ ಬೇರೆ ಅರ್ಥಗಳು ಬರುವುದಕ್ಕೆ ಒಂದು 'ಕ್' ಮತ್ತು 'ಗ್' ಆಗಿರುವುದೇ ಕಾರಣ. ಹಾಗೆ ಕನ್ನಡದಲ್ಲಿ 'ಕ್' ಮತ್ತು 'ಗ್' ವನ್ನು ಧ್ವನಿಮಾಗಳೆಂದು ಕರೆಯುತ್ತಾರೆ. ಈ ರೀತಿಯಾಗಿ ಮೇಲೆ ಹೇಳಿದ ಸ್ವರಗಳನ್ನು ಸಂಕೇತಿಸಿರುವ ಸಂಜ್ಞೆಗಳು ಅರೆಬಾಸೆಯ ಸ್ವರಧ್ವನಿಮಾ (vowel phonemes) ಎಂದಾಗುತ್ತವೆ. ಶಿಷ್ಟ ಕನ್ನಡದೊಡನೆ ಹೋಲಿಸಿದರೆ ನಾಲ್ಕು ಸ್ವರಧ್ವನಿಮಾಗಳು ಅರೆಬಾಸೆಯಲ್ಲಿ ಹೆಚ್ಚಿವೆ ಎಂದಾಯಿತು.

### 7.1.2 ಅರೆಬಾಸೆಯಲ್ಲಿರುವ ವ್ಯಂಜನ ಧ್ವನಿಮಾಗಳು

ವರ್ಗೀಯ ವ್ಯಂಜನಗಳು: ಬಾಯಿಯ ಮೇಲ್ಭಾಗದ ಅಂಗುಳಿನ ವಿವಿಧ ಬಿಂದುಗಳಿಗೆ ನಾಲಗೆಯ ತುದಿ (tip of the tongue) ಅಥವಾ ಬುಡ (Root of the tongue) ತಾಗಿ ಶ್ವಾಸಕೋಶದಿಂದ ಹರಿದು ಬರುತ್ತಿರುವ ಗಾಳಿಗೆ ಕ್ಷಣಿಕ ತಡೆಯೊಡ್ಡಿ, ಧ್ವನಿಪೆಟ್ಟಿಗೆಯಲ್ಲಿ ಕಂಪನವುಂಟಾಗಿ ಅಥವಾ ಆಗದೆ ಉಂಟಾಗುವ ಧ್ವನಿ ಸಮುಚ್ಚಯವನ್ನು ವ್ಯಂಜನಗಳೆನ್ನುತ್ತೇವೆ. ಇವುಗಳನ್ನು ಓಷ್ಠ್ಯ, ದಂತ್ಯ, ತಾಲವ್ಯ, ಮೂರ್ಧನ್ಯ, ಕಂಠ್ಯ, ಗಲೀಯವೆಂದು ವಿಭಜಿಸಲಾಗುತ್ತದೆ. ಈ ಕೆಳಗಿನವುಗಳು ಅಂತಹ ವ್ಯಂಜನಗಳು ಧ್ವನಿಮಾಗಳಾಗಿರುವವುಗಳು:

p t ṭ c k — ಕಠಿಣ ಸ್ಪರ್ಶ ವ್ಯಂಜನಗಳು

b d ḍ j g — ಮೃದು ಸ್ಪರ್ಶ ವ್ಯಂಜನಗಳು

m n ṇ n ń — ಅನುನಾಸಿಕ ವ್ಯಂಜನಗಳು

w y
s h
l ḷ
r
} ಅವರ್ಗೀಯ ವ್ಯಂಜನಗಳು

### 8. ಶಿಷ್ಟ ಕನ್ನಡದೊಡನೆ ಹೋಲಿಕೆ ವ್ಯತ್ಯಾಸಗಳು:

ಶಿಷ್ಟ ಕನ್ನಡದೊಡನೆ ಹೋಲಿಸಿದರೆ ಅರೆಬಾಸೆಯ ಕೆಲವು ವೈಶಿಷ್ಟ್ಯಗಳನ್ನು ತಿಳಿಯಬಹುದು.

1) ಶಿಷ್ಟ (=ಗ್ರಾಂಥಿಕ) ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆಯಿಂದಾಗಿ ಲಿಪಿಯಲ್ಲಿ ಅಥವಾ ವರ್ಣಮಾಲೆಯಲ್ಲಿ ಕಠಿಣ ಮತ್ತು ಮೃದುವರ್ಣಗಳ ಸಾಲಿನಲ್ಲಿ ಮಹಾಪ್ರಾಣ ವ್ಯಂಜನಗಳು (ಖ,ಘ,ಛ,ಝ,ಠ,ಢ, ಷ,ಥ,ಧ,ಫ,ಭ) ಇವೆ. ಆದರೆ ಅರೆಬಾಸೆಯಲ್ಲಿ ಅವುಗಳಿಲ್ಲ.

2)ಮೂಲ ಸಂಸ್ಕೃತ ರೂಪಗಳು ಮಹಾಪ್ರಾಣಗಳಿರುವ ಪದಗಳು ಅರೆಬಾಸೆಯಲ್ಲಿ ಬಳಕೆಯಾದರೂ ಅದರ ಮಹಾಪ್ರಾಣಾಕ್ಷರಗಳೆಲ್ಲ ಅಲ್ಪಪ್ರಾಣಗಳಾಗಿ ಸಹಜವಾಗಿ ಮಾರ್ಪಾಡಾಗುತ್ತವೆ. ಭಾಷಾಪಂಡಿತರು ಮಾತ್ರ ಮಹಾಪ್ರಾಣಗಳನ್ನು ಹಾಗೆಯೇ ಉಚ್ಚರಿಸಬಹುದು.

### 9. ಕೆಲವು ಧ್ವನಿಗಳ ಉಚ್ಚಾರಣಾ ವಿಧಾನ

w ಮತ್ತು yಗಳು ಉಚ್ಚರಣೆಯಾಗುವೆಡೆಯಲ್ಲಿ ತುಟಿಯಾಗಲೀ ನಾಲಗೆಯಾಗಲೀ ಉಚ್ಚಾರಣಾ ಸ್ಥಾನವನ್ನು ಸಂಪೂರ್ಣ ಮುಚ್ಚದೆ, ಸ್ವಲ್ಪ ಎಡೆಯಿರುವಂತೆ ಮಾಡಿ, ಶ್ವಾಸಕೋಶದಿಂದ ಹೊರ ಬರುವ ಗಾಳಿಗೆ ಸ್ವಲ್ಪ ಮಾತ್ರ ತಡೆಯೊದಗಿದಂತಾಗಿ ಹೊರ ಹೋಗುತ್ತದೆ. s ಎಂಬುದನ್ನು ಉಚ್ಚರಿಸುವಾಗ ನಾಲಗೆಯ ತುದಿ ಮೇಲಿನ ಒಸಡಿಗೆ ಸಮೀಪ ನಿಂತು ಅಗಲ ಕಿರಿದಾದ ಎಡೆಯಿಂದ ಗಾಳಿ ಹೊರಹೋಗುವಂತಾಗುತ್ತದೆ. ನಾಲಗೆಯ ಮಧ್ಯಭಾಗ ಮೇಲೆದ್ದು ತಾಲುವಿನತ್ತ ಸ್ವಲ್ಪವೇ ಎಡೆಬಿಟ್ಟು ಗಾಳಿ ಹೊರಹೋಗುವಂತಾದರೆ ತಾಲವ್ಯ ಊಷ್ಮ (š) ಧ್ವನಿಯಾಗುತ್ತದೆ. ಅರೆಬಾಸೆಯಲ್ಲಿ ಇದು |s|ದ ಉಪಧ್ವನಿಯಾಗಿ, ನಿರ್ದಿಷ್ಟ ಸ್ಥಾನದಲ್ಲಿ, ಉದಾ-ಕ್ ವ್ಯಂಜನದ

ಪರದಲ್ಲಿ ಮಾತ್ರ ಬರುತ್ತದೆ. ಉದಾ: ಸಾಕ್ಷಿ, ನಕ್ಷೆ, ರಿಕ್ಷಾ, ದ್ರಾಕ್ಷೆ. ಇವೆಲ್ಲಾ ಎರವಲು ಪದಗಳು, ದೇಶ್ಯವಲ್ಲ, ಅಂದರೆ ಅರೆಬಾಸೆಯ ಮೂಲದವುಗಳಲ್ಲ. h ಗಲೀಯವಾದುದು. ಕಂಠ್ಯ ಸ್ಥಾನದಲ್ಲಿ ಶ್ವಾಸಕೋಶದಿಂದ ಈ ಗಾಳಿಯು ಹೊರಬರುವಾಗ ಕ್ಷಣಿಕ ಒತ್ತಡ ವನ್ನುಂಟುಮಾಡಿ ಧ್ವನಿಪೆಟ್ಟಿಗೆಯ ಸ್ವರತಂತಿಗಳ ಘರ್ಷಣೆ ಯಿಂದ ಹೊರ ಬರುವಾಗ h ಎಂಬ ಧ್ವನಿ ಕೇಳಿಸುತ್ತದೆ.

*l* ಮತ್ತು *l*ಗಳ ಉಚ್ಚಾರಣೆಯಲ್ಲಿ ನಾಲಗೆಯ ತುದಿ ಮೇಲಿನ ಹಲ್ಲಿನ ಒಸಡಿಗೆ ತಾಗಿನಿಂತು ಶ್ವಾಸಕೋಶದಿಂದ ಬರುತ್ತಿರುವ ಗಾಳಿ ನಾಲಗೆಯ ಎರಡು ಬದಿಗಳಿಂದಲೂ ಹೊರಟು ಹೋದಾಗ *l*; ನಾಲಗೆಯ ತುದಿ ಇನ್ನಷ್ಟು ಮುಂದಕ್ಕೆ ಬಾಗಿ ಕಠಿಣ ತಾಲುವಿಗೆ ತಾಗಿ ನಿಂತು, ಶ್ವಾಸಕೋಶದ ಗಾಳಿಯು ಮೊದಲು ಹೇಳಿದಂತೆ ಹೊರಟು ಹೋದರೆ ಉಂಟಾಗುವ ಧ್ವನಿ *ḷ* ಇವೆರಡನ್ನು ಪಾರ್ಶ್ವಗಾಮಿಗಳೆಂದು ಕರೆಯುತ್ತಾರೆ.

r ನಾಲಗೆಯ ತುದಿ ಕ್ಷಣಿಕವಾಗಿ ಮೇಲಿನ ಒಸಡಿನ ಅಂಚಿಗೆ ಶೀಘ್ರತಾಡನ ಮಾಡಿ ವೇಗವಾಗಿ ಕಂಪಿಸುವಾಗ ಉಂಟಾಗುವ ಧ್ವನಿ r. ಇದನ್ನು ಆಕಂಪಿತವೆಂದು ಕರೆಯುತ್ತಾರೆ.

## 10. ಅನುನಾಸಿಕಗಳು:

ಶಿಷ್ಟ ಕನ್ನಡದಲ್ಲಿ m, n, ṇ ಎಂಬ ಮೂರು ಅನುನಾಸಿಕಗಳು ಮಾತ್ರ ಧ್ವನಿಮಾಗಳೆಂದು ಪರಿಗಣಿತವಾಗುತ್ತವೆ. ಅಕ್ಷರ ಮಾಲೆಯಲ್ಲಿ ಮಾತ್ರ ಞ ಮತ್ತು ಙಗಳು ಎಡೆ ಪಡೆಯುತ್ತವಾದರೂ ಅರ್ಥ ವೈದೃಶಗಳನ್ನು ತೋರಲು ಸಮರ್ಥಗಳಾಗಿಲ್ಲ. ಅರೆಬಾಸೆಯಲ್ಲಿ ಇವುಗಳು ಧ್ವನಿಮಾಸ್ಥಾನಗಳನ್ನು ಪಡೆಯುತ್ತವೆ. ಪದಮಧ್ಯದಲ್ಲಿ ದಿತ್ವರೂಪಗಳೂ ಕೆಲವು ಪದಗಳಲ್ಲಿ ಕಂಡು ಬರುತ್ತವೆ.

ಉದಾ: ಹಞ್ಞ= ಸ್ವಲ್ಪ ಕೊಞ್ಞಿ = ತೊದಲು ಮಾತು; ಕುಞ್ಞಿ= ಚಿಕ್ಕದು

ಮಙ್ಙ = ಮಗ; ನೊಙ್ಙ = ನೊಗ; ಬಙ್ಙ = ಭಂಗ, ಕಷ್ಟ.

## 11. ಹಳಗನ್ನಡ ಪದಸ್ವರೂಪಗಳ ಉಳಿಕೆ :

### 11.1 ಸಬಿಂದುಕ ಅಬಿಂದುಕಗಳು:

ಚಾರಿತ್ರಿಕ ಬದಲಾವಣೆಯ ಕಾರಣದಿಂದ, ಶಿಷ್ಟ ಕನ್ನಡದಲ್ಲಿ ಪಕಾರವಿದ್ದ ಅನೇಕ ಪದಗಳಲ್ಲಿ ಪಕಾರ ಹಕಾರವಾಗಿ ಬದಲಾವಣೆ ಹೊಂದಿದೆ. ಇದು ಅರೆಬಾಸೆಯಲ್ಲೂ ನಡೆದಿದೆ. ಹಳಗನ್ನಡದಲ್ಲಿ ಹಿಂದೆ ದೀರ್ಘ ಸ್ವರಗಳ ಪರದಲ್ಲಿ ಅಥವಾ ಬಹುವಕ್ಷರವುಳ್ಳ ಪದಗಳಲ್ಲಿ ಎರಡನೆಯ ಅಕ್ಷರದ ಪರದಲ್ಲಿ ಬಿಂದು (= ಅನುನಾಸಿಕ) ಬರುವ ಅನೇಕ ಪದಗಳಿದ್ದುವು. ಹೊಸಗನ್ನಡದಲ್ಲಿ (= ಶಿಷ್ಟ ಕನ್ನಡದಲ್ಲಿ) ಬಿಂದು ಲೋಪವಾಗಿದೆ. ಆದರೆ ಅರೆಬಾಸೆಯಲ್ಲಿ ಇಂದೂ ಅನೇಕ ಪದಗಳು ಬಿಂದು (= ಅನುನಾಸಿಕ) ಯುಕ್ತವಾದ ಪದಸ್ವರೂಪಗಳು ಕಂಡು ಬರುತ್ತವೆ.

| ಹಳಗನ್ನಡ | ಹೊಸಗನ್ನಡ | ಅರೆಬಾಸೆ |
|---|---|---|
| ಬೆಳಂತಿಗೆ | ಬೆಳತಿಗೆ | ಬೆಣ್ತೆಕ್ಕಿ |
| ಎರಂಕೆ | ರೆಕ್ಕೆ | ರೆಂಕೆ |
| ಕಡುಂಬು | ಕಡುಬು | ಕೂಡ್೦ಬು |

| ಹಳಗನ್ನಡ | ಹೊಸಗನ್ನಡ | ಅರೆಬಾಸೆ |
|---|---|---|
| ಸೆರಂಗು | ಸೆರಗು | ಸೆರ್‌ಗ್ |
| ತೂಂಬು | ತೂಬು | ತೂಂಬು |
| ಸೀಂಟು | ಸೀಟು | ಚೀಂಟ್ |
| ಸೌಂಟು | ಸೌಟು | ಸೊವುಂಟ್ |

### 11.2 ಲ-ಳ ವ್ಯತ್ಯಯ:

ಹಳಗನ್ನಡದಲ್ಲಿ ಲಾಂತಗಳಾಗಿದ್ದ ಪದಗಳು ಹೊಸಗನ್ನಡದಲ್ಲಿ ಳಾಂತಗಳಾಗತೊಡಗಿದವು. ಇದನ್ನು ಕೇಶಿರಾಜ (12ನೇ ಶತಮಾನ) ನಿಷೇದಿಸಿ, ಆ ಪದಗಳು ಲಾಂತಗಳಾಗಿಯೇ ಇರಬೇಕೆಂದಿದ್ದ. ಆದರೆ ಅವನ ನಿಯಮವನ್ನು ಮೀರಿ ಆ ಪದಗಳೆಲ್ಲವೂ ಕುಳಾಂತಗಳಾಗಿಯೇ ಪರಿವರ್ತಿಸಿದುವು. ಅರೆಬಾಸೆಯಲ್ಲಿ ಆ ಪದಗಳೆಲ್ಲ

ಲಾಂತಗಳಾಗಿಯೇ ಉಳಿದುವು.

| ಹಳಗನ್ನಡ | ಹೊಸಗನ್ನಡ | ಅರೆಬಾಸೆ |
|---|---|---|
| ಬೆರಲ್ | ಬೆರಳು | ಬೆರ್ಲ್ |
| ಕೊರಲ್ | ಕೊರಳು | ಕೊರ್ಲ್ |
| ಉರುಲ್ | ಉರುಳು | ಉರ್ಲ್ |
| ಪರಲ್? | ಹರಳು | ಹರ್ಲ್ |

ನಿಜವಾಗಿ ಕುಳಾಂತಗಳಾಗಿದ್ದ ಪದಗಳೂ ಅರೆಬಾಸೆಯಲ್ಲಿ ಲಾಂತಗಳಾಗಿರುವುದನ್ನು ಕಾಣಬಹುದು. ಉದಾ: ಕರುಳ್ - ಕೂರ್ಲ್ ಮರಳು - ಮೊರ್ಲ್. ಈ ಬದಲಾವಣೆಗೆ ತುಳುವಿನ ಪ್ರಭಾವ ಬಹಶಃ ಕಾರಣವಿರಬೇಕು.

**12. ಲಿಂಗ-ವಚನ ಮುಂತಾಗಿ**

ಅರೆಬಾಸೆ ಶಿಷ್ಟ ಕನ್ನಡಕ್ಕೆ ತೀರಾ ಭಿನ್ನತೆಯನ್ನು ತೋರುವುದು ಲಿಂಗ ವಚನ ವ್ಯವಸ್ಥೆಯಲ್ಲಿ. ಅರೆಬಾಸೆ ಪ್ರಥಮ ಪುರುಷ ಸರ್ವನಾಮದಲ್ಲಿ ಎರಡೇ ಲಿಂಗಗಳನ್ನು ಹೊಂದಿದೆ. (1) ಪುಲ್ಲಿಂಗ (2) ನಪುಂಸಕ ಅಥವಾ ಪುಲ್ಲಿಂಗೇತರ. ಶಿಷ್ಟ ಕನ್ನಡದಲ್ಲಿ ಸ್ತ್ರೀಲಿಂಗ ಪ್ರತ್ಯೇಕವಾಗಿದೆ.

| | ಪುಲ್ಲಿಂಗ | ನಪುಂಸಕ ಅಥವಾ ಪುಲ್ಲಿಂಗೇತರ |
|---|---|---|
| ಪ್ರ.ಮ.ಸ.ನಾ. | ಅಂವ | ಅದ್ |
| | ಇಂವ | ಇದ್ |

**13. ಸ್ತ್ರೀಲಿಂಗ ಮತ್ತು ನಪುಂಸಕದ ಏಕೀಭವಿಸುವಿಕೆ:**

ಸ್ತ್ರೀಲಿಂಗ ವಿವಕ್ಷೆಗೆ ಪ್ರತ್ಯೇಕ ಪ್ರತ್ಯಯ ಇಲ್ಲ. ಅದು ನಪುಂಸಕದೊಡನೆ ಅಂತರ್ಗತವಾಗಿದೆ. ಹೀಗಿದ್ದರೂ ನಾಮಪದದಲ್ಲಿ ಅಳ್ ಎಂಬ ಸ್ತ್ರೀಲಿಂಗ ಪ್ರತ್ಯಯ ಇತರ ಪ್ರತ್ಯಯಗಳ ಪೂರ್ವದಲ್ಲಿ ಬರುತ್ತದೆ.

ಮಜ್ಜ=ಮಗ (ಪುಂ) ಮಗ=ಮಗಳು (ಸ್ತ್ರೀ) ಮಗ ಎಂಬ ಸ್ತ್ರೀಲಿಂಗ ಸೂಚಕ ಪದದ ಪರದಲ್ಲಿ ಸ್ವರಾದಿ ಪ್ರತ್ಯಯಗಳು ಬರುವಾಗ ಈ ಪದಕ್ಕೆ ಅಳ್ ಎಂಬ ಪ್ರತ್ಯಯ ಆಗಮವಾಗುತ್ತದೆ.

ಮಜ್ಜ+ಅ (ಷಷ್ಠೀ ವಿಭಕ್ತಿ) → ಮಂಜನ; ಮಗ+ಅ(ಪ್ರ.ವಿ.) - ಮಗಳ ಮಜ್ಜ+ಗೆ (ಚ.ವಿ.) - ಮಂಜಂಗೆ ಮಗ+ಇಗೆ → ಮಗಳಿಗೆ (ಚ.ವಿ)

ತೀರ ಇತ್ತೀಚಿನ ಬೆಳವಣಿಗೆಯೊಂದು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ. ಅರೆಬಾಸೆಯ 'ಮಗ' ಎಂಬ ಪದ ಶಿಷ್ಟಕನ್ನಡದ ಮಗ (ಪುಂ) ಎಂಬ ಪದದೊಡನೆ ಏಕರೂಪ ಹೊಂದಿ ಗೊಂದಲಕ್ಕೆ ದಾರಿಯಾಗಿದೆಯೆಂಬ ಕಾರಣದಿಂದ ಆಧುನಿಕರು ಅರೆಬಾಸೆಯ ಮಗ ಎಂಬುದನ್ನು ಶಿಷ್ಟ ಕನ್ನಡದ 'ಮಗಳು' ಎಂಬ ರೂಪದಿಂದಲೇ ಪ್ರಯೋಗಿಸುತ್ತಾರೆ. ಅದೇ ರೀತಿ ಪ್ರ.ಪು.ಸ.ನಾದ ಅದ್ ಎಂಬ ಅರೆಬಾಸೆಯ ರೂಪವನ್ನು ಸ್ತ್ರೀಲಿಂಗಕ್ಕೆ ಅನ್ವಯಿಸಿ ಪ್ರಯೋಗಿಸುವುದು ಸ್ತ್ರೀಯರಿಗೆ ಅಗೌರವವೆಂಬ ಭಾವನೆಯಿಂದ 'ಅವ್ಳು', 'ಇವ್ಳು' ಎಂದು ಪ್ರಯೋಗಿಸುತ್ತಾರೆ. ಆದರೆ ಈ ರೂಪಗಳನ್ನು ವಾಕ್ಯದಲ್ಲಿ ಕರ್ತೃ ಪದವಾಗಿ ಬಳಸಿದಾಗ ವಾಕ್ಯದ ಪೂರ್ಣ ಕ್ರಿಯ ಪದದ ರೂಪದಲ್ಲಿ ಕರ್ತೃ ಪದದ ಲಿಂಗ ವಚನ ಸೂಚಕ ಪ್ರತ್ಯಯ ಬರಬೇಕೆಂಬ ನಿಯಮಕ್ಕೆ ಭಂಗವುಂಟಾಗುತ್ತದೆ. ಉದಾ: ಮಗಳು ಹೋತು (= ಮಗಳು ಹೋಯ್ತು). ಅವ್ಳ/ಇವ್ಳ ಹೋತು (ಅವಳು/ ಇವಳು ಹೋಯ್ತು) ಎಂಬ ಅಭಾಸ ರೂಪವುಂಟಾಗುತ್ತದೆ.

**14. ವಾಕ್ಯದ ಕ್ರಿಯಾಪದದಲ್ಲಿ ಬರುವ ಲಿಂಗ-ವಚನ ಪ್ರತ್ಯಯ ವಿಚಾರ :**

ಕರ್ತೃಪದ ಪುಲ್ಲಿಂಗ ಏಕವಚನವಾಗಿರಲಿ ಅಥವಾ ನಪುಂಸಕ ಏಕವಚನವಾಗರಲಿ ಕ್ರಿಯಾಪದದ ನಪುಂಸಕ ಏಕವಚನವೇ ಬರತ್ತದೆ.

ಉದಾ: ಅಂವ (ಪುಂ) ಬಾತ್ (ಭೂತಕಾಲ ನಪುಂ) = ಅವನು ಬಂತು.

ಅದು (ನಪುಂ) ಬಂದದೆ (ವ.ಕಾಲ, ⇈)= ಅದು ಬರುತ್ತದೆ.

ಅಂವ / ಅದ್ ಬಾದು (ಭವಿಷ್ಯತ್ಕಾಲ, ಪು. ನಪುಂ)= ಅವನು/ಅವ ಬರುವುದು)

ಪ್ರಥಮ ಪುರುಷ ಸರ್ವ ನಾಮದಲ್ಲಿ ಮಾತ್ರ ಪುಲ್ಲಿಂಗ-ನಪುಂಸಕ ಸರ್ವನಾಮದ ಕರ್ತೃ ರೂಪದಲ್ಲಿ ಮಾತ್ರ ಕಂಡುಬರುವುದಾದರೂ ಆಖ್ಯಾತ ರೂಪ (ಕ್ರಿಯಾ) ದಲ್ಲಿ ಆ ವ್ಯತ್ಯಾಸವೂ ಇಲ್ಲ. ಬಹುವಚನದಲ್ಲಿ ಪುಲ್ಲಿಂಗ ಪುಲ್ಲಿಂಗೇತರ ವ್ಯತ್ಯಾಸವೂ ಇಲ್ಲ. ಅವು ಎಂದರೆ ಮನುಷ್ಯರು ಅಥವಾ ಮೃಗಗಳು ಯಾವುವೂ ಆಗಬಹುದು. ಹೀಗೆ ಇಲ್ಲಿ ಅರೆಬಾಸೆ ಶಿಷ್ಟಕನ್ನಡಕ್ಕಿಂತ ತೀರ ಭಿನ್ನವಾದ ವ್ಯಾಕರಣ ವ್ಯತ್ಯಾಸವನ್ನು ತೋರುತ್ತದೆ.

**15. ಉತ್ತಮ ಮತ್ತು ಮಧ್ಯಮ ಪುರುಷ ಸರ್ವನಾಮಗಳು**

ಉತ್ತಮ ಪು.ಏಕ.ವ. ನಾ ಬಂದೆ (ಭೂ.ಕಾ) ಬನ್ನೆ (ವ.ಕಾ) ಬಾವೆ (ಭ.ಕಾ)

" ಬಹುವ. ನಾವು ಬಂದೊ " ಬಂದವೆ " ಬಾವೆ ""

ಬಂದೊ " ಬಾವೊ " "ಬಾವೊ

ಮಧ್ಯಮ ಪು.ಏಕ.ವ. ನೀ ಬಂದ " ಬಂದಿಯ " ಬಾವ "

" ಬಹುವ ನೀವು ಬಂದರಿ " ಬಂದರೆ " ಬಾವೊರಿ "

ಅಡಿ ಟಿಪ್ಪಣಿಗಳು

1. **ಪೂವಪ್ಪ ಕಾಣಿಯೂರು :** ದಕ್ಷಿಣ ಕನ್ನಡ ಜಿಲ್ಲೆಯ ಗೌಡರ ಐನ್ ಮನೆಗಳ ಪುಟ 252 ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ, ಸಂ. ಡಾ. ಕೆ. ಚಿನ್ನಪ್ಪ ಗೌಡ ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ (ರಿ.) ಮಂಗಳೂರು 2003, ಯದುಪತಿಗೌಡ, (ಪೂರ್ವೋಕ್ತ ಗ್ರಂಥ ಪು 299)
2. **ಡಾ. ಪುರುಷೋತ್ತಮ ಬಳಿಮಲೆ:** ಸುಳ್ಯ ಪರಿಸರದ ಗೌಡರು (ಮೇಲೆ ಉಲ್ಲೇಖಿಸಿದ ಪುಸ್ತಕ) ಇಂದಿಗೆ ಗೌಡರಲ್ಲಿ ಕೇವಲ 12 ಬಳಿಗಳು ಮಾತ್ರ ಅಸ್ತಿತ್ವದಲ್ಲಿವೆಯೆಂದು ಹೇಳಿ ಈ ಕೆಳಗಿನವುಗಳನ್ನು ಉಲ್ಲೇಖಿಸಿದ್ದಾರೆ.

   1. ನಂದರ, 2. ಬಂಗಾರ, 3. ಹೆಮ್ಮನ, 4 ಮೂಲರ, 5. ನಾಯರ, 6. ಚಾಲ್ಯರ, 7. ಗುಂಡರ, 8 ಕಬರ್, 9. ಚಿತ್ತರ, 10. ಗೌಡರ, 11 ಬಳಸನ್ನ 12. ಗೋಳಿ.

   **ಯದುಪತಿ ಗೌಡ :** ಗೌಡರು, ಜನಾಂಗ ಮತ್ತು ಕುಣಿತ, ಪೂರ್ವೋಕ್ತ ಗ್ರಂಥದಲ್ಲಿ (ಪು. 299)ರಲ್ಲಿ ಹದಿನೆಂಟು ಬಳಿಗಳನ್ನು ಗುರುತಿಸಿದ್ದಾರೆ. 1. ನಂದರ, 2 ಬಂಗಾರ, 3. ಮೂಲರ, 4. ಗುಂಡರ, 5. ಚಾಲ್ಯರ, 6. ಚಿತ್ತರ, 7. ಕೆಲ್ಲರ, 8. ನಾಯರ, 9. ಜತ್ತರ, 10. ಕಬರು, 11. ಗೌಡರ, 12. ಕರ್ಂಬೆರ, 13. ದೇವರ, 14. ಬಳಸನ್ನ, 15. ಪೆರ್ಬನ್ನ 16. ಪೆರ್ಗಡೆ, 17. ಹೆಮ್ಮನ, 18. ಲಿಂಗಾಯಿತ. ಈ ಬಳಿಗಳ ಹೆಸರುಗಳಲ್ಲಿ ಪ್ರಾದೇಶಿಕ ವ್ಯತ್ಯಾಸವಿದ್ದರೂ ಸಂಖ್ಯೆಯಲ್ಲಿ ಮಾತ್ರ ಹದಿನೆಂಟೇ ಬಳಿಗಳಿರುತ್ತವೆ ಎಂದಿದ್ದಾರೆ.
3. ದಕ್ಷಿಣ ಕನ್ನಡದಲ್ಲಾಗಲೀ, ಉತ್ತರ ಕನ್ನಡ ಜಿಲ್ಲೆಯಲ್ಲಾಗಲಿ ಹವ್ಯಕರ ಮಾತು ಕನ್ನಡದ ಪ್ರಭೇದವೇ ಆಗಿರುವುದರಿಂದ 'ಹವ್ಯಕ ಕನ್ನಡ' ವೆಂದು ಹೇಳಲೇನೂ ತೊಂದರೆಯಿಲ್ಲ. ಈಗ ಹವ್ಯಕ ಕನ್ನಡವನ್ನು 'ಹವಿಗನ್ನಡ'ವೆಂದು ಕರೆದು ಇದರಲ್ಲಿ ಸಾಹಿತ್ಯ ಚಟುವಟಿಕೆಗಳು ಬಹಳ ಚುರುಕಿನಿಂದ ನಡೆಯುತ್ತಿವೆ. ಹೊಸಗನ್ನಡದ ಮೊತ್ತ ಮೊದಲ ನಾಟಕ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ವೆಂಬ ಕೃತಿರಚನೆಯಾದದ್ದು ಹವ್ಯಕ ಭಾಷೆಯಲ್ಲೇ ಎಂಬುದೂ ಗಮನಿಸೆತಕ್ಕ ವಿಷಯ.
4. ಈ ಕನ್ನಡದ ಪ್ರಭೇದ (Dialect) ದಲ್ಲಿ ಮಹಾಪ್ರಾಣಾಕ್ಷರಗಳು ಧ್ವನಿಮಾಗಳಾಗಿಲ್ಲ. ಆದುದರಿಂದ ಇದರ ಹೆಸರನ್ನು ಅರೆಭಾಷೆ ಎಂದು ಬರೆದರೆ ಅಥವಾ ಕರೆದರೆ ಅದು ಅರಿಸಮಾನವಾಗುತ್ತದೆ. ಆದುದರಿಂದ 'ಅರೆಬಾಸೆ' ಎಂದು ಕರೆಯುವುದೇ ಸೂಕ್ತ.
5. ಹಾಗೆಂದು ಇವರು ಬಲಹೀನರೇನಲ್ಲ. ಮೊದಲ ಸ್ವಾತಂತ್ರ್ಯ ಹೋರಾಟ ನಡೆಯುವ ಇಪ್ಪತ್ತು, ಮೂವತ್ತು ವರ್ಷಗಳ ಹಿಂದೆಯೇ ಸುಳ್ಯ ಪರಿಸರದ ಗೌಡ ಮುಂದಾಳುಗಳು ಇತರ ಮುಖ್ಯವ್ಯಕ್ತಿಗಳನ್ನು ಸೇರಿಸಿಕೊಂಡು ಬ್ರಿಟಿಷರ ವಿರುದ್ಧ ದಂಗೆಯೆದ್ದು, ಬ್ರಿಟೀಷರ ವಶವಿದ್ದ ಮಂಗಳೂರನ್ನು ವಶಪಡಿಸಿಕೊಂಡು ಒಂದು ವಾರ ಕಾಲ ಈ ಪ್ರದೇಶವನ್ನು ಆಳಿದರು. (ವಿವರಗಳಿಗೆ ನೋಡಿ: ಎನ್. ಎಸ್. ದೇವಿಪ್ರಸಾದ್ ಸಂಪಾಜೆ **2013** ಗೌಡರ ಏಳುಬೀಳು-ಚಾರಿತ್ರಿಕ ಅವಲೋಕನ (ಪು. 65 ಪೂರ್ವೋಕ್ತ ಗ್ರಂಥ)
6. ಇವುಗಳ ಉಚ್ಚರಣೆಯ ವಿವರ ಹೀಗಿವೆ : ɛ ಉನ್ನತ ಮಧ್ಯ ವಿವೃತ ಸ್ವರ. ə ಮಧ್ಯ ಮಧ್ಯ ವಿವೃತ ಸ್ವರ; ɛ ಪೂರ್ವ ನಿಮ್ನ ವಿವೃತ ಸ್ವರ. ə ಪಶ್ಚ, ಮಧ್ಯ ವಿವೃತ ಸ್ವರ.
7. ಇಲ್ಲಿ ಅಕಾರಕ್ಕಿಂತ ಭಿನ್ನವಾದ ಅಂದರೆ ನಿಮ್ನ ಮಧ್ಯದ ಬದಲು ಮಧ್ಯ ಮಧ್ಯ ಸ್ವರದ ಉಚ್ಚಾರಣೆಯನ್ನು ಸೂಚಿಸಲು ə ಸಂಜ್ಞೆಯನ್ನು ಬಳಸಿದೆ.
8. ಆಧುನಿಕ ವಿದ್ಯಾವಂತರಾದ ಕೆಲವು ವ್ಯಕ್ತಿಗಳು ಸ್ತ್ರೀಲಿಂಗವನ್ನು ನಪುಂಸಕದೊಡನೆ ಸೇರಿಸುವುದು ಸರಿಯಲ್ಲವೆಂದು ಭಾವಿಸಿ


ಯಿಂದ ಶಿಷ್ಟ ಕನ್ನಡದಂತೆ ಅವಳು, ಇವಳು ಎಂದು ಪ್ರಯೋಗಿಸುವುದು ಸಾಮಾನ್ಯವಾಗಿ ಕೇಳಿಬರುತ್ತದೆ. ತಾವು ಸುಧಾರಕರು ಎಂದು ಅವರು ಬೀಗಿದರೂ, ವಾಕ್ಯದ ಆಖ್ಯಾತ ರೂಪದಲ್ಲಿ ನಪುಂಸಕ ರೂಪವೇ ಬರುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಅವ್ಳು ಹೇಳ್ತ್ = ಅವಳು ಹೇಳಿತು ಎಂದೇ ಹೇಳಬೇಕಾದ ಕಡ್ಡಾಯಕ್ಕೆ ಒಳಗಾಗಬೇಕಾಗುತ್ತದೆ.

9. ವರ್ತಮಾನ ಕ್ರಿಯಾಪದದಲ್ಲಿ ನಾನು ಹೋಗುತ್ತೇನೆ, ನಾನು ಬರುತ್ತೇನೆ ಎಂಬ ದೀರ್ಘ ಪದಗಳನ್ನು ಅರೆಭಾಷೆಯಲ್ಲಿ ಸಂಕುಚಿತಗೊಳಿಸಿ, 'ನಾ ಹೋನೆ; ನಾ ಬನ್ನೆ' ಎಂದು ಹೇಳುತ್ತಾರೆ. ಶಿಷ್ಟ ಪದಗಳನ್ನು ಕಂಪ್ರೆಸ್ (Compress) ಮಾಡುವುದು ಉಪಭಾಷೆಗಳಲ್ಲಿ (dialects) ಕಂಡುಬರುವ ಸಾಮಾನ್ಯಗುಣ. ಈ ಕಾರಣದಿಂದ ಇವುಗಳಲ್ಲಿ ಸಂಯುಕ್ತ ವರ್ಣಗಳು ಅಧಿಕ ಸಂಖ್ಯೆಯಲ್ಲಿರುತ್ತವೆ. ಕನ್ನಡದ, ಒಂದು ಪ್ರಭೇದವಾದ ನೀಲಗಿರಿಯ ಬಡಗರಮಾತಿನಲ್ಲೂ 'ನಾ ಹೋನೆ', 'ನಾ ಬನ್ನೆ' ಎಂದು ಹೇಳುತ್ತಾರೆ. ಬಡಗರ ಹೆಸರಲ್ಲಿ ಗೌಡ ಎಂಬ ಜಾತಿ ವಾಚಕವೂ ಸೇರುತ್ತದೆ.

## ಉದಯ ಗೀತೆ

ಬೆಳಕು ಹರಿಯಿತು ಕಾರ್ಮೋಡ ಸರಿಯಿತು
ಉದಯವಾಯಿತು ಅರೆಭಾಷಾ ಪಂಡಿತ ಸಭೆಯು
ಸಂತಸಗೊಂಡಿತು ನಮ್ಮೀ ಸವಿ ನುಡಿಯು ||

ಸೆಳೆ ಮಿಂಚಾಯಿತು ರವಿಕಿರಣ || ೨ ||
ಮುದು ನೀಡಿತು ಅರೆಭಾಷಾ ಸ್ಫುರಣ || ೨ ||
ಎದೆಯುಬ್ಬಿ ಘಮಿಸಿತು ಕಾವೇರಿ ನಾಡಿನಲಿ || ೨ ||
ಏಲಕ್ಕಿ, ಕಾಫಿ, ಕರಿಮೆಣಸು || ೨ ||
ಅರೆಭಾಷಾ ಮೋಡಿಗೆ ನಮಿಸಿತು ಬಾಗಿ || ೨ ||
ದಕ್ಷಿಣ ಕನ್ನಡದ ಅಡಿಕೆ, ತೆಂಗು || ೨ ||



ಪಾಪನಾಶಿಸಿ ಕಾವೇರಿ ನಾಡಲ್ಲಿ || ೨ ||
ಪಯಸ್ವಿನಿ ಹರಿವ ದಕ್ಷಿಣ ದಿಕ್ಕಿನಲ್ಲಿ || ೨ ||
ಮಾನ್ಯತೆ ದೊರೆಯಿತು ಅರೆಭಾಷಾ ನುಡಿಗೆ || ೨ ||
ಪಾವನವಾಯಿತು ಈ ಭಾಷೆಯ ಜನತೆ || ೨ ||
|| ಬೆಳಕು ಹರಿಯಿತು ||
ಉತ್ತುಂಗಕ್ಕೇರಲಿ ಅರೆಭಾಷಾ ಹಿರಿಮೆ || ೨ ||
ಈ ಸಂಸ್ಕೃತಿಯ ಗರಿಮೆ || ೨ ||
ಹಿರಿಮೆಯ ನೆರಳಲಿ ಬಾಳಲಿ ಪೀಳಿಗೆ || ೨ ||
ಅಭಿವೃದ್ಧಿಯಾಗಲಿ ಅರೆಭಾಷಾ ಸಾಹಿತ್ಯ
ಬೆಳಗುತಿರಲಿ ದೇಶದೆಲ್ಲೆಡೆ
ಸಂಸ್ಕೃತಿ, ಸಂಸ್ಕಾರ ಅನವರತ.

*ರಚನೆ : ಅಮೆ ವಾಲಾಕ್ಷ*



# ಸುರಗಿ - ತಾಯ್ತನದ ಪ್ರತೀಕ

ಡಾ.ಪೂವಪ್ಪ ಕಣಿಯೂರು
ಸಹ ಪ್ರಾಧ್ಯಾಪಕರು,ನೆಹರು ಮೆಮೋರಿಯಲ್ ಕಾಲೇಜು
ಸುಳ್ಯ ದ.ಕ., 574327
E- mail- pkaniyoor@gmail.com
Ph : 9448984485

ಮನುಷ್ಯ ಮತ್ತು ಪ್ರಕೃತಿಯ ಅನುಸಂಧಾನದಲ್ಲಿ 'ಅಪರೂಪ' ಎನ್ನಬಹುದಾದ ಉದ್ದಿಷ್ಟ ಕಾರಣಗಳಿರುತ್ತವೆ. ಒಂದೊಮ್ಮೆ ಹೀಗೆ ರೂಪಿತವಾಗುವ ಸಮುದಾಯಗಳ ಅನನ್ಯ ಸಾಂಸ್ಕೃತಿಕ ಚಹರೆಗಳೇ ಮುಂದೊಂದು ದಿನ ಆ ಸಮುದಾಯದ ಸಾಂಸ್ಕೃತಿಕ ಪ್ರತಿನಿಧೀಕರಣಗಳಾಗಿ ಮೌಖಿಕ ಸಂಕಥನಗಳಲ್ಲಿರುತ್ತವೆ. ಇವೇ ಕಾಲಾವರ್ತನಗಳಲ್ಲಿ ಆಚರಣಾ ವಿಧಿಗಳಾಗಿ ವಿರೇಚನಗೊಂಡು ವರ್ತಮಾನವೂ ಆಗಿ ಬಿಡುತ್ತವೆ. ಈ ಬಗೆಯ ಸಮುದಾಯದ ಸಾಂಸ್ಕೃತಿಕ ಸಂರಚನೆಗಳ ರೂಪೀಕರಣದಲ್ಲಿ ನೈಸರ್ಗಿಕವಾಗಿ ವಿಶೇಷವಾಗಿರುವ ವಸ್ತು ಸಂಗತಿಗಳು ಬೆರಗಿಗೊ ವಿಸ್ಮಯಕ್ಕೊ ಕಾರಣವಾಗಿ ಆರಾಧನಾ ಭಾವವಾಗಿ ಸ್ವೀಕಾರವಾಗುವುದುಂಟು. ಹಾಗೆಯೇ ಜೀವನ ನಿರ್ವಹಣೆಗೆ ಅಗತ್ಯವಾಗಿ ಒದಗಿಬರುವ, ಕೆಲವೊಮ್ಮೆ ಸುಂದರವಾಗಿ ಇರುವ ವಸ್ತುಗಳನ್ನು ಸಮುದಾಯ ವಿಶೇಷವಾಗಿ ಮನ್ನಿಸುತ್ತದೆ. ಈ ಕಾರಣ ಹಿನ್ನೆಲೆಯಲ್ಲಿ ಅಪರೂಪವಾದುದನ್ನು ಸಮುದಾಯ ತಮ್ಮ ಸಾಂಸ್ಕೃತಿಕ ಜಗತ್ತಿನಲ್ಲಿ 'ಅನನ್ಯತೆಯ' ಪ್ರತಿನಿಧೀಕರಣದ ನೆಲೆಯಲ್ಲಿ ಸ್ಥಾಪಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ಏಕಕಾಲದಲ್ಲಿ ಒಂದು ವೃಕ್ಷ ಮತ್ತು ಪುಷ್ಪವಾಗಿ ಪರಿಕಲ್ಪಿತಗೊಳ್ಳುವ 'ಸುರಗಿ' ಸಮುದಾಯದ ಒಟ್ಟಾರೆ ಸಾಂಸ್ಕೃತಿಕ ಆಯಾಮದಲ್ಲಿ ಪಡೆದುಕೊಳ್ಳುವ ಅರ್ಥವಂತಿಕೆಯನ್ನು ಅರ್ಥೈಸಲು ಅವಕಾಶವಿದೆ.

ಸ್ಥೂಲ ನೋಟಕ್ಕೆ ಸುರಗಿಯು ಮೈಸಿರಿ ಆಕರ್ಷಕವಾಗಿಯೇ ಗೋಚರಿಸುತ್ತದೆ. ಸಸ್ಯ ಶಾಸ್ತ್ರೀಯ ಪ್ರಕಾರ 'ಮಾಮ್ಮಿಯಾ ಲೋಂಜಿಪೋಲಿಯಾ' ಎಂದು ಕರೆದುಕೊಳ್ಳುವ ಈ ಮರವನ್ನು ಅರೆಭಾಷಿಕರು 'ಸೊರ್ಗೆ' ಎಂದು ಕರೆದರೆ ತುಳುವರು ಸುರಗೆ, ಸೊರಗೆ, ಸೊರಕೆ ಎಂದು ಹೆಸರಿಸುತ್ತಾರೆ. ಹಿಂದಿಯಲ್ಲಿ ನಾಗ್ನೇಸರ್, ಬಂಗಾಲಿಗರು ನಾಗೇಶರ್, ಮರಾಠಿಗರು ಪುನ್ನಾಗ, ಗುರ್ಜರರು ರತಿ ನಾಗ್ನೇಶರ್, ಕನ್ನಡಿಗ ಮತ್ತು ಕೊಂಕಣಿಗರು 'ಉಂಡಿ' ಎನ್ನುವ ಭಾಷಿಕ ಶಾಬ್ದಿಕ ವೈವಿಧ್ಯತೆಯಲ್ಲಿ ಗುರುತಿಸುತ್ತಾರೆ. ಹೀಗಾಗಿ ಪಶ್ಚಿಮ ಘಟ್ಟ ಸಾಲಿನ ಇಕ್ಕೆಲಗಳ ಭೂಭಾಗದಲ್ಲಿ ಸಹಜವಾಗಿ ಬೆಳೆಯುವ ಈ ಮರ ಭಾರತಾದ್ಯಂತ ಬೆಳೆಯುತ್ತದೆನ್ನಲು ಅಡ್ಡಿಯಿಲ್ಲ. ದ.ಕ.ದಲ್ಲಿ ಕಂಗು ತೆಂಗಿನ ತೋಟದಲ್ಲೂ ಸ್ಥಳಗಿಟ್ಟಿಸುವ ಈ ಮರದಲ್ಲಿ ಹೂವಾದ ಬಳಿಕ ಕಾಯಿ-ಹಣ್ಣು ಆಗುತ್ತದೆನ್ನುವುದು ಸಾಮಾನ್ಯ ಸಂಗತಿ. ಸುರಗಿ ಹಸಿರು-ಹಳದಿ ಬಣ್ಣದ ನಿಂಬೆ ಗಾತ್ರದ ಕಾಯಿ ಬಿಡುತ್ತದೆ. ಕಾಯೊಳಗಿನ ತಿರುಳು ನೆಲ ಸೇರಿ ಅದರ ಪುನರ್ ಸೃಷ್ಟಿಗೆ ಕಾರಣವಾಗುತ್ತದೆ. ಅಷ್ಟೇ ಅಲ್ಲದೆ ಅದರ ಹಳೆ ಬೇರು ಹೊಸ ಚಿಗುರಿಗೆ ಕಾರಣವಾಗಿ ತನ್ನ ಸಂತಾನವನ್ನು ವೃದ್ಧಿಸಿಕೊಳ್ಳುವ ವೈಶಿಷ್ಟ್ಯವನ್ನು ಹೊಂದಿದೆ. ಸುರಗಿ 50 ಅಡಿಗಿಂತಲೂ ಎತ್ತರವಾಗಿ ಮತ್ತು ದಪ್ಪವಾಗಿ ಬೆಳೆಯುತ್ತದೆ ಈ ಮರ ಪೀಠೋಪಕರಣಗಳ ತಯಾರಿಗೂ ಬಳಕೆಯಾಗುತ್ತದೆ. ಸುರಗಿ ತನ್ನ ವಿಶಿಷ್ಟ ಗುಣಾಂಶಗಳಿಂದಾಗಿ ಬಹುಪಯೋಗಿ. ಹಣ್ಣಿನಲ್ಲಿರುವ ಹಳದಿ ಮಿಶ್ರಿತ ತೈಲಾಂಶ ಗಾಳಿಯಲ್ಲಿ ತಕ್ಷಣ ಲೀನವಾಗಬಲ್ಲುದು. ಬೀಜದಲ್ಲಿ ಸ್ಥಿರ ತೈಲವಿದೆ. ಫಲ ಕಹಿ ರುಚಿಯುಳ್ಳದ್ದಾಗಿದೆ. ಹಲವು ರಾಸಾಯನಿಕ ಸಂಘಟನೆ ಇರುವ ಈ ಸುರಗಿ ಔಷದಿಯಾಗಿ ಹಲವು ರೋಗಗಳಿಗೆ

ಪರಿಹಾರವಾಗುತ್ತದೆ. ಮೊಗ್ಗು, ಹೂನಿಂದ ತೆಗೆಯುವ ರಸ ರಕ್ತಸ್ರಾವ ನಿಲ್ಲಿಸಬಲ್ಲುದು. ಹೂವಿನ ಪುಡಿ/ಕಲ್ಕ, ಮೂಲವ್ಯಾಧಿ, ವಾಂತಿ, ರಕ್ತಭೇದಿಗಳನ್ನು ನಿಲ್ಲಿಸಬಲ್ಲುದು. ಸ್ತ್ರೀ ಸಂಬಂಧಿ ಕಾಯಿಲೆಗಲಿಗಂತೂ ದಿವ್ಯ ಔಷಧ. ಒಟ್ಟಾರೆಂಯಾಗಿ ಮಕ್ಕಳಿಂದ ಮೊದಲ್ಗೊಂಡು ಮದುಕರವರೆಗಿನ ಎಲ್ಲಾ ವಯೋಮಾನದವರ ಸಾಮಾನ್ಯ ರುಜಿನಗಳನ್ನು ನಿವಾರಿಸಬಲ್ಲ ಔಷಧೀಯ ಗುಣಗಳಿಂದ ಸಮುದಾಯವನ್ನು ತನ್ನೆಡೆಗೆ ಸೆಳೆಯಬಲ್ಲ ಮರವಿದು. ಅಷ್ಟರಮಟ್ಟಿಗೆ ಈ ಮರಕ್ಕೆ ಜೀವಪರ ನಿಲುವಿನ ಭಂಗಿ ಇದೆ. ಈ ಕಾರಣಕ್ಕಾಗಿಯೇ ಈ ಮರವನ್ನು ಸಮುದಾಯ ಮಡಿ ದೃಷ್ಟಿಯಿಂದ ಪರಿಗ್ರಹಿಸಿ ಈ ಮರದ ಹೂವನ್ನು 'ಮುಟ್ಟಾದ ಸ್ತ್ರೀಯರು ಹತ್ತಿ ಕೊಯ್ಯಬಾರದು' ಎಂದು ನಿಷೇಧಿಸಿದೆ.

ವಿಶೇಷವೆಂದರೆ ಸುರಗಿ ಕೊಂಬೆಯ ಎಲೆ ಎಸಲಿನೆಡೆಯಲ್ಲಿ ಹೂವು ಬಿಡದೆ ರೆಂಬೆಯಲ್ಲಿಯೇ ಬಿಡುತ್ತದೆ. ಸಾಮಾನ್ಯವಾಗಿ ವಾರ್ಷಿಕಾವರ್ತನದ ಶಿಶಿರ ಋತು ಹಿಂದೆ ಸರಿಯುವ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಸುರಗಿ ಹೂವು ಬಿಡುತ್ತದೆ. ಇದು ವಸಂತಾಗಮನದ ಕಾಲವೂ ಹೌದು. ಒಂದರ್ಥದಲ್ಲಿ ಸುರಗಿ ಹೂವು ಬಿಡುವುದರ ಮೂಲಕ ವಸಂತ (ಸುಗ್ಗಿ)ನ ಆಗಮನಕ್ಕೆ ಸ್ವಾಗತ ಕೋರುವಂತಿದೆ. ಸುರಗಿ ಹೂವು ಬಿಟ್ಟಿತ್ತೆಂದರೆ ಪರಿಸರವೆಲ್ಲ ಸುಗಂಧಮಯವಾಗುತ್ತದೆ. ಆಗ ಸಹಜವಾಗಿಯೇ ಜೇನು–ದುಂಬಿಗಳು ಆಕರ್ಷಿತವಾಗುತ್ತವೆ. ಮರದಡಿ ಝೇಂಕಾರ ಕೇಳಿಸುತ್ತದೆ. ನಮ್ಮ ಹಳೆಯ ಪಂಪ, ಹರಿಹರನಂತಹ ಅಲ್ಲದೆ ಎಸ್.ವಿ.ಪರಮೇಶ್ವರ ಭಟ್ಟರಂತ ಆಧುನಿಕ ಪ್ರಕೃತಿ ಪ್ರಿಯ ನವನವೋನ್ಮೇಷಣ ಶಾಲಿನೀ ಪ್ರಜ್ಞೆಗಳಿಗೆ 'ಸುರಿವ ಸುರಯಿಯರಲ ಮುಗುಳ್ಗೆ ಮೊಗಸಿದಳಿಕುಳ' ಎಂದು ಹಾಡಲು ಸ್ಫೂರ್ತಿಧಾಮವಾಗುತ್ತದೆ. ದಪ್ಪ ಶಂಕುವಿನಾಕಾರದ ಎಲೆಗಳಿಂದ ಕೂಡಿದ ಈ ಮರ ಅಷ್ಟೇ ದಟ್ಟ ನೆರಳನ್ನು ನೀಡುತ್ತದೆ. ಮೊಗ್ಗು ಬಿಟ್ಟಾಗ ಆಗ ತಾನೇ ಬಿರಿದ ಹೊದಳನ್ನೊ ಅಥವಾ ಮುತ್ತನ್ನೊ ಕೊಂಬೆಗೆ ಅಂಟಿಸಿದಂತೆ ಸುರಗಿ ಮೊಗ್ಗುಗಳು ಕಾಣುತ್ತವೆ.

ಮೊಗ್ಗು ಅರಳಿದಾಗ ಪೂರ್ಣ ಕಂದುವೂ ಅಲ್ಲದ ಬಿಳಿ ಮಿಶ್ರಿತ ಸುರಗಿ ಹೂವುಗಳು ನಾಲ್ಕು ದಳ ಸಹಿತ ಹಳದಿ ಕೇಸರದಿಂದ ಕಂಗೊಳಿಸುತ್ತವೆ. ಸುಮ ಪ್ರಿಯರಾದ ಕೋಮಲೆಯರು ಸೂರ್ಯನ ಕಿರಣ ಬಿದ್ದು ಮೊಗ್ಗರಳುವ ಮುನ್ನವೇ ಸುರಗಿಯನ್ನು ಮಾಲೆ ಕಟ್ಟಿ ಮುಡಿಯಬೇಕಾಗುತ್ತದೆ. ಯಾಕೆಂದರೆ ಸೂರ್ಯ ಹೊರಳಿ ಹೂವರಳಿದರೆ ಮಾಲೆ ಕಟ್ಟುವುದು ಕಷ್ಟ. ಬಿದ್ದ ಸುರಗಿ ಹೂ ನೆರಳಿನಲ್ಲಿ ಒಣಗಿದರೆ ಪರಿಮಳ ಇನ್ನೂ ಹೆಚ್ಚು. ಸುರಗಿಗೆ ಇತರ ವನಸುಮಗಳಂತೆ ತಕ್ಷಣ ಹಾಳಾಗುವ ಗುಣವಿಲ್ಲ. ಹಾಗಾಗಿ ಅಮ್ಮಂದಿರು ಕಟ್ಟಿದ ಸುರಗಿ ಮಾಲೆಯನ್ನು ತಮ್ಮ ಮನೆಯ ಕರಡಿಗೆಗಳಲ್ಲಿ ವರ್ಷಾಂತರಗಳಲ್ಲಿ ಜೋಪಾನವಾಗಿಟ್ಟು ಮತ್ತೆ ಮತ್ತೆ ಮುಡಿಯುತ್ತಿದ್ದರು.

ಮೌಖಿಕ ಪರಂಪರೆಯ ಅನಾಮಧೇಯ ಜನಪದ ಕವಿಯೊಬ್ಬ ಮಗನ ಮುಗ್ಧಾಕರ್ಷಣಾ ಚೆಲುವನ್ನು ಸ್ವಭಾವೋಕ್ತಾಲಂಕಾರದಲ್ಲೆ ವರ್ಣಿಸಲು

*ನನ್ನಯ್ಯನಂತೋರು ಹನ್ನೆರಡು ಜನ*
*ಹೊನ್ನೆಯ ಮರದಡಿ ಆಡುವಾಗ*
*ಸಂನ್ಯಾಸಿ ಜಪವ ಮರೆತಾನು*

ಎಂದು ಹಾಡುವಲ್ಲಿ ಸಮುದಾಯ ಬದುಕಿನಲ್ಲಿ ಅನ್ಯೋನ್ಯವಾಗಿರುವ ಹೊನ್ನೆಯ ಮರವನ್ನು ಸಹಜವಾಗಿಯೇ ದಾಖಲಿಸಿದ್ದಾನೆ. ಬಹುಷಃ ಹಾಡುಗಳಲ್ಲಿ ಅಲ್ಲದಿದ್ದರೂ ಅನೇಕ ಜನಪದ ಕತೆಗಳಲ್ಲಿ ಸುರಗಿ ಮರ ಹೆಣ್ಣು ಮಕ್ಕಳು ಹೂ ಕೊಯ್ಯುವ, ಕೌಟುಂಬಿಕವಾಗಿ ಹೆತ್ತವರೊಂದಿಗೊ ಅಥವಾ ಗಂಡನ ಸಂಸಾರದೊಂದಿಗೋ ಮುನಿಸಿಕೊಂಡು ಆಶ್ರಯ ಕಾಣುವ ಕಾರಣಕ್ಕಾಗಿಯಾದರೂ ಉಲ್ಲೇಖಿತವಾಗುತ್ತದೆ.

ಅಕ್ಷರ ಪರಂಪರೆಯ ಕವಿಗಳಿಗೆ ಸುರಗಿ ಬಹು ಪ್ರಿಯವಾದ ಹೂವಿನ ಮರ. ಆದಿ ಕವಿ ಪಂಪ ವಿಭಿನ್ನ ಜಾತಿಯ ಲತೆ ಮತ್ತು ಲತಾಂಗಿಯರನ್ನು ಏಕತ್ರ ಭಾವದಿಂದ

ಸಮೀಕರಿಸಿ ಪ್ರೀತಿಯಿಂದ ಹಾಡಿದ್ದಾನೆ. ತನ್ನ ಆದಿಪುರಾಣದಲ್ಲಿ ಹೂವುಗಳೊಂದಿಗೆ ಲತಾಂಗಿಯರಿಗೆ ಏರ್ಪಡುವ ಸಂಬಂಧಗಳನ್ನು ವರ್ಣಿಸುವ ನೆವದಲ್ಲಿ ಪುಷ್ಪ ಪ್ರದರ್ಶನವನ್ನೇ ಏರ್ಪಡಿಸುತ್ತಾನೆ. ಭರತ ಚಕ್ರವರ್ತಿ ಜೈತ್ರಯಾತ್ರೆಗೆಂದು ಅಂತಃಪುರ ಸ್ತ್ರೀಯರೊಂದಿಗೆ ಬಂದು ಗಂಗಾತಟದಲ್ಲಿ ವನ ವಿಹಾರ ಮಾಡುವಾಗ 'ವನಶ್ರೀ ಬಣ್ಣಿಸಲ್ಬರ್ಕುಮೇ' ಎಂದು ಹೇಳುತ್ತಲೇ ಮಾಧವಿ, ಅಶೋಕ, ಸುರಹೊನ್ನೆ, ಬಕುಳಗಳೊಂದಿಗೆ ಸುರಗಿ ಬಗ್ಗೆ

*ಪೊಸ ಮುತ್ತಿನ ಲಂಬಣದೊಳ್*
*ಮುಸುಂಕಿದಂತಿಡಿಯೆ ಪೂತ ಸುರಯಿಯ ಮುಗುಳಂ*
*ಪಸವಟ್ಟಂತೂರ್ವರ್ಗಳ್ ತನಗೆ ಸರಿಗೆಗಂ*
*ಲಂಬಣಕ್ಕಮಳ್ತಿಯೊಳಾಯ್ದಳ್*

ಎಂದು ವರ್ಣಿಸಿ ಸುರಗೆ ಮೊಗ್ಗಿನ ಸ್ವರೂಪವನ್ನು ಮತ್ತು ಅದನ್ನು ಸಾಮಾನ್ಯವಾಗಿ ಸ್ತ್ರೀಯರು ಆಸೆಪಟ್ಟು ಸರಿಗೆಯಂತೆ ಮಾಲೆ ಮಾಡಿ ಪ್ರೀತಿಯಿಂದ ಮುಡಿಯುವ ಕುರಿತಾದ ಅರಿವನ್ನು ನಮ್ಮಲ್ಲಿ ವಿಸ್ತರಿಸುತ್ತಾನೆ.

ದಟ್ಟ ಮತ್ತು ದಪ್ಪ ಎಲೆಗಳನ್ನುಳ್ಳ ಸುರಗಿಯ ಅಡಿ ಭಾಗ ಸದಾ ತಂಪಾಗಿರುತ್ತದೆ. ಹೀಗಾಗಿ ವೈಶಾಖದ ವ್ಯೈಶಾಖವನ್ನು ತಂಪಾಗಿಸುವ ಗುಣ ಸುರಗಿಗೆ ಸಹಜವಾಗಿದೆ. ವಿಕ್ರಮಾರ್ಜುನನ ಪ್ರತೀಕ್ಷೆಯಿಂದಾದ ತನ್ನ ಕಾಮ ತಾಪವನ್ನು ಸುಭದ್ರೆ ಪರಿಹರಿಸಿಕೊಂಡ ವಿಧಾನದಲ್ಲಿ ಪಂಪ ಕವಿ ಈ ಭಾವವನ್ನು

*ಸುರಯಿಯ ಬಿರಿ ಮುಗುಳ್ಗಳ ಪೊರೆ*
*ಮೊರೆಯೊಳ್ ಪೊರೆವೊರಕನಲ್ಲದಲ್ಲುಗುವ ರಜಂ*
*ಬೊರೆದು ಪರಕಲಿಸಿದಳಿಕುಳ*
*ಪರಿಕರಮುವನತನು ಶಿಖಿಯ ಕಿಡಿಗಳೆಗೆತ್ತಳ್*

ಎಂದು ಅಭಿವ್ಯಕ್ತಿಸುತ್ತಾನೆ. ದುಂಬಿಗಳು ಅರಳಿದ ಸುರಗಿ ಹೂವುಗಳನ್ನು ಆವರಿಸಿದಾಗ ಹೊರ ಚೆಲ್ಲಿದ ಕೇಸರ ಧೂಳಿಯಿಂದ ಅವಳು ತನ್ನ ದೇಹದ ಬೆಂಕಿಯ ಕಿಡಿಗಳನ್ನು ಕಳೆದುಕೊಂಡಳೆನ್ನುವಲ್ಲಿ ಸುರಗಿಗೆ ಇತರ ಹೂವುಗಳಾದ ಮಲ್ಲಿಗೆ, ಸಂಪಿಗೆ, ಅಶೋಕಗಳಿಗೆ ಬರುವ ಮನಸ್ಸನ್ನು ಉದ್ದೀಪಿಸುವ ಗುಣವಿದ್ದವನ್ನು ವ ಭಾವವು ಇದೆ.

ಕನ್ನಡದ ಇನ್ನೊಬ್ಬ ಕವಿ ಜನ್ನನಿಗೂ (ಯ.ಚ) ಮಾರಿದೇವತೆಯ ಆರಾಧನೆಗೆ ಹೋಗಿ ಬಂದ ಚೈತ್ರದ ವರ್ಣನೆಯಲ್ಲಿ 'ಕೃಷ್ಣವ (ಚಿಗುರಿದ ಅಶೋಕ) ಅಸುಗೆಯುರಿಯುಯ್ಯಲೆ'ಯಾಗಿ. ಉದುರಿದ ಮುತ್ತುಗದ ಮೊಗ್ಗುಗಳು 'ಕುಸುರಿದಂಡದಗಿನಂತೆ' ಗೋಚರಿಸುತ್ತವೆ. ಅಶೋಕ ಮತ್ತು ಮುತ್ತುಗದ ಹೂವುಗಳು ಸನ್ನಿವೇಶ ಭಿನ್ನತೆಗಳಲ್ಲಿ ಜೀವಪರ ಮತ್ತು ಜೀವ ವಿರೋಧಿ ನೆಲೆಯನ್ನು ಏಕಕಾಲದಲ್ಲಿ ಸಾಂಕೇತಿಸಬಲ್ಲವು. ಆದರೆ ಸುರಗೆಗೆ ಜೀವ ಪರವಾದ ಸಾಂಕೇತಿಕತೆಯೇ ಸೂಕ್ತವಾಗಿದೆ. ಸುರಗಿ, ಅಶೋಕ ಮತ್ತು ಬಕುಳದ(ರೆಂಜ) ಹೂವುಗಳು ತೀರ ಭಿನ್ನ ಸ್ವರೂಪದವುಗಳಲ್ಲ. ಪರಸ್ಪರವಾಗಿಯೇ ಗೋಚರಿಸುತ್ತವೆ. ಬಹುತೇಕ ಕವಿಗಳು ಕಾವ್ಯಸಂದರ್ಭೋಚಿತವಾದ ಪ್ರಕೃತಿ ವರ್ಣನೆಯಲ್ಲಿ ಸುರಗಿ, ಕದಂಬ, ಜಾಲಿ, ಮಾಧವಿ, ಅದಿರ್ಮುತ್ತೆ, ಮಾಲತಿ, ಸುರಹೊನ್ನೆ, ಕರ್ಣಿಕಾರ, ಚಂಪಕ, ಕೇತಕೆ, ಬಕುಳ ಇತ್ಯಾಧಿಗಳನ್ನೇ ಆಯ್ದುಕೊಳ್ಳುತ್ತಾರೆ. ಇವೆಲ್ಲವೂ ಕಾಡು ಮೂಲದವಾಗಿದ್ದು ಸಹಜವಾಗಿ ಜೀವ ಸಂಕುಲಗಳಿಗೆ ಆಶ್ರಯವನ್ನು ನೀಡುತ್ತವೆ. ಹೀಗಾಗಿ ಕವಿಗಳಿಗೆ

*ಸುರಯಿಯೊಳ್ಗಿಳಿ ಮುಗುಳ್ವರಗಿಳಿ ಬಿರಯಿಗೆ*
*ಮೊರೆವಂತೆ ಮೊರೆವ ಮರಿದುಂಬಿ ತಳಿರೊಳ್*
*ಪರಭೃತ ಮುಗುಳ್ವ ಪರಭೃತಂ*

ಎಂದು ಪ್ರಕೃತಿ ಮತ್ತು ಜೀವ ಸಂಕುಳಗಳೊಳಗಿನ ಅನುಸಂಧಾನವನ್ನು ಏಕೀಭವಿಸಿ ಹೇಳಲು ಸಾಧ್ಯವಾಗಿದೆ. ಜೊತೆಗೆ ಪ್ರಣಯ ಚೇಷ್ಟೆಯನ್ನು ಕಂಡು ಕಾಣಿಸಲು ಅನುಕೂಲವಾಗುತ್ತದೆನ್ನುವುದಕ್ಕೆ ಪಂಪನ ಆದಿಪುರಾಣದಲ್ಲಿ ಬರುವ ಮೇಲಿನ ತ್ರಿಪದಿಯೇ ಸಾಕ್ಷಿಯಾಗಿದೆ. ಹಣ್ಣು ನೆರಳನ್ನು ಕೊಡುವ ಶಕ್ತಿಯಿರುವ ಸುರಗೆಗೆ ಪಕ್ಷಿಗಳನ್ನು ಸೆಳೆಯುವುದು ಕಷ್ಟವಲ್ಲ.

ಅಪರೂಪವಾಗಿರುವುನ್ನು ವಿಶೇಷವಾಗಿ ಕಾಣುವ

ಜನಪದರಿಗೆ ಸುರಗಿ ಕೂಡ ಹಾಗೆಯೇ ಕಂಡಿದೆ. ಅನನ್ಯವಾಗಿರುವುದನ್ನು ವಿಶೇಷತಾ ಭಾವಿತವಾಗುವಲ್ಲಿ ಅದಕ್ಕೊಂದು ಧಾರ್ಮಿಕ ಸ್ಪರ್ಶವಿರುತ್ತದೆ. ದ್ರಾವಿಡ ಮೂಲದ 'ಬಡಗ' ಭಾಷೆಗೆ ತೀರ ಸಮೀಪವರ್ತಿಯಾಗಿರುವ ಅರೆಭಾಷೆ ದ.ಕ.ಜಿಲ್ಲೆಯ ತೆಂಕು ಸೀಮೆಯಲ್ಲಿ ಬಳಕೆಯಾಗುತ್ತಿದೆ. ಕೊಡಗನ್ನೂ ಒಂದಷ್ಟು ಆವರಿಸಿದೆ. ಇದು ಮೂಲತಃ ದೈವರಾಧನೆ ಚಾಲ್ತಿಯಲ್ಲಿರುವ ಭೂಭಾಗ. ಅರೆಭಾಷಿಕರಾದ ಇಲ್ಲಿನ ಗೌಡರು ಈ ಪ್ರದೇಶಕ್ಕೆ ವಲಸಿಗರೇ ಹೊರತು ಮೂಲನಿವಾಸಿಗರಲ್ಲ. ದೈವಾರಾಧನೆಯನ್ನು ಅವರಿಂದು ಅದು ಆಸ್ತಿಯ ವರ್ಗಾವಣೆಯೊಂದಿಗೆ ಆದ ಕಾರಣಕ್ಕಾಗಿ ನಡೆಸುತ್ತಾರೆ. ಮೂಲತಃ ಅವರು ಭೂತಾರಾಧಕರಲ್ಲ. ದೈವಾರಾಧನೆಯಲ್ಲಿ ಕೇಪುಲ ಹೂವಿಗೆ ಪ್ರಧಾನ ಸ್ಥಾನ. ಅದೊಂದು ಆಚರಣೆಯಲ್ಲಿರಬೇಕಾದ ಅಗತ್ಯ ಸುವಸ್ತು. ಈ ಬಗೆಯಲ್ಲಿ ಸುರಗಿಗೆ ಪ್ರಧಾನ್ಯತೆ ಇಲ್ಲ. ಶಿಷ್ಟ ದೇವಸ್ಥಾನಗಳಿಗೆ ಸುರಗಿ, ಅಶೋಕ, ಕೇಪುಲ, ಬಕುಳದಂತಹ ಕಾಡು ಹೂವುಗಳಿಗೆ ಪ್ರವೇಶ ಮಡಿ ಸಂಪ್ರದಾಯ ಎನ್ನುವ ಕಾರಣಕ್ಕಾಗಿ ಇರಲು ಸಾಧ್ಯವಿಲ್ಲ.

ದೈವರಾಧನೆಯಲ್ಲಿ ಸುರಗಿಯ ಬಳಕೆ ಇಲ್ಲವೆಂದಲ್ಲ. ಇದೆಯಾದರೂ ಅದು ಸಾಂದರ್ಭಿಕ ಮತ್ತು ಲಭ್ಯತೆಯ ಹೊಂದಾಣಿಕೆಯಾಗಿ ಕಂಡುಬರುತ್ತದೆ ಅಷ್ಟೆ. ತುಳುವರ ದೈವಾರಾಧನೆಯಲ್ಲಿ ಸಾಂಸ್ಕೃತಿಕ ವೀರರ ಆರಾಧನೆ ಎಂಬುದು ಪ್ರತ್ಯೇಕವಿದೆ. ಇವುಗಳಲ್ಲಿ ಕೋಟಿ-ಚೆನ್ನಯ, ಪುರುಷ ಇತ್ಯಾದಿ ನಾಯಕ ಲಕ್ಷಣದ ದೈವಗಳು ಆರಾಧನೆಯಾಗುತ್ತವೆ. ಸುರಗಿ ಹೂ ಬಿಡುವ ಸುಗ್ಗಿಯ ತಿಂಗಳಲ್ಲಿ ಎಣ್ಮೂರೆಂಬಲ್ಲಿ ನಡೆಯುವ ಕೋಟಿ-ಚೆನ್ನಯ ನೇಮದ ಗರಡಿ ಇಳಿಯುವ ಸಂದರ್ಭದಲ್ಲಿ ಸ್ತ್ರೀಯರು ಸುರಗಿ ಹೂವಿನ ಮಾಲೆಯನ್ನು ಈ ಅವಳಿ ದೈವಗಳ ಶಿರೋ ಆಭರಣ ಚಪ್ಪರಂಬು/ನಾಗಕಿರೀಟಕ್ಕೆ ಹಾಕುವ ಸಂಪ್ರದಾಯವಿದೆ. ಹಾಗೆಯೇ ಕಂದ್ರಪ್ಪಾಡಿಯ ಪುರುಷ ದೈವದ ಶಿರಸ್ತ್ರಾಣ ಟೊಪ್ಪಿಗೆಗೆ ಸುರಗಿ ಮಾಲೆಯನ್ನು ಸ್ತ್ರೀಯರು ಹಾಕುವ ಸಂಪ್ರದಾಯವಿದೆ. ವರ್ಷಂಪ್ರತಿ ನಡೆಯುವ ಈ ನೇಮಗಳಲ್ಲಿ ಸುರಗಿ ಮಾಲೆ ಹಾಕಲೇಬೇಕೆನ್ನುವ ಕಾರಣಕ್ಕಾಗಿ ಒಣಗಿದ ಸುರಗಿ ಮಾಲೆಯನ್ನಾದರೂ ಹಾಕುತ್ತಾರೆ. ಹೀಗಿದ್ದೂ ದೈವರಾಧನೆಯಲ್ಲಿ ಸುರಗಿಯ ಬಳಕೆ ಸಾರ್ವತ್ರಿಕ ಆಚರಣಾ ವಿಧಿಯೆಂಬಷ್ಟರ ಮಟ್ಟಿನ ವ್ಯಾಪ್ತಿಯನ್ನು ಅದು ಪಡೆದುಕೊಂಡಿಲ್ಲ. ಆದರೆ ಸುರಗಿ, ಅಶೋಕ, ರೆಂಜ(ಬಕುಳ)ದ ಮರಗಳು ದೈವಸ್ಥಾನ/ದೇವಸ್ಥಾನಗಳ ಅಂಗಣ/ವಠಾರಗಳಲ್ಲಿ ಸ್ಥಾನ ಪಡೆದುಕೊಂಡಿರುವುದು ಸ್ಪಷ್ಟವಾಗಿದೆ. ಹಿರಿಯರು ಹೇಳುವಂತೆ ಶತಮಾನಗಳಷ್ಟು ಹಿಂದಿನ ಹಿರಿತನವನ್ನು ಅವು ಪಡೆದುಕೊಂಡಿರುತ್ತವೆ. ದೈವಸ್ಥಾನಗಳ ಕ್ಷೇತ್ರಪಾಲಕರೆಂದು ಕರೆದುಕೊಳ್ಳುವ ಸರ್ಪ/ಕಾಳಿಂಗಗಳೆಲ್ಲಾ ಅವೇ ಮರದ ಪೊಟರೆಗಳಲ್ಲಿ ವಾಸಿಸುತ್ತವೆಯಂತೆ. ರೆಂಜದಂತಹ ಮರಗಳ ಕೊಂಬೆಗಳು ವಿಶಾಲವಾಗಿ ವಿಸ್ತರಿಸಿಕೊಳ್ಳುತ್ತವೆ. ಜನ ಸೇರುವ ಸಂದರ್ಭದ ಜಾತ್ರೆಗೆ ನೆರಳು ಒದಗಿಸುವ ದೃಷ್ಟಿಯಿಂದಲೂ ಈ ಮರಗಳು ಉಪಯುಕ್ತವಾಗಿವೆ.

ವಾಸ್ತವಿಕವಾಗಿ ಸುರಗಿಗೆ ಸಮುದಾಯದ ವಿಶೇಷವಾದ ಸಾಂಸ್ಕೃತಿಕ ಸಂರಚನೆಯನ್ನು ರೂಪಿಸಿದ ಚರಿತ್ರೆ ಇಲ್ಲ ನಿಜ. ಆದರೆ ಸುರಗಿ ತನ್ನ ಬಹುರೂಪಿ ಪರೋಪಕಾರದ ನೈಜ ಶಕ್ತಿಯಿಂದ ಸಮುದಾಯದ ಬದುಕಿನೊಂದಿಗಿನ ಪರಸ್ಪರತೆಯನ್ನು ಅವಿನಾಭಾವದಿಂದ ಸಂಘಟಿಸಿಕೊಂಡಿದೆ. ಪ್ರಾಕೃತಿಕ ಸಮತೋಲನದಲ್ಲೂ ವೃಕ್ಷ ಸಂಕುಲದ ಸುರಗಿ ಅನನ್ಯವಾಗಿದೆ; ಜೀವ ಸಂಕುಲಗಳಿಗೆ ಆಶ್ರಯ ತಾಣವಾಗಿದೆ. ಯಾವುದೇ ಫಲಾಪೇಕ್ಷೆ ಇಲ್ಲದೆ ನಿರ್ವ್ಯಾಜ್ಯವಾಗಿ ಮಾನವ ಕುಲಕ್ಕೂ ಜೀವನ್ಮುಖಿ ಆನಂದಾನುಭೂತಿಯ ಸಂದೇಶವನ್ನು ಸಾರುವ ಚಿರ ಸಂಕೇತವಾಗಿದೆ. ಜಾಗತೀಕರಣದ ಈ ಹೊತ್ತಿನಲ್ಲಿ ಎಲ್ಲಾ ಸಮುದಾಯಗಳನ್ನು ಕಾಡುವ ಸಂಗತಿ ಎಂದರೆ ನಾವೇನನ್ನೋ ಕಳೆದುಕೊಂಡಿದ್ದೇವೆ ಎನ್ನುವುದಾಗಿದೆ ಜೊತೆಗೆ ರಾಜಕೀಯ ಶಕ್ತಿ ಕೇಂದ್ರಿತವಾಗಿ ಪಡೆದುಕೊಳ್ಳುವುದರ ಹುಡುಕಾಟವಾಗಿದೆ. ಇದು ಸ್ಪರ್ಧೆಯಾದರೆ ನಷ್ಟ; ಶೋಧನೆಯಾದರೆ ಲಾಭ. ಭಾಷಿಕ-ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ರೂಪಿತವಾಗುವ ಅಕಾಡೆಮಿಗಳೋ ಅಥವಾ ಇತರ ಜಾತಿ

ಇತ್ಯಾದಿ ಸಂಘಟನೆಗಳೋ ಅನನ್ಯತೆಯ ಹುಡುಕಾಟದ ಶೋಧನೆಯಲ್ಲಿ ತೊಡಗಿದಾಗ ಭೂತ-ಭವಿಷ್ಯಗಳ ಕುರಿತಾದ ಸ್ಪಷ್ಟ ಧೋರಣೆಯನ್ನು ಹೊಂದಿರಬೇಕಾಗುತ್ತದೆ. ಖಚಿತವಾದ ಒಂದು ತತ್ವಕ್ಕೆ ಬದ್ಧವಾಗಿರಬೇಕಾದುದು ಅಷ್ಟೇ ಅನಿವಾರ್ಯವಾಗಿದೆ. ಸುರಗಿಯಂತಹ ಪರೋಪಕಾರಿ ವೃಕ್ಷವೊಂದು ಬೇರು-ಬೀಜದೊಂದಿಗೆ ತನ್ನ ಅನನ್ಯ ಸಂಕುಲವನ್ನು ವಿಸ್ತರಿಸಿಕೊಳ್ಳುವಂತೆ ಮಾನವ ಸಂಕುಲದ ಹಿತದೃಷ್ಟಿಯಿಂದ ಮುನ್ನಡೆಯಬೇಕಾದ ಜರೂರು ಮಾನವರಾದ ನಮ್ಮ ವರ್ತಮಾನವಾಗಿದೆ.

ಸಮಾಜ ಸಮುದಾಯ ನಿಷ್ಪನ್ನ. ಭಾಷೆ ಸಂಸ್ಕೃತಿ ನಿಷ್ಪನ್ನ. ಇವುಗಳೊಂದಿಗೆ ಅವಿನಾಭಾವ ಸಂಬಂಧವಿದೆ. ಇದನ್ನು ಸುಳ್ಯದ ಬಹುಮುಖ್ಯ ಕವಿ ಕಿರಣರ 'ಪರಸ್ಪರ' ಕವಿತೆಯ ಸ್ಥಾಯೀ ಭಾವವಾಗಿರುವ 'ಮರದ ಬೇರು ನೆಲದಲ್ಲಿ ನೆಲದ ಸತ್ವ ಫಲದಲ್ಲಿ' ಎನ್ನುವಂತೆ ಗ್ರಹಿಸಬೇಕಾಗಿದೆ. ಈ ಎಲ್ಲಾ ಗ್ರಹಿತಗಳಲ್ಲಿ ಸುರಗಿಗೆ ಮಹತ್ವವಿದೆ. ತನ್ನದೇ ಆದ ಅಸ್ಮಿತೆ ಇದೆ. ಪುರುಷ ಪಕ್ಷಪಾತಿಯಾಗಿರುವ ನಮ್ಮ ಗ್ರಹಿಕೆ ಯೋಚನೆಗಳಲ್ಲಿ ಸಮಗ್ರ ಪುಷ್ಪ ಸಂಕಲವೇ ಸ್ತ್ರೀ ರೂಪಿಯಾಗಿ ಪರಿಗ್ರಹಿತವಾಗಿದೆ. ಈ ಗ್ರಹಿಕೆಯಲ್ಲಿ ಹೂವಿನ ಕೋಮಲತೆಯನ್ನು ಹೆಣ್ಣಿನ ಮೈಮನಗಳಲ್ಲಿ ಕಾಣುವ ಔದರ್ಯವೊಂದು ಹೊರನೋಟಕ್ಕೆ ಕಾಣುತ್ತದೆ. ಆದರೆ ಅಲ್ಲಿ ಅದಕ್ಕಿಂತ ಹೆಣ್ಣನ್ನು ಭೋಗ ವಸ್ತುವನ್ನಾಗಿ ಪರಿಗ್ರಹಿಸುವ ಋಣಾತ್ಮಕ ಮನಸ್ಸೆ ಪ್ರಧಾನ. 'ಸ್ತ್ರೀ ರೂಪಮೇ ರೂಪಂ ಶೃಂಗಾರಮೊಂದೇರಸಂ' ದೃಷ್ಟಿಯೇ ಮುಖ್ಯವಾಗಿದೆ. ಹೀಗಿದ್ದರೂ ಜಗತ್ತಿನ ಪ್ರತಿ ಸಮುದಾಯಗಳ ಸಂಸ್ಕೃತಿ ನಿರ್ಮಾಣದಲ್ಲೂ ಹೆಣ್ಣಿಗೆ ಪ್ರಧಾನ ಸ್ಥಾನ. ಪ್ರಜನನ ಶಕ್ತಿ ಇರುವ ಹೆಣ್ಣಿಗೆ ಮಾತ್ರ ಹೊತ್ತು ಹೆತ್ತು ಸಲಹುವ ಆ ಮೂಲಕ ಸಂತಾನಭಿವೃದ್ಧಿ ಮಾಡಲು ಸಾಧ್ಯ. ಪುರುಷನಿಗೆ ಈ ಶಕ್ತಿ ಇಲ್ಲ. ಭಿನ್ನ ಹೆಸರುಗಳಲ್ಲಿ ಕರೆದುಕೊಳ್ಳುವ ಸುರಗಿ ಎಂದಾಕ್ಷಣ ನಮ್ಮ ಪ್ರಜ್ಞೆ ಅದನ್ನು ರತಿ/ಸ್ತ್ರೀರೂಪವೆಂದೇ ಗ್ರಹಿಸುತ್ತದೆ. ಏನೇ ಆದರೂ ಸುರಗಿಯೊಂದಿಗೆ ಸಂಕಲ್ಪಿತವಾಗುವ ಸಾಂಸ್ಕೃತಿಕ ಹೊಂದಾಣಿಕೆಗಳೆಲ್ಲವೂ ಸ್ತ್ರೀಸಂಬಂಧವಾಗಿಯೇ ಇವೆ. ಆಶ್ಚರ್ಯ ಆದರೂ ಸತ್ಯ. ಮರವೊಂದು ಏಕ ಕಾಲದಲ್ಲಿ ಸ್ತ್ರೀತ್ವ ಮತ್ತು ಪುರುಷತ್ವಗಳೆರಡನ್ನು ಹೊಂದಿ ಸಂತಾನ ವೃದ್ಧಿಗೆ ಕಾರಣವಾಗಿರುತ್ತದೆ. ಪ್ರಕೃತಿ-ಪುರುಷರ ಸಾಂಕೇತಿಕತೆಯಲ್ಲೂ ತಾಯಿತ್ವವೇ ಪ್ರಧಾನ. ಹೆರುವ ಮತ್ತು ಸಲಹುವ ಗುಣ ಹೆಣ್ಣಿನ ಅನನ್ಯತೆ.

ಸುರಗಿಯನ್ನು ನಮ್ಮ ಸಮುದಾಯ ಸಂಸ್ಕೃತಿ ಪರಿಭಾವಿಸಿದರಲ್ಲೂ ಇದೇ ಅಂಶ ದೃಷ್ಟಿ ಗೋಚರವಾಗುತ್ತದೆ. ನೈಸರ್ಗಿಕವಾಗಿಯೂ ಸುರಗಿ ತನ್ನ ಔಷಧಿಯ ಗುಣದಿಂದ ಪರಿಹರಿಸುವ ಗುಣವುಳ್ಳದ್ದಾಗಿಯೇ ಹೊರತು ಸಮಸ್ಯಾತ್ಮಕವಾಗಿಲ್ಲ. ಪುರುಷನ ಭೋಗೋತ್ಕರ್ಷಕ್ಕಾಗಿಯೇ ಆದರೂ ಅಕ್ಷರ ಪರಂಪರೆಯ ಕವಿ ಮನಸ್ಸುಗಳು ಸುರಗಿಯನ್ನು ಸ್ತ್ರೀ ಸಂಬಂಧವಾಗಿಯೇ ಗೃಹಿಸಿದೆ. ನಮ್ಮ ಜನಪದರು ತಮ್ಮ ಸಂಕಥನಗಳಲ್ಲೂ ಸುರಗಿಯನ್ನು ಸ್ತ್ರೀ ಸಂಬಂಧದಲ್ಲಿಯೇ ಗೃಹಿಸಿದ ಕಾರಣಕ್ಕಾಗಿ ಅಲ್ಲೂ ಹೆಣ್ಣು ಸುರಗಿ ಮರವನ್ನು ಆಶ್ರಯಿಸುತ್ತಾಳೆ. ತಾನು ನಂಬಿದ ದೈವಗಳಿಗೂ ಸುರಗಿ ಮಾಲೆಯನ್ನು ಸಮರ್ಪಿಸಿ ಸಾಂತ್ವಾನ ಪಡೆಯುತ್ತಾಳೆ. ಒಟ್ಟಾರೆಯಾಗಿ ಸುರಗಿಯನ್ನು ನಮ್ಮ ಸಂಸ್ಕೃತಿಯಲ್ಲಿ 'ತಾಯ್ತನದ' ಪ್ರತಿನಿಧೀಕರಣದಲ್ಲಿ ಗ್ರಹಿಸಿರುವುದು ಅನನ್ಯವಾಗಿದೆ. ತಾಯ ಮಡಿಲ ಒಲುಮೆಯ ತೊಟ್ಟಿಲಲ್ಲಿ ಸಂಸ್ಕೃತಿಯನ್ನು ಲಾಲಿಸಿ- ಪಾಲಿಸಬೇಕಾದುದು ನಮ್ಮ ಕಾಳಜಿಯಾಗಬೇಕಾಗಿದೆ.

**ಅರೆಬಾಸೆ ಅಕ್ಷರ ವರ್ಣಮಾಲೆ**

| | | |
|---|---|---|
| ಗ ಣ ದಿ ಪ ತ ಯೆ ನ ಮ : | = | 9 |
| ಅ ಇ ಉ ಎ ಒ | = | 5 |
| ಕ ಗ ಜ | | |
| ಚ ಜ ಞ | | |
| ತ ದ ಣ | | |
| ಪ ಬ ಮ | | |
| ಯ ರ ಲ | | |
| ವ ಸ ಹ | = | 18 |
| | | 32 |

# ಅಕಾಡೆಮಿ ಸ್ಥಾಪನೆಯ ಪ್ರಯತ್ನ, ಯೋಚಿಸಿ ನಿರ್ಧಾರ : ಸಿ.ಎಂ.

**ಕೊಡಗು, ದಕ್ಷಿಣ ಕನ್ನಡ ಗೌಡ ಸಮಾಜದ ಸ್ನೇಹ ಮಿಲನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಬೆಂಗಳೂರು. ದಿನಾಂಕ 11.9.2011.**

ಅರೆಭಾಷೆ ಅಕಾಡೆಮಿ ಸ್ಥಾಪಿಸುವ ಬೇಡಿಕೆಯ ಬಗ್ಗೆ ಪರಿಶೀಲಿಸಿ ಸಚಿವ ಸಂಪುಟದಲ್ಲಿ ಚರ್ಚಿಸಿ ಯೋಚಿಸಿ ನಂತರ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರಲ್ಲದೆ, 'ನಾನು ಮುಖ್ಯ ಮಂತ್ರಿಯಾಗಿದ್ದೇನೆ" ಎಂಬ ಭರವಸೆಯನ್ನು ನೀಡಲಾರೆ. ಆದರೆ ಬೇಡಿಕೆಗಳ ಬಗ್ಗೆ ಪರಿಶೀಲನೆ ನಡೆಸಿ, ಚರ್ಚೆಯ ನಂತರ ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದರು.

ಇದಕ್ಕೂ ಮುನ್ನ ಇಂಧನ ಸಚಿವೆ ಶೋಭ ಕರಂದ್ಲಾಜೆ ಮಾತನಾಡಿ, ಅರೆಭಾಷೆ ಅಕಾಡೆಮಿ ಸ್ಥಾಪಿಸುವ ವಿಚಾರದಲ್ಲಿ ಸಿ.ಎಂ. ಜೊತೆಗೆ ಮಾತುಕತೆ ನಡೆಸಿ, ವಿಧಾನ ಸಭಾ ಅಧ್ಯಕ್ಷರು ಕೊಡಗಿನವರಾಗಿದ್ದಾರೆ. ಮುಖ್ಯ ಮಂತ್ರಿಗಳು ದಕ್ಷಿಣ ಕನ್ನಡದ ಪುತ್ತೂರಿನವರು. ಈ ಎರಡು ಉನ್ನತ ಸ್ಥಾನ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂದಿದೆ. ಇದು ಅಂತ್ಯಂತ ಹೆಮ್ಮೆಯ ವಿಚಾರ ಎಂದು ಹೇಳಿದರು.

ಕೊಡಗು ಮತ್ತು ದಕ್ಷಿಣ ಕನ್ನಡದಲ್ಲಿರುವ ಅರೆಭಾಷೆ ಗೌಡ ಜನಾಂಗದವರು ಯಾರಿಗೂ ಉಪದ್ರವನ್ನು ಕೊಡುವವರಲ್ಲ. ಭ್ರಷ್ಟಚಾರ ಅನ್ಯ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿಲ್ಲ. ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ವಿವಿಧತೆಯಲ್ಲಿ ಏಕತೆ ಪ್ರದರ್ಶಿಸಿ ರಾಷ್ಟ್ರಕ್ಕೆ ಆದರ್ಶಪ್ರಿಯರಾಗಿ ವಿವಿಧ ಹುದ್ದೆಗಳಲ್ಲಿ ಸೇವೆ ನಿರ್ವಹಿಸಿ ಗೌಡ ಜನಾಂಗಕ್ಕೆ ಕಳಸ ಪ್ರಿಯರಾಗಿದ್ದಾರೆ ಎಂದು ಹೇಳಿದರು.

ಹಂಪಿ ಕನ್ನಡ ವಿಶ್ವ ವಿದ್ಯಾನಿಲಯ ಸಮಾಜ ವಿಜ್ಞಾನಗಳ ವಿಭಾಗದ ಮುಖ್ಯಸ್ಥ, ಡೀನ್ ಪ್ರೊ. ವಿಜಯ ತಂಬಂಡ ಪೂಣಚ್ಚ ಮಾತನಾಡಿ, ಚರಿತ್ರೆಯುನ್ನು ಕಟ್ಟುವುದಕ್ಕಿಂತ ಜನಸಮಾಜದ ಚರಿತ್ರೆ ಕಟ್ಟುವುದು ಅತ್ಯಂತ ವಿಶೇಷ. ರಾಜಕಾರಣಿಗಳು ಕೂಡ ಚರಿತ್ರೆ ಕಟ್ಟಬಹುದು. ಆದರೆ ಆ ಚರಿತ್ರೆ ಯಾವ ಮೌಲ್ಯ ಹೊಂದಿದೆ ಎಂಬುದು ಮುಖ್ಯವಾಗುತ್ತದೆ ಎಂದರು. ಮುಖ್ಯ ಮಂತ್ರಿ ಪತ್ನಿ ಡಾಟಿ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಕೊಡಗು ಮತ್ತು ದಕ್ಷಿಣ ಕನ್ನಡ ಅರೆಭಾಷೆ ಗೌಡಜನಾಂಗದ ಗಣ್ಯರು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಮಾಜದ ಅಧ್ಯಕ್ಷ ನಂಗಾರು ನಿಂಗರಾಜು, ಗೌಡರ ಚಾವಡಿ ಅಧ್ಯಕ್ಷ ಕಾವಿಲ ಗಿರಿಯಪ್ಪ ಗೌಡ ಎಂ.ಬಿ. ಜಯರಾಮ್ ಉಪಸ್ಥಿತರಿದ್ದರು.

ದಿನಾಂಕ 14.09.2008ರ ಮನವಿ ಪತ್ರದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.) ಬೆಂಗಳೂರು ಅದರ ಅಧ್ಯಕ್ಷರಾದ ಶ್ರೀ ಎಸ್. ತಿಮ್ಮಪ್ಪಗೌಡ ಅವರು ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಬಿ.ಯಸ್. ಯಡಿಯೂರಪ್ಪ ಅವರಿಗೆ ಸುಮಾರು 12 ಬೇಡಿಕೆಗಳಲ್ಲಿ ಮುಖ್ಯವಾಗಿ ನಮ್ಮ ಗೌಡ ಜನಾಂಗದವರನ್ನು ಅಲ್ಪ ಸಂಖ್ಯಾತರು ಎಂದು ಘೋಷಿಸಿ ಜನಾಂಗದ ಅಭಿವೃದ್ಧಿಗೋಸ್ಕರ ಗೌಡ ಅಕಾಡೆಮಿಯನ್ನು ಸ್ಥಾಪಿಸಲು ಕೋರಿರುವುದು ಇಲ್ಲಿ ಸ್ಮರಣೀಯ. ಅಲ್ಲದೆ ಜನಾಂಗದ ಹಲವಾರು ವ್ಯಕ್ತಿಗಳು, ವಿವಿಧ ಸಂಘ ಸಂಸ್ಥೆಗಳು ಪಂಡಿತರ ಸಭೆ (ಅಕಾಡೆಮಿ)ಯ ಅವಶ್ಯಕತೆ ಅನಿವಾರ್ಯತೆಯ ಚಿಂತನೆ ಹೇಳಿಕೆಗಳನ್ನು ನೀಡಿರುತ್ತಾರೆ.

**ನುಡಿಮುತ್ತು**

ಕಷ್ಟತ ಎಂದ್ ಹೇಳ್ಕ್‌ಣೆಬಡಿ
ಯಾಕೇಂತೇಳ್ರೆ ನಕ್ಷತ್ರ ಕತ್ಲಲಿ ಹೊಳ್‌ದದೆ
ವಿದ್ಯೆ : ಸಿರಿವಂತರಿಗೆ ಸಿಂಗಾರಾದರೆ
ಬಡವ್‌ಕೆ ಐಶ್ವರ್ಯ ಆದೆ.

# ಅರೆಭಾಷೆ ಅಕಾಡೆಮಿಗೆ ಸರಕಾರದ ಅಸ್ತು : ಮಡಿಕೇರಿಯಲ್ಲಿ ಕೇಂದ್ರ ಕಚೇರಿ

ಬಹು ವರ್ಷಗಳ ಬೇಡಿಕೆಯಾದ "ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತುಸಾಹಿತ್ಯ ಅಕಾಡೆಮಿ" ಯನ್ನು ಸ್ಥಾಪಿಸಲು ರಾಜ್ಯ ಸರಕಾರವು ತಾ. 15.12.2011 ರಂದು ಅಧಿಕೃತ ಆದೇಶ ಹೊರಡಿಸಿತು. ವಿಶೇಷವೆಂದರೆ, ಇದರ ಕೇಂದ್ರ ಕಚೇರಿಯು ಮಡಿಕೇರಿಯಲ್ಲಿಯೇ ಸ್ಥಾಪನೆಗೊಳ್ಳಲಿದೆ.

ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನೂರಾರು ವರ್ಷಗಳಿಂದ ಅರೆಭಾಷೆ ಮಾತನಾಡುವ ಹದಿನೆಂಟು ಗೋತ್ರಗಳ ಜನರು ವಾಸಿಸುತ್ತಿದ್ದಾರೆ. ಅರೆಭಾಷೆ ಅಕಾಡೆಮಿ ಮೂಲಕ ಈ ಭಾಷೆ ಮಾತನಾಡುವ ಜನರ ಸಂಸ್ಕೃತಿ ಮತ್ತು ಸಾಹಿತಿಕ ಚಟುವಟಿಕೆಯ ಆಶೋತ್ತರಗಳನ್ನು ಬೆಳವಣಿಗೆಗೊಳಿಸಿ ಪ್ರೋತ್ಸಾಹಿಸುವ ಉದ್ದೇಶವನ್ನು ಅಕಾಡೆಮಿಯು ಹೊಂದಿರುತ್ತದೆ.

ಅರೆಭಾಷೆ ಮಾತನಾಡುವ ಜನ ಕೇರಳದಲ್ಲಿದ್ದಾರೆ. ಮೈಸೂರು, ಬೆಂಗಳೂರು, ವಿಶ್ವದ ನಾನಾ ಭಾಗಗಳಲ್ಲಿ ಇರುವುದಲ್ಲದೆ, ಈ ಭಾಷೆಗೆ 1500 ವರ್ಷಗಳ ಇತಿಹಾಸವಿದೆ. ಅಲ್ಲದೆ, ಈ ಭಾಷೆಯನ್ನಾಡುವ ಮಂದಿ ಅದರಲ್ಲೂ ವಿಶೇಷವಾಗಿ ಗೌಡ ಜನಾಂಗದವರಿಗೆ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಇದೆ. ಈ ಎಲ್ಲಾ ವಿಚಾರಗಳನ್ನು ಪರಿಗಣಿಸಿ ಆದ್ಯತೆ ನೀಡಿ ಅಕಾಡೆಮಿ ಸ್ಥಾಪಿಸಲು ಸರಕಾರದ ನಿರ್ಧಾರ ಕೈಗೊಂಡಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವ ಗೋವಿಂದ ಕಾರ್ಜೋಳ ಅವರು ಈ ಸಂಬಂಧ ಸಮ್ಮತಿ ನೀಡಿದ ಬಳಿಕ ಸ್ವಂತ ಅರೆಭಾಷೆಯನ್ನು ಮಾತೃಭಾಷೆಯಾಗಿ ಹೊಂದಿರುವ ರಾಜ್ಯದ ಮುಖ್ಯಮಂತ್ರಿ ದೇವರಗುಂಡ ವಿ. ಸದಾನಂದ ಗೌಡ ಅವರು ಇದಕ್ಕೆ ಅಂಗೀಕಾರ ನೀಡಿದ ಬಳಿಕ ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖಾ ಸರಕಾರದ ಅಧೀನ ಕಾರ್ಯದರ್ಶಿ ಹೆಚ್.ವಿ. ರಾಮಚಂದ್ರ ಅವರು ಅಧಿಕೃತ ಆದೇಶ ಹೊರಡಿಸಿದ್ದಾರೆ. ವಿರಾಜಪೇಟೆ ಕ್ಷೇತ್ರದ ಶಾಸಕ ಹಾಗೂ ವಿಧಾನ ಸಭಾಪತಿ ಕೆ.ಜಿ. ಬೋಪಯ್ಯ ಅವರಿಗೂ ಕೊಡಗಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅರೆಭಾಷೆ ಪ್ರಮುಖರು ಈ ಹಿಂದೆ ಅಕಾಡೆಮಿ ಸ್ಥಾಪನೆಗೆ ಮನವಿ ಮಾಡಿದ್ದು ಅವರು ಕೂಡ ಇದಕ್ಕೆ ಸ್ಪಂದಿಸಿರುವುದಾಗಿ ತಿಳಿದುಬಿಂದಿದೆ.

**ಪ್ರತ್ಯೇಕ ಆದೇಶ**

ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಅರೆಭಾಷಾ ಅಕಾಡೆಮಿಯ ರೂಪು ರೇಷೆ ಅಂಗರಚನೆ ಮತ್ತು ಹುದ್ದೆಗಳ ನೇಮಕಾತಿ ಕುರಿತಾಗಿ ಸರಕಾರವು ಸದ್ಯದಲ್ಲಿಯೇ ಪ್ರತ್ಯೇಕ ಆದೇಶ ಹೊರಡಿಸಲಿರುವುದಾಗಿ ತಿಳಿದುಬಂದಿದೆ. ಅಕಾಡೆಮಿಗೆ ಅಧ್ಯಕ್ಷರೂ ಸೇರಿದಂತೆ ಸುಮಾರು 14 ಸದಸ್ಯರುಗಳನ್ನು ನೇಮಕಗೊಳಿಸುವ ನಿರೀಕ್ಷೆಯಿದೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರನ್ನು ಅಕಾಡೆಮಿಗೆ ಆಯ್ಕೆ ಮಾಡಲಾಗುತ್ತದೆ. ಮುಖ್ಯ ಕಚೇರಿಯಿರುವ ಮಡಿಕೇರಿಗೆ ಅಧ್ಯಕ್ಷ ಸ್ಥಾನ ಮತ್ತು ಹೆಚ್ಚಿನ ಸದಸ್ಯ ಸ್ಥಾನದ ಅವಕಾಶವಿರುವುದಾಗಿ ಹೇಳಲಾಗಿದೆ.

## ಪತ್ರ

ಕೊಡಗು ದಕ್ಷಿಣ ಕನ್ನಡ ಜಿಲ್ಲಾ ಪ್ರಾದೇಶಿಕ ಅರೆಭಾಷಾ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಬಹುಕಾಲದ ಕನಸು ನನಸಾಗಿದೆ. ಇದಕ್ಕೆ ಕಾರಣರಾದ ಅರೆಗನ್ನಡ ಅಭಿಮಾನಿಗಳೆಲ್ಲರಿಗೂ ಅಭಿನಂದನೆಗಳು, ಭಾಷೆಯು ನಡೆನುಡಿಗಳಿಗೆ ಆಗರ ಅಪೂರ್ವವಾದ ಕನ್ನಡ ಅರೆಭಾಷೆಯಲ್ಲಿರುವ ಸೊಗಡು ಸಾಹಿತ್ಯ ಸಂಸ್ಕೃತಿಗಳಲ್ಲಿ ಉಳಿದು ಬರಲಿ, ಹಳೆಯ ಬೇರಿನೊಂದಿಗೆ ಹೊಸ ಚಿಗುರುಗಳು ಅರಳಲಿ.

ನಿಮ್ಮ ಸೇವಾವಧಿಯಲ್ಲಿ ಅಕಾಡೆಮಿ ಪ್ರಬುದ್ಧಗೊಳ್ಳಿ, ಅಕಾಡೆಮಿ ಕಚೇರಿ ಉದ್ಘಾಟನೆಗೆ ಶುಭ ಹಾರೈಕೆಗಳು.

- ವಿದ್ವಾನ್ ಟಿ.ಜಿ. ಮುಡೂರು
ಪಂಜ, ಸುಳ್ಯ ತಾಲೂಕು
ದಕ್ಷಿಣ ಕನ್ನಡ, ಪಂಜ - 574232
ಮೊ : 9449324260

# ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪ್ರಥಮ ಸಭೆ

**ಕ**ರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರ ಪ್ರಪ್ರಥಮ ಸಭೆಯು 24-8-2012ರಂದು ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಮಡಿಕೇರಿ ಕೊಡಗು ಗೌಡ ಸಮಾಜದ ಕಟ್ಟಡದ ಸಭಾಂಗಣದಲ್ಲಿ ಅಧ್ಯಕ್ಷರಾದ ಶ್ರೀ ಎನ್.ಎಸ್. ದೇವಿಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ರಿಜಿಸ್ಟ್ರಾರ್ ಶ್ರೀ ವಿನೋದ್‌ಚಂದ್ರ ಹಾಗೂ ಅರ್ಥ ಸದಸ್ಯೆಯಾಗಿ ಶ್ರೀಮತಿ ಇಂದಿರಮ್ಮನವರು ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.

**ಅಕಾಡೆಮಿಯ ಆಯವ್ಯಯದ ಬಗ್ಗೆ :**

ಜಂಟಿ ನಿರ್ದೇಶಕರಾದ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿಯವರು ಮಾತನಾಡುತ್ತಾ ಸರ್ಕಾರದಿಂದ ಬಿಡುಗಡೆಯಾಗಿರುವ ಮೊದಲನೆ ಕಂತಿನ ಅನುದಾನ ಅರೆಭಾಷೆ ಅಕಾಡೆಮಿಗೆ ಬಿಡುಗಡೆಯಾಗಿರುವ ಬಗ್ಗೆ ತಿಳಿಸುತ್ತಾ ಎರಡನೆ ಕಂತಿನ ಅನುದಾನದ ಬಿಡುಗಡೆಗೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದರು.

**ಕಚೇರಿಗೆ ಸಿಬ್ಬಂದಿಗಳನ್ನು ನೇಮಿಸುವ ಬಗ್ಗೆ :**

ಅರೆಭಾಷೆ ಅಕಾಡೆಮಿಗೆ ಸರಕಾರದಿಂದ ಮಂಜುರಾಗಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಅರೆಭಾಷೆ ಅಕಾಡೆಮಿಗೆ ಈಗಾಗಲೆ ಸರಕಾರದಿಂದ ಮಂಜುರಾಗಿರುವ ಹುದ್ದೆಗಳು ಭರ್ತಿಯಾಗುವವರೆಗೆ ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಮಿಕ ಇಲಾಖೆಯಲ್ಲಿ ನಿಗದಿಪಡಿಸಿರುವ ಸಂಭಾವನೆ ಆಧಾರದ ಮೇರೆಗೆ ಕಿಯೋನಿಕ್ಸ್ ಸಂಸ್ಥೆಯಿಂದ ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳಲಿ ಹಾಗೂ ಸದರಿಯವರಿಗೆ ತಗಲುವ ಮಾಹೆಯಾನ ಗೌರವಧನವನ್ನು ಅಕಾಡೆಮಿಗೆ ಈಗಾಗಲೇ ಮಂಜೂರಾಗಿರುವ ಅನುದಾನದಲ್ಲಿ ಭರಿಸುವಂತೆ ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರು ರಿಜಿಸ್ಟ್ರಾರ್‌ರವರಿಗೆ ಸೂಚಿಸಿದರು. ಹಾಗೂ ಸರ್ವ ಸದಸ್ಯರ ಬೇಡಿಕೆಯಂತೆ ಒಬ್ಬ ಮಹಿಳಾ ಕಂಪ್ಯೂಟರ್ ಆಪರೇಟರ್ ಸೇರಿದಂತೆ ಕಚೇರಿಗೆ ಅಗತ್ಯವಿರುವ ಸಿಬ್ಬಂದಿಯನ್ನು ನೇಮಿಸಿಕೊಳ್ಳುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಕ್ರಿಯಾ ಯೋಜನೆ ಬಗ್ಗೆ :**

ಸದರಿ ವಿಷಯದ ಬಗ್ಗೆ ಜಂಟಿ ನಿರ್ದೇಶಕರು ಮಾತನಾಡುತ್ತಾ ಮುಂದಿನ ಮೂರು ವರ್ಷಗಳಿಗೆ ಅನುಗುಣವಾಗುವಂತೆ ಕ್ರಿಯಾ ಯೋಜನೆಯನ್ನು ತಯಾರಿಸಲು ತಿಳಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಎನ್.ಎಸ್. ದೇವಿಪ್ರಸಾದ್ ಹಾಗೂ ರಿಜಿಸ್ಟ್ರಾರ್ ವಿನೋದ್‌ಚಂದ್ರ 2012-13ನೇ ಸಾಲಿನಲ್ಲಿ ಅಂದಾಜಿಸಿರುವ ಕ್ರಿಯಾ ಯೋಜನೆಯ ಕರಡನ್ನು ಮಂಡಿಸಿದರು. ಸಭೆಯ ನಂತರ ಸಭೆಯಲ್ಲಿ ವ್ಯಕ್ತವಾದ ಸಲಹೆ ಸೂಚನೆಗಳಂತೆ ಕ್ರಿಯಾ ಯೋಜನೆಯ ಕರಡನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ರಿಜಿಸ್ಟ್ರಾರ್‌ರವರಿಗೆ ತಿಳಿಸಲಾಯಿತು.

**ಅಕಾಡೆಮಿಗೆ ಸಹ ಸದಸ್ಯರ ಆಯ್ಕೆ :**

ಮೊದಲ ಸಾಮಾನ್ಯ ಸಭೆಯಲ್ಲಿ ಅಕಾಡೆಮಿಗೆ ಮೂವರು ಸದಸ್ಯರನ್ನು ತೆಗೆದುಕೊಳ್ಳಲು ಅವಕಾಶವಿರುವುದರಿಂದ ಸುದೀರ್ಘ ಚರ್ಚೆಯ ಬಳಿಕ ಮಡಿಕೇರಿಯಿಂದ ಅಮೆ ಪಾಲಾಕ್ಷ, ಬೆಂಗಳೂರಿನಿಂದ ತೇನನ ರಾಜೇಶ್, ಮೂರ್ನಾಡಿನಿಂದ ತೆಕ್ಕಡೆ ಶೋಭ ಮೋಹನ್ ಅವರನ್ನು ಆಯ್ಕೆ ಮಾಡಿ ಘೋಷಣೆಗಾಗಿ ಸರಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಮತ್ತು ಆಯ್ಕೆಗೊಂಡ ಸದಸ್ಯರಿಗೆ ಆಯ್ಕೆಯ ಪತ್ರ ಬರೆದು ವ್ಯಕ್ತಿ ಪರಿಚಯ ತರಿಸಿಕೊಳ್ಳಲು ನಿರ್ಧರಿಸಲಾಯಿತು.

**ಅಕಾಡೆಮಿಗೆ ಉಳಿದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡುವ ಬಗ್ಗೆ :**

ಅರೆಭಾಷೆ ಅಕಾಡೆಮಿಗೆ ಸರಕಾರದಿಂದ ಸದ್ಯ ಎರಡು ಮಂದಿ ಸದಸ್ಯರನ್ನು ನೇಮಕ ಮಾಡಿಕೊಳ್ಳಲಾಗಿದ್ದು ಕ್ರಮ ಪ್ರಕಾರದಂತೆ ಸಮಿತಿಯಲ್ಲಿ ಹತ್ತು ಮಂದಿ ಸದಸ್ಯರನ್ನು ನೇಮಕ ಮಾಡಬೇಕಾಗಿದ್ದು ಉಳಿದ ಇಬ್ಬರು ಸದಸ್ಯರನ್ನು ಸರ್ಕಾರದಿಂದ ನೇಮಕ ಮಾಡಲು ನಿಡ್ಯಮಲೆ ವೇದಾವತಿ ಅನಂತ ಹಾಗೂ ಕುರುಂಜಿ ಸಿ. ಸದಾನಂದ ಇವರ ಹೆಸರನ್ನು ಪ್ರಸ್ತಾಪಿಸಿ ಅಂತಿಮಗೊಳಿಸಿ ಘೋಷಣೆಗಾಗಿ ಸರಕಾರಕ್ಕೆ ಪ್ರಸ್ತಾವನೆ ಕಳುಹಿಸುವುದು ಸದಸ್ಯರಿಗೆ ಪತ್ರ ಬರೆದು ವ್ಯಕ್ತಿ ಪರಿಚಯ ತರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

**ಸ್ಥಾಯಿ ಸಮಿತಿ ಸದಸ್ಯರ ಆಯ್ಕೆ :**

ರಿಜಿಸ್ಟ್ರಾರ್ ಮಾತನಾಡುತ್ತ ಸ್ಥಾಯಿ ಸಮಿತಿಗೆ ಇಬ್ಬರನ್ನು ಆಯ್ಕೆ ಮಾಡುವಂತೆ ತಿಳಿಸಲಾಗಿ ಈ ವಿಷಯದ ಬಗ್ಗೆ ಸುದೀರ್ಘ ಚರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರು ಮೊದಲ ವರ್ಷ ತುಂತಜೆ ವೆಂಕಟೇಶ್, ಕುಂಞೇಟಿ ಶಿವರಾಮಗೌಡ, ಪದ್ಮನಾಭ ಕೋಲ್ಚಾರ್, ಬೈತಡ್ಕ ಜಾನಕಿ ಬೆಳ್ಯಪ್ಪ ಇವರುಗಳ ಹೆಸರುಗಳನ್ನು ಒಂದು ವರ್ಷದವರೆಗೆ ಬದಲಾಯಿಸದೆ ಇರುವ ಷರತ್ತಿನ ಮೇರೆಗೆ ಅಂತಿಮಗೊಳಿಸಲಾಯಿತು. ಈ ಸಮಿತಿ ಪ್ರತಿ ತಿಂಗಳು ಸಭೆ ಸೇರತಕ್ಕದ್ದು.

**ಕ್ರಿಯಾ ಯೋಜನೆ ಬಗ್ಗೆ :**

ಕ್ರಿಯಾ ಯೋಜನೆಯ ಬಗ್ಗೆ ರಿಜಿಸ್ಟ್ರಾರ್ ತಿಳಿಸಿ ವಿವಿಧ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಅನುದಾನದ ಬಗ್ಗೆ ವಿವರವಾದ ವರದಿಯನ್ನು ಸಭೆಗೆ ಮಂಡಿಸಿದರು. ಅಕಾಡೆಮಿಗೆ ಉದ್ಘಾಟನಾ ಸಮಾರಂಭ, ಐದು ತಾಲೂಕುಗಳಲ್ಲಿ ಸಾಂಸ್ಕೃತಿಕ ಸಮ್ಮಿಲನ ಪ್ರಾಯೋಜಿತ ಕಾರ್ಯಕ್ರಮ, ಹೊರ ಜಿಲ್ಲೆಯಲ್ಲಿ ಸಾಂಸ್ಕೃತಿಕ ಸಮ್ಮಿಲನ, ಅಕಾಡೆಮಿಗಳ ಸಹಯೋಗದೊಂದಿಗೆ ಸಾಂಸ್ಕೃತಿಕ ವಿನಿಮಯ, ಸಾಧಕರಿಗೆ ಪ್ರಶಸ್ತಿ ಸನ್ಮಾನ ಪತ್ರ, ಗುಡ್ಡೆಮನೆ ಅಪ್ಪಯ್ಯಗೌಡ ಸ್ಮರಣಾರ್ಥ ಕಾರ್ಯಕ್ರಮಗಳ ಪುಸ್ತಕಗಳ ಪ್ರಕಟಣೆ ಬಿಡುಗಡೆ ಇತ್ಯಾದಿ ಚಿಂತನ, ಮಂಥನ ಅಧ್ಯಯನ - ಕಚೇರಿ ಮೇಲುಸ್ತುವಾರಿಗಳ ಬಗ್ಗೆ ಚರ್ಚಿಸಿ ಅನುದಾನದ ವಿವರಗಳನ್ನು ನೀಡಲಾಯಿತು.

**ಪುಸ್ತಕ ಪ್ರಕಟಣೆ :**

ಸಮಿತಿಯಲ್ಲಿ ಕೋರನ ಸರಸ್ವತಿ, ವೇದಾವತಿ ಅನಂತ, ಬಾರಿಯಂಡ ಜೋಯಪ್ಪ ನಿಡಂಜಿ ಕರುಣಾಕರ, ವಿಧ್ಯಾಧರ ಬಡ್ಡಡ್ಕ ಇವರುಗಳನ್ನು ಆರಿಸಲಾಯಿತು.

**ಅರೆಭಾಷೆ ಶಬ್ದಕೋಶ :**

ಶಬ್ದಕೋಶ ರಚಿಸುವ ಸಲುವಾಗಿ ಚರ್ಚಿಸಿ ಅರೆಭಾಷೆ ಸಂಸ್ಕೃತಿ ಬೆಳೆಸಿ ಉಳಿಸುವ ನಿಟ್ಟಿನಲ್ಲಿ ಸಾಹಿತ್ಯ ಸಂಪುಟ, ಅರೆಭಾಷಾ ಕನ್ನಡ ಅರ್ಥಕೋಶ, ಕಾವ್ಯ ಸಂಕಲನ ಮತ್ತು ಅರೆಭಾಷೆಯಲ್ಲಿರುವ ಜಾನಪದ ಕಥೆಗಳನ್ನು, ಗಾದೆ, ಒಗಟು ಕಥೆ ಕನ್ನಡಕ್ಕೆ ತರ್ಜುಮೆ ಮಾಡುವ ಬಗ್ಗೆ ದೀರ್ಘ ಚರ್ಚಿಸಿ ಶೀಘ್ರ ಕಾರ್ಯರೂಪಕ್ಕೆ ತರುವಂತೆ ಜಂಟಿ ನಿರ್ದೇಶಕರು ತಿಳಿಸಿದ ಮೇರೆ ಸರ್ವ ಸದಸ್ಯರು ಒಪ್ಪಿಗೆ ನೀಡಿದರು.

**ಕವನ ಸಂಕಲನ :**

ಕವನ ಸಂಕಲನ ಸಂಪಾದಕ ಮಂಡಳಿಗೆ ಹೊದ್ದೆಟಿ ಭವಾನಿಶಂಕರ್, ಕುಡೆಕಲ್ಲು ಯಶವಂತ್, ಕುದುಪಜೆ ಸಂಜೀವ ಇವರುಗಳನ್ನು ಆಯ್ಕೆ ಮಾಡಲಾಯಿತು.

**ತ್ರೈಮಾಸಿಕ ಪತ್ರಿಕೆ**

ಪತ್ರಿಕೆಗೆ ಹೆಸರನ್ನು ಸೂಚಿಸಲಾಗಿ "ಸುರಗಿ" ಎಂಬ ಹೆಸರನ್ನು ಒಪ್ಪಲಾಯಿತು. ಸಂಪಾದಕ ಮಂಡಳಿಗೆ ಪಟ್ಟಡ ಪ್ರಭಾಕರ ಸಂಪಾದಕರಾಗಿಯೂ, ಕುಡೆಕಲ್ಲು ಸಂತೋಷ್, ಕೋರನ ಸುನಿಲ್ ಇವರುಗಳನ್ನು ಸದಸ್ಯರಾಗಿಯೂ, ಪ್ರಧಾನ ಸಂಪಾದಕರಾಗಿ ಎನ್.ಎಸ್. ದೇವಿಪ್ರಸಾದ್, ಅಧ್ಯಕ್ಷರು ಇರುವಂತೆ ತಿಳಿಸಲಾಯಿತು.

**ಪ್ರಶಸ್ತಿ ಪ್ರಧಾನ :**

ಪ್ರಶಸ್ತಿ ಸಮಾರಂಭ ಏರ್ಪಡಿಸಲು ಹಾಗೂ ಆಯ್ಕೆ

ಸಮಿತಿಗೆ ಸಾಹಿತ್ಯ ರಚನೆಯ ವ್ಯಕ್ತಿಗಳನ್ನು ಹಾಕಿಕೊಳ್ಳುವಂತೆ ಜಂಟಿ ನಿರ್ದೇಶಕರು ತಿಳಿಸಿದಂತೆ ಸರ್ವ ಸದಸ್ಯರು ಒಪ್ಪಿದರು.

**ವೆಬ್‌ಸೈಟ್ ತೆರೆಯುವ ಬಗ್ಗೆ :**

ಅರೆಭಾಷೆ ಕುಟುಂಬಗಳ ಮಾಹಿತಿ, ವಿಳಾಸ, ಸಾಹಿತ್ಯ ಮತ್ತು ಅರೆಭಾಷೆ ಸಂಸ್ಕೃತಿಯನ್ನು ವಿವಿಧ ಭಾಗಗಳಲ್ಲಿ ಪ್ರಚಾರ ಪಡಿಸುವ ನಿಟ್ಟಿನಲ್ಲಿ ಸರಕಾರ ವತಿಯಿಂದ ಅಕಾಡೆಮಿಯ ವೆಬ್‌ಸೈಟ್ ತೆರೆಯುವ ಸಲುವಾಗಿ ಚರ್ಚಿಸಿ ಸರ್ವಾನುಮತದಿಂದ ಸಮ್ಮತಿಸಿ, ಮಾಹಿತಿ ಸಂಗ್ರಹಿಸಲು ಈ ನಿಟ್ಟಿನಲ್ಲಿ ಹೆಚ್ಚಿನ ಮಟ್ಟಿಗೆ ತಿಳಿದಿರುವ ವ್ಯಕ್ತಿಗಳನ್ನು ನೇಮಿಸಲು ಸಭೆ ತೀರ್ಮಾನಿಸಿತು.

**ಅಕಾಡೆಮಿಗೆ ಲಾಂಛನ :**

ಚಿಹ್ನೆ, ಮುದ್ರೆ ಗುರುತುಗಳ ಬಗ್ಗೆ ಚರ್ಚಿಸಿ ಕಲಾವಿದ ಮೋಹನ್ ಸೋನಾ ರಚಿಸಿರುವ ಲಾಂಚನವನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಲಾಂಛನವಾಗಿ ಬಳಸಿಕೊಳ್ಳುವಂತೆ ಒಪ್ಪಲಾಯಿತು.

**ಅರೆಭಾಷೆಯ ಸಂಗಮ ಕಾರ್ಯಕ್ರಮ :**

ದಕ್ಷಿಣ ಕನ್ನಡ ಮತ್ತು ಕೊಡಗು ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ಏರ್ಪಡಿಸಲು ಬಹು ಸಾಂಸ್ಕೃತಿಕ ಕಾರ್ಯಕ್ರಮ, ಅರೆಭಾಷೆ ಮತ್ತು ಸಂಸ್ಕೃತಿಗಳ ಸಮ್ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಮುಂದಿನ ತಿಂಗಳಲ್ಲಿ ಸಭೆಯನ್ನು ಕರೆಯುವಂತೆ ಜಂಟಿ ನಿರ್ದೇಶಕರು ರಿಜಿಸ್ಟ್ರಾರ್‌ರವರಿಗೆ ಸೂಚಿಸಿದರು.

**ಕೈಲ್‌ಮುಹೂರ್ತ ಕಾರ್ಯಕ್ರಮ :**

ಕೊಡಗು ಜಿಲ್ಲೆಯಲ್ಲಿ ಹಬ್ಬದ ಪ್ರಯುಕ್ತ ಏರ್ಪಡಿಸುವ ಕ್ರೀಡಾಕೂಟಗಳಿಗೆ ಧನ ಸಹಾಯವನ್ನು ನೀಡುವ ಬಗ್ಗೆ ಅಧ್ಯಕ್ಷರು ಪ್ರಸ್ತಾಪಿಸಲಾಗಿ ಸಭೆಯಲ್ಲಿ ದೀರ್ಘ - ಸುದೀರ್ಘ ಚರ್ಚಿಸಿ, ಅರೆಭಾಷೆ ಅಕಾಡೆಮಿ ಸಹಯೋಗದೊಂದಿಗೆ ಜಂಟಿಯಾಗಿ ಏರ್ಪಡಿಸುವ ಕ್ರೀಡಾಕೂಟಗಳಿಗೆ ಮಾತ್ರ ಧನ ಸಹಾಯವನ್ನು ನೀಡುವಂತೆ ಸಮ್ಮತಿಸಲಾಯಿತು. ಅಕಾಡೆಮಿಯ ಪ್ರಾಯೋಜಿತ ಕಾರ್ಯಕ್ರಮದಲ್ಲಿ ಅರೆಭಾಷೆಯ ಯುವ ಸಂಘಗಳಿಗೆ ಹಾಗೂ ಅರೆಭಾಷೆ ಮಾತನಾಡುವ ವಿದ್ಯಾರ್ಥಿಗಳು ರಚಿಸುವ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಧನ ಸಹಾಯ ನೀಡಲು ತೀರ್ಮಾನಿಸಲಾಯಿತು. ಅರೆಭಾಷೆ ರಾಜ್ಯ ಮಟ್ಟದಲ್ಲಿ ಬೆಳೆಸುವ ಮತ್ತು ಪರಿಚಯಿಸುವ ಸಲುವಾಗಿ ಕೊಡಗು ದಕ್ಷಿಣ ಕನ್ನಡ, ಗೌಡರ ಸಮಾವೇಶ ಹಾಗೂ ಅರೆಭಾಷೆ ಅಕಾಡೆಮಿಯ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮ ನಿರೂಪಿಸಿ ಹಮ್ಮಿಕೊಳ್ಳುವಂತೆಯು ಸಹ ತೀರ್ಮಾನಿಸಲಾಯಿತು.

**ಅಕಾಡೆಮಿಯ ಪ್ರಕಟಣೆಯ ಸಮಿತಿ :**

ಅಕಾಡೆಮಿ ಮೂಲಕ ಪ್ರಕಟಿಸುವ (ತ್ರೈಮಾಸಿಕ ಪತ್ರಿಕೆ) ಹೊರತುಪಡಿಸಿ ಕೋರನ ಸರಸ್ವತಿ, ಬಡ್ಡಡ್ಕ ವಿದ್ಯಾಧರ್, ಬಾರಿಯಂಡ ಜೋಯಪ್ಪ ಹಾಗೂ ನಿಡಂಜಿ ಕರುಣಾಕರ ಇವರನ್ನು ಆಯ್ಕೆ ಮಾಡಲಾಯಿತು.

**ಶಿಬಿರ ಕಾರ್ಯಕ್ರಮ :**

ಚೀಯಂಡಿ ರಾಧ ಯಾದವ ಮತ್ತು ಪ್ರಭಾಕರ ಶಿಶಿಲ ಇವರನ್ನು ಶಿಬಿರದ ನಿರ್ದೇಶಕರನ್ನಾಗಿ ಆಯ್ಕೆ ಮಾಡಿ ತೀರ್ಮಾನಿಸಲಾಯಿತು.

**ಪುಸ್ತಕ ಭಂಡಾರ :**

ಪುಸ್ತಕ ಭಂಡಾರ ನಿರ್ಮಾಣದ ಬಗ್ಗೆ ಮಾತನಾಡಿ ಕಥೆ, ಕವನ ಸಾಹಿತ್ಯ, ಪತ್ರಿಕೆಗಳ ಮೂಲಕ ಸಂಗ್ರಹಿಸುವಂತೆ ಕೋರಲಾಯಿತು.

**ಮೂಲಮನೆ ಐನ್ ಮನೆ :**

ಐನ್ ಮನೆಯ ಬಗ್ಗೆ ಚರ್ಚಿಸಿ ಹಿಂದಿನ ಪದ್ಧತಿಗಳನ್ನು ಪುನರುಜ್ಜೀವನಗೊಳಿಸಲು ಕಾರ್ಯಕ್ರಮ ನಿರೂಪಿಸುವಂತೆ ಸೂಚಿಸಲಾಯಿತು. ಹಾಗೂ ಕುಟುಂಬದ ವಂಶಾವಳಿ ಪಟ್ಟಿ ತಯಾರಿಸಿ, ಸಂಸ್ಕೃತಿಯ ಬಗ್ಗೆ ಐನ್‌ಮನೆ / ದೊಡ್ಡಮನೆ ಅಭಿವೃದ್ಧಿಗೆ ಯೋಜನೆಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು.

ಚಾಲನೆ :

ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಿನಲ್ಲಿ ನಡೆಯಬೇಕಾಗಿರುವ ಹಾಗೂ ನಡೆಸಲು ಸಾಧ್ಯವಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಚಾಲಕರನ್ನು ನೇಮಿಸುವಂತೆ ರಿಜಿಸ್ಟ್ರಾರ್‌ರವರು ಕೋರಿದಾಗ ಸೆಪ್ಟೆಂಬರ್‌ನಲ್ಲಿ ಕಚೇರಿ ಹಾಗೂ ಅಕಾಡೆಮಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ ಆಗಬೇಕಿದೆ. ಉದ್ಘಾಟನಾ ಕಾರ್ಯಕ್ರಮದ ಸಮಿತಿ ಸಂಘಟನೆಯು ಅಕಾಡೆಮಿ ಅಧ್ಯಕ್ಷರ ನೇತೃತ್ವದಲ್ಲಿ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮ ಜವಾಬ್ದಾರಿತನವನ್ನು ತುಂತಜೆ ವೆಂಕಟೇಶ್‌ರವರು ಸ್ವ ಇಚ್ಛೆಯಿಂದ ವಹಿಸಿಕೊಂಡರು. ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಬೆಂಬಲಿಸುವುದು ಹಾಗೂ ಬೆಂಗಳೂರಿನಲ್ಲಿ ಮಾಡುವ ಕಾರ್ಯಕ್ರಮವನ್ನು ಪದ್ಮಾ ಕೋಲ್ಚಾರ್‌ರವರು ವಹಿಸುವುದಾಗಿ ತಿಳಿಸಿದರು.

## ಸ್ಥಾಯಿ ಸಮಿತಿ ಸಭೆ - 1

ಅಕಾಡೆಮಿಯ ಪ್ರಥಮ ಸ್ಥಾಯಿ ಸಮಿತಿ ಸಭೆ ದಿನಾಂಕ 31-8-2012ರ ಶುಕ್ರವಾರ ಸಮಯ 11.00 ಗಂಟೆಗೆ ವಾರ್ತಾಭವನ ಸಭಾಂಗಣದಲ್ಲಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎನ್.ಎಸ್. ದೇವಿಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಸ್ಥಾಯಿ ಸಮಿತಿ ಸಭೆಯ ನಡಾವಳಿ ಸಭೆಯಲ್ಲಿ ರಿಜಿಸ್ಟ್ರಾರ್ ವಿನೋದ್‌ಚಂದ್ರ, ಅರ್ಥ ಸದಸ್ಯರಾದ ಇಂದಿರಮ್ಮನವರು ಇತರೆ ಸದಸ್ಯರಾದ ಶ್ರೀ ಪದ್ಮನಾಭ ಕೋಲ್ಚಾರ್, ಶ್ರೀ ಕುಂಞಟಿ ಶಿವರಾಮ ಗೌಡ, ಶ್ರೀ ತುಂತಜೆ ವೆಂಕಟೇಶ್ ಹಾಗೂ ಶ್ರೀಮತಿ ಬೈತಡ್ಕ ಜಾನಕಿ ಉಪಸ್ಥಿತರಿದ್ದರು.

ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿನೋದ್‌ಚಂದ್ರ ಅವರು ಸಭೆಗೆ ಆಗಮಿಸಿ ಸದಸ್ಯರಿಗೆ ಸ್ವಾಗತ ಕೋರಿ ಹಿಂದಿನ ಸಾಮಾನ್ಯ ಸಭೆಯ ನಡಾವಳಿ ಓದಿ ಅನುಮೋದಿಸಲಾಗಿ ಅಕಾಡೆಮಿಯ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮತಿಗೆ ಕಳುಹಿಸಲು ಸಭೆ ಅನುಮೋದನೆ ನೀಡಿತು.

## ಸ್ಥಾಯಿ ಸಮಿತಿ ಸಭೆ - 2

ಸಭೆಯ ದಿನಾಂಕ 12.10.2012ರ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ಅರೆಭಾಷೆ ಸಾಂಸ್ಕೃತಿಕ ಮತ್ತು ಸಾಹಿತ್ಯ ಅಕಾಡೆಮಿ ಕಚೇರಿಯಲ್ಲಿ ಅಕಾಡೆಮಿ ಅಧ್ಯಕ್ಷರಾದ ಎನ್.ಎಸ್. ದೇವಿಪ್ರಸಾದ್‌ನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಿಜಿಸ್ಟ್ರಾರ್ ಎನ್. ಶಾಂತಮ್ಮನವರು ಮತ್ತು ಅರ್ಥ ಸದಸ್ಯೆ ಹೆಚ್.ವಿ. ಇಂದ್ರಮ್ಮನವರು ಹಾಗೂ ಇನ್ನು ನಾಲ್ಕು ಮಂದಿ ಸದಸ್ಯರು ಉಪಸ್ಥಿತರಿದ್ದರು. ಸದಸ್ಯೆ ಬೈತಡ್ಕ ಜಾನಕಿಯವರ ಪ್ರಾರ್ಥನೆಯೊಂದಿಗೆ, ಎನ್. ಶಾಂತಮ್ಮನವರು ಅಧ್ಯಕ್ಷರ ಮತ್ತು ಸರ್ವ ಸದಸ್ಯರನ್ನು ಸ್ವಾಗತಿಸಿ ಅಂದಿನ ಸಭೆಯ ನಡಾವಳಿಕೆ ಬಗ್ಗೆ ಪ್ರಸ್ತಾಪಿಸಿ ಪುಸ್ತಕಗಳ ಬಗ್ಗೆ ಚರ್ಚಿಸಲಾಯಿತು.

ಕರ್ನಾಟಕ ಅರೆಭಾಷೆ ಮತ್ತು ಸಾಹಿತ್ಯ ಅಕಾಡೆಮಿ ಕಚೇರಿ ಉದ್ಘಾಟನಾ ಸಮಾರಂಭದ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು ಹಾಗೂ ಕಾರ್ಯಕ್ರಮ ಸಂಘಟಿಸುವುದು ಮತ್ತು ಕಾರ್ಯಕ್ರಮಕ್ಕೆ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸುವುದರ ಬಗ್ಗೆ ಸಭೆಯಲ್ಲಿ ಮಂಡಿಸಲಾಯಿತು. ಹಾಗೂ ಸದಸ್ಯರ ಒಪ್ಪಿಗೆಯಂತೆ ಸದರಿ ಕಾರ್ಯಕ್ರಮದಂದು ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕ ಸಂಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಮೆರವಣಿಗೆ ಮತ್ತು ಕಾರ್ಯಕ್ರಮವನ್ನು ಸಂಘಟಿಸುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

### ಕಾರ್ಯಕ್ರಮದ ವಿವರ

1. ಜನಪದ ತಂಡ ವೇದಿಕೆ ಕಾರ್ಯಕ್ರಮ ಸುಳ್ಯ 2. ವೀರಗಾಸೆ -ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ
3. ಸಿದ್ಧವೇಷ, ಯಶವಂತ್ ಕೊಡೆಕಲ್ ತಂಡ ಸುಳ್ಯ ಇವರಿಂದ ಕಾರ್ಯಕ್ರಮದ ಸಂಚಾಲಕರನ್ನಾಗಿ ತುಂತಜೆ ವೆಂಕಟೇಶ್ ಹಾಗೂ ಬೈತಡ್ಕ ಜಾನಕಿಯವರನ್ನು ನೇಮಿಸಲಾಯಿತು.

ಉದ್ಘಾಟನಾ ಸಮಾರಂಭಕ್ಕೆ ಈ ಕೆಳಕಂಡ ಗಣ್ಯ ವ್ಯಕ್ತಿಗಳನ್ನು ಅತಿಥಿಗಳಾಗಿ ಆಹ್ವಾನಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

1. ಶ್ರೀ ಕೆ.ಜಿ. ಬೋಪಯ್ಯ, ಸನ್ಮಾನ್ಯ ವಿಧಾನ ಸಭಾಧ್ಯಕ್ಷರು, ಕರ್ನಾಟಕ ಸರ್ಕಾರ, ಬೆಂಗಳೂರು
2. ಶ್ರೀ ಅಪ್ಪಚ್ಚುರಂಜನ್, ಸನ್ಮಾನ್ಯ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು
3. ಶ್ರೀ ಡಿ.ವಿ. ಸದಾನಂದಗೌಡ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

2. ಕಚೇರಿಗೆ "ಡಿ" ಗ್ರೂಪ್ ನೌಕರರನ್ನು ಏಜೆನ್ಸಿ ಮೂಲಕ ನೇಮಿಸಿಕೊಳ್ಳುವ ಬಗ್ಗೆ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಕಚೇರಿಗೆ ಒಬ್ಬರು "ಡಿ" ದರ್ಜೆ ನೌಕರರ ಅವಶ್ಯಕತೆಯಿದ್ದು, ಸದರಿಯವರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಏಜೆನ್ಸಿ ಮೂಲಕ ನೇಮಿಸಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಕಚೇರಿಗೆ ಈಗಾಗಲೇ ಬಂದಿರುವ ಅರ್ಜಿಗಳಲ್ಲಿ ಶ್ರೀಮತಿ ಶೋಭಾ ಇವರ ಅರ್ಜಿಯನ್ನು ಪರಿಶೀಲಿಸಿ ಇವರನ್ನು ಸದರಿ ಹುದ್ದೆಗೆ ನೇಮಿಸಿಕೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

4. ಸರ್ವ ಸದಸ್ಯರು ಆದಷ್ಟು ಬೇಗನೆ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸುವಂತೆ ರಿಜಿಸ್ಟ್ರಾರ್‌ರವರು ಕೋರಿದರು.


## ಸುರಗಿ ತ್ರೈಮಾಸಿಕ ಪತ್ರಿಕೆ ಚಂದಾದಾರನ ತಿಳುವಳ್ಕೆಗೆ

- ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ ಕಡೆಂದ ಪ್ರಕಟ ಆಗ್‌ವ "ಸುರಗಿ" ಪತ್ರಿಕೆನ ನೀವ್ ಎಲ್ಲವು ಸದಸ್ಯರ್ ಆಕು. ಬಿಡಿ ಸಂಚಿಕೆ ಬೆಲೆ ರೂ. 15.00, ವರುಸಕೆ ರೂ. 50.00, ಜೀವನ ಪೂರ್ತಿಗೆ ರೂ. 500.00 ಆದೆ.
- ಸದಸ್ಯರ್ ಆದವುಕೆ ಪತ್ರಿಕೆನ ಅಂಚೆಲಿ ಕಳ್ಸುವೆ.
- ನೀವ್‌ಗ್ಳ ಪರಿಚಯಸ್ತರಿಗೆ ಸದಸ್ಯರ್ ಆಕೆ ತಿಳ್ಸಕುಳೊ.
- ಕತೆಗ / ಪದ್ಯಗ / ಹರಿತ ಸಣ್ಣ ಪದ್ಯಗ (ಚುಟುಕ) ಲೇಖನಗ ಇಂತವುಕ್ಕೆಲ್ಲಾ ಅವಕಾಸ ಉಟ್ಟು.
- ಪ್ರಕಟ ಆಗುವ ಅರೆಬಾಸೆ ಬರವಣಿಗೆಗೆ ಸಣ್ಣ ಸಂಬಾವನೆ ಉಟ್ಟು.
- ಬರವಣಿಗೆ ಮಾತ್ರ ನಾಲ್ಕ್ ಪುಟಕೆ ಸೀಮಿತ ಇರೊಕು.
- ಪುಟದ ಒಂದು ಬದಿಲಿ ಮಾತ್ರ ಬರ್ದಿರಕು. ಅಕ್ಷರ ಉರುಟಾಗಿ ಇರ್ಲಿ. ಓದ್‌ಕನ ಅರ್ತ ಆಕು. ಇಲ್ಲೆಂದರೆ ತಿರಸ್ಕಾರ ಆದೆ. ಕಳ್ಸಿದನ್ನ ಹಿಂದಕ್ಕೆ ನೀವ್‌ಗೆ ಕಳ್ಸುವ ವ್ಯವಸ್ಥೆ ನಮ್ಮಲಿ ಸದ್ಯಕೆ ಯಿಲ್ಲೆ.
- ಹೆಸ್‌ರ್ / ವಿಳಾಸ / ದೂರವಾಣಿ ಅಂಕಿಗ ಬರ್ದಿರಕು.
- ಇದರೊಟ್ಟಿಗೆ ನಿಮ್ಮದ್ ಒಂದು ಪಾಸ್ ಪೋರ್ಟ್ ಪೋಟೊ ಇಸಿಕೆ ಮರೆಕಾಗದ್.

ನಾವ್‌ಗ್ಳ ವಿಳಾಸ :
ಸಂಪಾದಕರ್, ಸುರಗಿ ತ್ರೈಮಾಸಿಕ ಪತ್ರಿಕೆ
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಗನೇ ಮಹಡಿ, ರಾಜಾಸೀಟ್ ರಸ್ತೆ, ಮಡಿಕೇರಿ - 571 201, ಕೊಡಗು ಜಿಲ್ಲೆ
ಈಮೇಲ್ : arebaseacademy@gmail.com ದೂರವಾಣಿ : 08272 - 223055



# ಪತ್ರಿಕೋದ್ಯಮ - ಒಂದು ಹಿನ್ನೋಟ

✍ ಪಟ್ಟಡ ಶೀಲಾಮಣಿ
*ಸಂಪಾದಕಿ, ಕೊಡಗು ಸಂಗಾತಿ ಪಾಕ್ಷಿಕ*
ಅವಂದೂರು

ಪತ್ರಿಕಾ ನಿರ್ವಹಣೆಯೇ ಪತ್ರಿಕೋದ್ಯಮ. ಸುದ್ದಿ, ಸಮಾಚಾರ, ವಿಚಾರ, ಅಭಿಪ್ರಾಯ ಹಾಗೂ ಜಾಹೀರಾತು ಸಂಗ್ರಹಿಸಿ ಬರೆದು ಸಂಪಾದಿಸಿ, ವಿತರಿಸುವ ಕಾರ್ಯವನ್ನು ಪತ್ರಿಕೋದ್ಯಮ ಎಂದು ಕರೆಯಬಹುದು. ಕರ್ನಾಟಕದಲ್ಲಿ ಪತ್ರಿಕೋದ್ಯಮಕ್ಕೆ ಸುಮಾರು 175ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಭಾರತಕ್ಕೆ ವ್ಯಾಪಾರದ ನೆಪದಲ್ಲಿ ಬಂದ ಆಂಗ್ಲರು ತಮ್ಮ ಧರ್ಮ ಪ್ರಚಾರವನ್ನು ಆಯಾ ಪ್ರಾಂತ್ಯಗಳಲ್ಲಿ ಪತ್ರಿಕೋದ್ಯಮ ಮೂಲಕ ಮಾಡುತ್ತ ಪ್ರಾಂತ್ಯದ ಮಾತೃಭಾಷೆಗೆ ಪ್ರಾಧಾನ್ಯತೆ ನೀಡುತ್ತಿದ್ದರು. 1834ರಲ್ಲಿ ಜರ್ಮನರು ಮಂಗಳೂರಿಗೆ ಬಂದಾಗ ರಂಗಶೆಟ್ಟರ ಸಹಾಯದಿಂದ ಕನ್ನಡ ಅಚ್ಚು ಮೊಳೆಗಳ ಎರಕದಿಂದ ಮುದ್ರಣ ಕಾರ್ಯ ಪ್ರಾರಂಭವಾಯ್ತು. 1842ರಲ್ಲಿ ಮಂಗಳೂರು ಸಮಾಚಾರ ಪತ್ರಿಕೆ ಪ್ರಾರಂಭವಾಯ್ತು. ನಂತರ ರಾಜ ಒಡೆಯರ ಕೃಪೆಯಿಂದ ಕರ್ನಾಟಕ ಪ್ರಕಾಶಿಕ ಮೊದಲ ವಾರಪತ್ರಿಕೆ ಆಗಿ ಬಂತು. ವೃತ್ತಾಂತ ಬೋಧಿನಿ ಪತ್ರಿಕೆಯು ಕೂಡ ಇದೆ ಕಾಲದಲ್ಲಿ ಪ್ರಕಟವಾಗುತ್ತಿತ್ತು. ಮುಂದೆ ತಿರುಮಲೆ ತಾತಾಚಾರ್ಯರ ಕರ್ನಾಟಕ ಪ್ರಕಾಶಿತ ಪತ್ರಿಕೆಯು 1891ರಲ್ಲಿ ಜನರ ಆರ್ಥಿಕ ಮತ್ತು ನೀತಿಗಳಿಗೆ ಸ್ಪಂದಿಸಿ ಅನುಕೂಲ ಮಾಡಿಕೊಡಲು ಸಹಾಯಕಾರಿಯಾಯ್ತು. 1888ರಲ್ಲಿ ಸೂರ್ಯೋದಯ ಪ್ರಕಾಶಿತ ಪತ್ರಿಕೆ ಪ್ರಾರಂಭವಾಯಿತು. 1905ರಲ್ಲಿ ಕರ್ನಾಟಕ ಕೇಸರಿ ಮತ್ತು ವಕ್ಕಲಿಗರ ಪತ್ರಿಕೆಗಳು ಹೊರ ಬಂದರೂ ಆರ್ಥಿಕ ತೊಂದರೆಯಿಂದಾಗಿ ಕೆಲವೇ ಕಾಲದಲ್ಲಿ ಇವು ಮುಚ್ಚಿ ಹೋದವು. ಕನ್ನಡ ಪತ್ರಿಕೋದ್ಯಮದ ಪಿತಾಮಹರಾದ ತಿರುಮಲೆ ತಾತಾಚಾರ್ಯರು ಶ್ರಮವಹಿಸಿ ಪತ್ರಿಕೆಗಳು ಹೊರಬರಲು ಕಾರಣಕರ್ತರಾದರು. 1885ರಲ್ಲಿ ವೃತ್ತಾಂತ ಚಿಂತಾಮಣಿ ವಾರಪತ್ರಿಕೆ ಪ್ರಾರಂಭವಾಯಿತು. ಹೀಗೆ 1926ರಲ್ಲಿ ತಾಯ್ನಾಡು ಪ್ರಾರಂಭ ಆಗಿ 1927ರಲ್ಲಿ ಹೆಚ್ಚಿನ ಪ್ರಸಾರ ಸಿಕ್ಕಿ ಹೆಚ್ಚು ಮೆಚ್ಚುಗೆ ಪಡೆಯಿತು. 1932ರಲ್ಲಿ ರಜತ ಜಯಂತಿ, 1934ರಲ್ಲಿ ಚಂಗಲ್ ರಾಯ ರೆಡ್ಡಿಯವರು ಸಂಪಾದಕರಾಗಿದ್ದ ಜನವಾಣಿ ಪತ್ರಿಕೆ ಬಂತು. 1931ರಲ್ಲಿ ಪ್ರಜಾಮತ, 1929ರಲ್ಲಿ ಸಂಯುಕ್ತ ಕರ್ನಾಟಕ ಪ್ರಾರಂಭವಾಯ್ತು; 1948ರಲ್ಲಿ ಪ್ರಜಾವಾಣಿ ಹಾಗೂ 1968 ರಿಂದೀಚೆ ಕನ್ನಡ ಪ್ರಭಾ ಪತ್ರಿಕೆಗಳು ಉತ್ತಮ ಹೆಸರಿನಲ್ಲಿ ನಡೆದು ಬರುತ್ತಿವೆ. 1965ರಲ್ಲಿ ಸುಧಾ ವಾರಪತ್ರಿಕೆಯು ಪ್ರಾರಂಭವಾಯ್ತು. 1971ರಲ್ಲಿ ಉದಯವಾಣಿ ಎಂಬ ಕರಾವಳಿಯಲ್ಲಿ ಪ್ರಕಟವಾದ ಮುಂಜಾನೆ ಪತ್ರಿಕೆ ಇದಾಗಿದೆ.

ಐತಿಹಾಸಿಕವಾಗಿ ನೋಡಿದಾಗ ಪತ್ರಿಕೆಯು ಬೇರೆ ಮಾಧ್ಯಮಕ್ಕಿಂತಲೂ ಮುಂದಿದೆ. ಇದರಲ್ಲಿ ಯಾವುದೇ ಪತ್ರಿಕೆಯಾಗಿರಬಹುದು. ಪತ್ರಿಕೆಗಳು ಮನರಂಜನೆ ಹಾಗೂ ಜಾಹಿರಾತು ನೀಡುತ್ತವೆ. ಸರಕು ಮತ್ತು ಮಾರುಕಟ್ಟೆಯಲ್ಲಿನ ಉತ್ಪಾದನೆ ಖರ್ಚುಗಳ ಬಗ್ಗೆ ಸಲಹೆ ಮತ್ತು ಅಭಿಪ್ರಾಯ ನೀಡುವುದರ ಜೊತೆಗೆ ಕಲೆ ಮತ್ತು ಸಂಗೀತಗಾರರ ಪರಿಚಯಗಳನ್ನು ಕೊಡುತ್ತವೆ. ದೇವಾನುದೇವತೆಗಳ ಕಾಲದಲ್ಲಿ ನಾರದನೇ ಪ್ರಸಾರ ಮಾಧ್ಯಮ. ರಾಜ ಮಹಾರಾಜರುಗಳ ಕಾಲದಲ್ಲಿ ಪಾರಿವಾಳಗಳ ಮೂಲಕ ಸಂದೇಶಗಳನ್ನು ಜೊತೆಗೆ ಡಂಗೂರ ತಮಟೆ ಬಾರಿಸುವವರು ಪ್ರಸಾರ ಮಾಧ್ಯಮದವರಾಗಿದ್ದರು. ರೋಮನ್ ಚಕ್ರವರ್ತಿಗಳ ಕಾಲದಲ್ಲಿ ವಾಲ್ ಚಾರ್ಟ್‌ಗಳ ರೀತಿಯಲ್ಲಿ ಬರೆದು ಚಾವಡಿಗಳಲ್ಲಿ ಅವುಗಳನ್ನು ನೇತು ಹಾಕಿಸುವುದರ

ಮೂಲಕ ವಿಷಯ ಪ್ರಸಾರವಾಗುತ್ತಿತ್ತು. ಮೊಬಲಗರ ಕಾಲದಲ್ಲಿ ಗುಪ್ತ ಸ್ಥಳಗಳಲ್ಲಿ ದೂತರಿಂದ ಸುದ್ದಿಯನ್ನು ಮುಟ್ಟಿಸುವ ವ್ಯವಸ್ಥೆಯಿತ್ತು.

ಪತ್ರಿಕೆಗಳು ಪ್ರಜಾಪ್ರಭುತ್ವ ಪ್ರಪಂಚದಲ್ಲಿ ಅತ್ಯಂತ ಉತ್ತಮವಾದ ಆಡಳಿತ ವ್ಯವಸ್ಥೆ ಎಂದು ಪರಿಗಣಿಸಲ್ಪಟ್ಟಿವೆ. ಪ್ರಭಾಪ್ರಭುತ್ವದಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮುಕ್ತವಾಗಿ ಹಾಗೂ ಸ್ವತಂತ್ರ್ಯವಾಗಿ ಕಾರ್ಯ ನಿರ್ವಹಿಸುತ್ತವೆ. ಆದರೆ ಈ 3 ಅಂಗಗಳ ಕಾರ್ಯನಿರ್ವಹಣೆಯ ಉಸ್ತುವಾರಿ ಪತ್ರಿಕೋದ್ಯಮಕ್ಕೆ ಸೇರಿರುತ್ತದೆ. ಈ ಅಂಶಗಳ ಎಡರು ತೊಡರುಗಳನ್ನು ಅಮೇರಿಕಾ ದೇಶದಲ್ಲಿ ಪತ್ರಿಕೆಗಳು ಮುಕ್ತವಾಗಿ ಖಂಡಿಸುತ್ತವೆ. ಆದರೆ ಭಾರತದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಅಂದರೆ 19(1ಎ)ದಲ್ಲಿ ಸೇರಿಸಲಾಗಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ದೇಶಕ್ಕೆ ಗಂಡಾಂತರ ಬಂದಾಗ ಅದನ್ನು 19(2) ಪ್ರಕಾರ ಪತ್ರಿಕೆಗಳ ಹಕ್ಕನ್ನು ಕಸಿದುಕೊಳ್ಳಬಹುದು. ಆದುದರಿಂದಲೇ ಪತ್ರಿಕೋದ್ಯಮವನ್ನು ಪ್ರಜಾಪ್ರಭುತ್ವದ 4ನೇ ಹಾಗೂ ಮಹತ್ವದ ಅಂಗ ಎಂದು ಅರ್ಥೈಸಲಾಗಿದೆ. ಆದರೆ ಇದು ಕಾನೂನಿನ ಚೌಕಟ್ಟಿನಲ್ಲಿ ನಡೆದುಕೊಂಡು ಹೋಗಬೇಕಾಗುತ್ತದೆ. ಪತ್ರಿಕೋದ್ಯಮನಾದವನು ನಿಷ್ಠಾವಂತನಾಗಿರಬೇಕು ಮತ್ತು ಮುಳ್ಳಿನ ಹಾಸಿಗೆ ಇದ್ದ ಹಾಗೆ ಎಲ್ಲಾ ಎಡರು-ತೊಡರುಗಳನ್ನು ಎದುರಿಸಬೇಕಾಗುತ್ತದೆ.

**ಪತ್ರಿಕಾ ಸಂಸ್ಥೆಯ ವಿವಿಧ ಭಾಗಗಳು** - (1) ಸುದ್ದಿ ಸಂಪಾದಕೀಯ (2) ವ್ಯಾಪಾರ (3) ಉತ್ತೇಜನ (4) ಯಾಂತ್ರಿಕ (5) ಪರಿಸ್ಕರಣೆ (6) ಆಡಳಿತ (7) ಗ್ರಂಥಾಲಯ ಮತ್ತು 8 ಛಾಯಾಚಿತ್ರ ವಿಭಾಗಗಳು, ದೊಡ್ಡ ಪತ್ರಿಕಾಲಯದಲ್ಲಿನ ಸಿಬ್ಬಂದಿಗಳನ್ನು ಗಮನಿಸುವುದಾದರೆ (1) ಮುಖ್ಯ ಸಂಪಾದಕ (2) ಸಂಪಾದಕ (3) ಸಹಾಯಕ ಸಂಪಾದಕ (4) ಸುದ್ದಿ ಸಂಪಾದಕ (5) ಮುಖ್ಯ ಉಪ ಸಂಪಾದಕ (6) ಉಪ ಸಂಪಾದಕ (7) ಸಂಪಾದಕೀಯ ಸಹಾಯಕರು ಮತ್ತು (8) ವರದಿಗಾರರು.

ಪ್ರಸಾರ ಮಾಧ್ಯಮಗಳಲ್ಲಿ ರೇಡಿಯೋ, ಚಲನಚಿತ್ರ ಹಾಗೂ ದೂರದರ್ಶನ ಮಾಧ್ಯಮಗಳು ಮನುಷ್ಯನಿಗೆ ಅನುಕೂಲಕರ ಹಾಗೂ ಮನರಂಜನೆ ನೀಡುವಂತಹ ಮಾದ್ಯಮಗಳಾಗಿವೆ. ದೂರದರ್ಶನವಂತೂ ಸುಪ್ರಸಿದ್ಧ ಮಾದ್ಯಮವಾಗಿದೆ. ಕಾರಣ ವಿಷಯವನ್ನು ಕೇವಲ ಕೇಳುವುದಲ್ಲ, ನಿಜಸ್ಥಿತಿಯನ್ನು ವಾಸ್ತವವಾಗಿ ನೋಡುವಂತಹುದಾಗಿದೆ. ಸುದ್ದಿ ಸಮಾಚಾರಗಳ ಸ್ವರೂಪವು ಬರಹಗಾರನ ಮೇಲೆ ಅವಲಂಬಿಸಿರುತ್ತದೆ. ಯಾವ ಶೈಲಿಯಲ್ಲಿ ಯಾವ ಸುದ್ದಿ ಬರಹಗಾರ ನಿಶ್ಚಯಿಸಿ ಬರೆಯುತ್ತಾನೋ ಅದೇ ಒಂದು ರೀತಿಯಲ್ಲಿನ ಸುದ್ದಿ ಎನಿಸಿಕೊಳ್ಳುತ್ತದೆ. ಇದರಲ್ಲಿ ನಾನಾ ಮುಖಗಳಲ್ಲಿ ಕಾಣಿಸಿಕೊಳ್ಳುವ ಸುದ್ದಿಗಳಿರುತ್ತವೆ. ಸ್ಥಳೀಯ, ರಾಜ್ಯ ಮಟ್ಟದ, ಪ್ರಾಂತ್ಯ ಮಟ್ಟದ, ರಾಷ್ಟ್ರ ಮಟ್ಟದ ಮತ್ತು ಇದರ ಜೊತೆಗೆ ದಿನಸುದ್ದಿ, ವಾರಕೊಮ್ಮೆ ತಿಳಿಸುವ ಸುದ್ದಿ, ತಿಂಗಳಿಗೊಮ್ಮೆ ತ್ರೈಮಾಸಿಕವಾಗಿ ತಿಳಿಸುವ ಸುದ್ದಿ ಹೀಗೆ.

**ಸುದ್ದಿಯ ಅಂಶಗಳು**

1. ಪ್ರಾಮುಖ್ಯತೆ ಇಲ್ಲಿ ಪ್ರಮುಖ ವ್ಯಕ್ತಿ, ಸಂಸ್ಥೆ, ದೇಶ, ಶಿಕ್ಷಣ, ವಿಜ್ಞಾನ, ಕೃಷಿ ಮತ್ತು ಕೈಗಾರಿಕೆಗೆ ಆದ್ಯತೆ ನೀಡುವಂತದ್ದು.
2. ಅನಿರೀಕ್ಷತೆ : ನಿರೀಕ್ಷಿಸಲ್ಪಡದೆ ತಾನಾಗಿಯೇ ಬಂದುದಕ್ಕೆ ಅನರೀಕ್ಷತೆ ಎನ್ನುತ್ತೇವೆ. ಇದರ ಬಗ್ಗೆ ಓದುಗರಿಗೆ ಆಸಕ್ತಿ, ಕಾತುರತೆ ಇರುತ್ತದೆ.
3. **ಸಮಕಾಲೀನತೆ :** ಸಂಸ್ಕೃತಿ ಮತ್ತು ನಾಗರೀಕತೆಯ ಬಗ್ಗೆ ಬದುಕಿನಲ್ಲಿಇಂದು ಏನಾಗುತ್ತಿದೆ ಎಂಬುದನ್ನು ತಿಳಿಸುವುದಾಗಿರುತ್ತದೆ.
4. **ಸಕಾಲಿಕತೆ :** ಈಗ ಯಾವುದೇ ವಿಚಾರ ಶೀಘ್ರವಾಗಿ ಮುಟ್ಟಿಸುವಂತಹದಾಗಿರುವುದು.
5. **ಸ್ಥಳೀಯುತೆ :** ಸ್ಥಳೀಯ ಆಗುಹೋಗುಗಳನ್ನು ತಿಳಿಸುವಂತದ್ದು.
6. ಮಾನವ ಶಕ್ತಿ ಯಾವುದೇ ಶಕ್ತಿ ಸುದ್ದಿಯ ಓದುಗನ ಮೇಲೆ ಪರಿಣಾಮ ಬೀರದಾಗದಂತಹ ಕಾರಣಕ್ಕೆ ಮಾನವ ಶಕ್ತಿ ಬೀಳಬೇಕಾಗುತ್ತದೆ.
7. **ಪ್ರಮಾಣ ಗಾತ್ರ :** ಹೆಚ್ಚಿನ ಪ್ರಮಾಣದಲ್ಲಿ

ಸರಬರಾಜು ಆಗುವಂತಹದ್ದು.

8. **ಘರ್ಷಣೆ ಅಥವಾ ದುರಂತ :** ಇಂಥಹ ಸುದ್ದಿ ಜನರಲ್ಲಿ ಕುತೂಹಲ ಕೆರಳಿಸುವಂತಾಗಿದೆ.
9. **ಶಾಂತಿ ಮತ್ತು ಪ್ರಗತಿ :** ಸಮಾಜದಲ್ಲಿ ಸಮಾಜಕ್ಕಾಗಿ ಮಾಡುತ್ತಿರುವ ಕಾರ್ಯಗಳಲ್ಲಿ ಮುಖಂಡರು ಎಷ್ಟರ ಮಟ್ಟಿಗೆ ಶಾಂತಿ ಕಾಪಾಡುತ್ತಿದ್ದಾರೆ ಎಂಬುದರ ಬಗ್ಗೆ ಅದರ ಮೌಲ್ಯವನ್ನು ತಿಳಿಸುವುದಾಗಿದೆ.

**ಸುದ್ದಿ ಬರಹ ತತ್ವಗಳು :** ಮುಖ್ಯ ಬರಹಗಾರನು ಕೆಲವು ಮೌಲ್ಯಗಳನ್ನು ಹೊಂದಿರಬೇಕು.

1. ವಸ್ತು ಮತ್ತು ವಿಷಯದ ಮೇಲೆ ಹಿಡಿತ
2. ಬರಹ ತತ್ವ ಪಾಲಿಸುವುದು
3. ಓದುಗರಿಗೆ ಅರ್ಥವಾಗುವಂತದ್ದು
4. ಬರಹದಲ್ಲಿ ಸ್ವಚ್ಚತೆ
5. ಸರಳ ಹಾಗೂ ಸ್ವಚ್ಚ ಪದಗಳ ವಾಕ್ಯಗಳ ಆಯ್ಕೆ ಇರಬೇಕಾಗುತ್ತದೆ
6. ವ್ಯಾಕರಣ ಶುದ್ದ ಹಾಗೂ ನಿಷ್ಪಕ್ಷಪಾತವಾದ ಬರಹವಾಗಿರಬೇಕು.

**ಸುದ್ದಿ ಸಂಸ್ಥೆಗಳು :** ದಿನ ಪತ್ರಿಕೆಗಳಿಗೆ ಸುದ್ದಿ ಸಂಗ್ರಹ ಮಾಡಲು ಸಾಧ್ಯವಾಗುವಂತೆ ಮಾಡಲು ಹಲವು ಸುದ್ದಿ ಸಂಸ್ಥೆಗಳು ಹುಟ್ಟಿಕೊಂಡಿವೆ. ಅವುಗಳ ಕೆಲಸ ಕೇವಲ ಸುದ್ದಿಗಳನ್ನು ಒದಗಿಸುವುದು ಅಷ್ಟೇ. ಈ ಸಂಸ್ಥೆಗಳು ವಿದೇಶಗಳಿಂದಲೂ ಸುದ್ದಿಗಳನ್ನು ತರಿಸಿಕೊಳ್ಳುತ್ತವೆ. ಯುಎನ್ಐ, ಪಿಟಿಐ, ರೈಟರ್, ಸಮಚಾರ್ ಭಾರತಿ, ಹಿಂದೂ ಸಮಚಾರ, ಸುದ್ದಿ ಸಂಸ್ಥೆಗಳು ಹೀಗೆ ನಾನಾ ಸಂಸ್ಥೆಗಳಿವೆ.

ಭಾರತದಲ್ಲಿ ಅನೇಕ ಸಣ್ಣ -ಪುಟ್ಟ ಪತ್ರಿಕೆಗಳು ಹುಟ್ಟಿಕೊಳ್ಳುತ್ತಿವೆ. ಆದರೆ ಅವುಗಳು ಹೆಚ್ಚು ಕಾಲ ಮೆಚ್ಚುಗೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ ಅಥವಾ ಆರ್ಥಿಕ ಮುಗ್ಗಟ್ಟಿನಿಂದ ಹೆಚ್ಚು ಕಾಲ ಉಳಿಯದೆ ನಿಂತು ಹೋಗುತ್ತವೆ. ಕಾರಣ ಜಾಹಿರಾತಿನ ತೊಂದರೆ ಮತ್ತು ಕೆಲವೊಮ್ಮೆ ಆಧುನಿಕ ತಾಂತ್ರಿಕ ಜ್ಞಾನಗಳನ್ನು ಬಳಸಿಕೊಳ್ಳಲು ಉಂಟಾಗುವ ಅಸಾಧ್ಯತೆ. ಭಾರತಾದ್ಯಂತ ಪ್ರಾಂತ್ಯದ ಜನಾಂಗ ತಮ್ಮ ಭಾಷೆಯ ಅಭಿವೃದ್ಧಿಯ ಹಿತಚಿಂತನೆಯಡಿ ಅದೆಷ್ಟೋ ಸುದ್ದಿ ಪತ್ರಿಕೆಗಳು ಹುಟ್ಟಿಕೊಳ್ಳುತ್ತವೆ. ಮತ್ತೆ ಮೇಲೆ ತಿಳಿಸಿದ ಕಾರಣಗಳಿಂದ ಬಿದ್ದು ಹೋಗುತ್ತವೆ. ಕೊಡಗು ಜಿಲ್ಲೆಯೊಳಗೆ ಹತ್ತಾರು ಭಾಷವಾರು ಸುದ್ದಿ ಪತ್ರಿಕೆಗಳು ಹುಟ್ಟಿ ಕಷ್ಟದಿಂದ ತಮ್ಮ ಬದುಕನ್ನು ಸಾಗಿಸುತ್ತಿವೆ. ಪಾಕ್ಷಿಕ ಪತ್ರಿಕೆಯಾಗಿ ಹುಟ್ಟಿದ ಏಕೈಕ ಗೌಡ ಅರೆಭಾಷಿಕ ಕೊಡಗು ಸಂಗಾತಿ ಜಾಹಿರಾತು ಮತ್ತು ಸಹಕಾರ ಕೊರತೆಯ ಕಾರಣ ಪಾಕ್ಷಿಕ ರೂಪದಲ್ಲೂ ತನ್ನ ಪ್ರಯತ್ನದಲ್ಲಿ ಅಸಫಲತೆಯೊಂದಿಗೆ 88 ತಿಂಗಳಲ್ಲೇ ಸ್ಥಗಿತಗೊಡಿತು. ಸೂಜಿ ಮತ್ತು ಗೌಡದೊನಿ ಪತ್ರಿಕೆಗಳು ಸಹ ಕೆಲವು ತಿಂಗಳುಗಳಲ್ಲಿ ಕಮರಿಹೋಗಿದ್ದು ನಿಜವಾಗಿಯೂ ಖೇದಕರ. ಗೌಡರಂತಹ ಪ್ರಭಾವಿ ಜನಾಂಗಕ್ಕೆ ಪತ್ರಿಕೆ ಮಾದ್ಯಮದ ಅವಶ್ಯಕತೆಯೂ ಹೌದು, ಅನಿವಾರ್ಯವು ಹೌದು. ಚಿಂತಿಸಿ ...


**ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿನ ಕಾರ್ಯವ್ಯಾಪ್ತಿ**




1. ಮಂಗಳೂರು
2. ಉಳ್ಳಾಲ
3. ವಿಟ್ಲ
4. ಪುತ್ತೂರು
5. ಸುಳ್ಯ
6. ಮಡಿಕೇರಿ
7. ಸೋಮವಾರಪೇಟೆ
8. ವಿರಾಜಪೇಟೆ
9. ಕಾಸರಗೋಡು ಕೇರಳ

# ಕಾಲಕ್ಕೆ ತಕ್ಕಂತೆ ಬದಲಾಗುತ್ತಿದ್ದ ಕೊಡಗು

## 1773ರ ಹಿಂದಿನ ಕೊಡಗು




## 1773 ರಿಂದ 1804ರ ವರೆಗಿನ ಕೊಡಗು




## 1804 ರಿಂದ 1834ರ ವರೆಗಿನ ಕೊಡಗು




## 1834ರ ನಂತರದ ಕೊಡಗು





# ಕೊಡಗ್ ಮತ್ತೆ ಸಂಸ್ಕೃತಿ

✍ ಕಟ್ರತನ ಲಲಿತಾ ಅಯ್ಯಣ್ಣ
ಗೌಳಿಬೀದಿ, ಮಡಿಕೇರಿ

ಮೂರ್ತಿ ಚಿಕ್ಕದಾದರ್ ಕೀರ್ತಿ ದೊಡ್ಡದ್ ತ್ತ್ೇಳುವ ಗಾದೆ ಮಾತ್ ಕೊಡಗ್‌ನ ಪಾಲಿಗೆ ಅಕ್ಷರಶಃ ಸತ್ಯ. ಕರ್ನಾಟಕದ ಜಿಲ್ಲೆಗಳ ಪೈಕಿ ಕೊಡಗ್ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತೆ ಧಾರ್ಮಿಕ ಕ್ಷೇತ್ರಗಳ್ಲಿ ತನ್ನದೇ ಆದ ವೈಶಿಷ್ಟ್ಯನ ಪಡ್ಚಿಟ್ಟ್. ಕರ್ನಾಟಕ ಭಾರತಾಂಬೆಯ ಮಗಳಾದರೆ, ಕೊಡಗ್ ಕನ್ನಡಾಂಬೆಯ ಮಗಳ್‌ತ ಪೇಳಕ್.

**ದಕ್ಷಿಣ ಗಂಗೆ ಕಾವೇರಿ :** ಕೊಡಗ್ ತೇಳ್ದ ಕ್ಷಣಲಿ ನಮ್ಮ ಮನ್ಸ್‌ಲಿ ಸಾಕ್ಷಾತ್‌ಕಾರಗೊಳ್ಳುದ್, ಮಾತೆ ಕಾವೇರಿನ ಭವ್ಯ ಗಂಭೀರ ಹರಿವು. ಮೈಮರ್‌ಸುವಂತ ಭಕ್ತಿ ಭಾವದ ಹರಿವು.

ಪಾವನೆಯರ ಕೃಷ್ಣೆ
ಭೀಮೆಯರ ತಾಯ್ನಾಡು
ಕಾವೇರಿ ಗೋದೇಯರು
ಮೈದೊಳೆಯುವ ನವಿನಾಡು

ಎಂದ್ ಕವಿ ಕನ್ನಡ ನಾಡ್‌ನ ವರ್ಣಿಸಿಟ್ಟ್, ದಕ್ಷಿಣ ಗಂಗೆತ ಹೆಸರ್‌ಪಡ್ದ ಕೊಡಗ್‌ನ ಮಹಾನದಿ ಕಾವೇರಿ ಅಲ್ಲದೆ ಅದರೊಟ್ಟಿಗೆ ಅಲ್ಲಲಿ ಸೇರಿಕಂಡ್ ಹಕ್ಕಲೆ ಲಕ್ಷ್ಮಣ ತೀರ್ಥ ಮತ್ತೆ ಇನ್ನೂ ಹೆಚ್ಚ್ ಸಣ್ಣ ಹೊಳೆಗ, ಕಿರ್‌ನದಿಗ, ಪ್ರಕೃತಿ ಸೊಬಗ್‌ನ ಪೂರ್ಸ್‌ನ ವಸ್ತ್ ಮಾತ್ರ ಅಲ್ಲ, ಇಲ್ಲಿನ ಸಿರಿ ಸಂಪತ್‌ನ ಜೀವಾಳ ಹೌದ್. ಅವ್ ಬೆಳೆ ಬೆಳ್ಸಿ ಬೆಳಕ್ ನೀಡಿ ಬಾಳ್‌ನ ಪೋಷಿಸ್‌ತಿರ್‍ವ ಕರುಳಾಮಯಿಗ. ಅಷ್ಟೆ ಅಲ್ಲ ಅವು ನಮ್ಮ ನಾಡ್‌ನ ಪಾವನಗೊಳಿಸೊಳೊ. ಕೊಡಗ್‌ನ ಜನತೆದ್ ಪ್ರತಿಯೊಂದರ್ಲು ಪಾವಿತ್ರ್ಯದ ಕಾಣ್‌ವ ಹಿರಿಯರ ಮನಸ್ಸ್ ಹಂಗೆನೆ ನಮ್ಮ ಜನಪದ ಸಾಹಿತ್ಯಲಿ ಸ ಕಾವೇರಿನ ಪಾತ್ರ ದೊಡ್ಡದಾಗಿಟ್ಟ್. ಸುತ್ತ ಹಸಿರ್ ಕಾಡ್‌ನ ನಡ್‌ವೆ ಬ್ರಹ್ಮಗಿರಿಲಿ ಒಂದು ಸಣ್ಣ ಜಾಗೆಲಿ ಪಾಲ್ಕಕ್ಕೆ ಚಿಮ್ಮುವ ಸೆಲೆನ ನೋಡಿಕೆ ಮುಂದೆ ಇವ್ ಬೃಹದಾಕಾರವಾಗಿ ಹರ್ದ್ ಲಕೋಪ ಲಕ್ಷ ಜನಕ್ಕೆ ಜೀವನಾಧಾರಕೆ ಹೆಂಗೆ ಸಾಧ್ಯತೇಳ್ದು ಯಾರಿಗಾದ್ರೂ ಅಚ್ಚರಿ ಮೂಡ್‌ಸಿದೆ.

**ದಂತಕತೆ :** ಕಾವೇರಿನ ಬಗ್ಗೆ ಒಂದು ವಳ್ಳ ದಂತ ಕತೆ ಇರ್ದು ಎಲ್ಲವ್ಕು ತಿಳ್ದ ವಿಚಾರ: ಬ್ರಹ್ಮನ ಮಾನಸ ಕೂಸಾದ ಲೋಪಾ ಮುದ್ರೆನ ಸಂತಾನ ಇಲ್ಲದೆ ಇದ್ದ ಕವೇರ ಮುನಿ ದತ್ತ್ ತಕಂಡದೆ. ಅಂದ್‌ಂದ ಲೋಪಾಮುದ್ರೆ ಕವೇರನ ಮಗಳ್ ಕಾವೇರಿ ಆದೆ. ವಯಸ್ಸಿಗೆ ಬಾಕನ ಕಾವೇರಿಗೆ ಅಗಸ್ತ್ಯ ಮುನಿಯೊಟ್ಟಿಗೆ ಮದ್ವೆ ಆದೆ. ಕೆಲ್ ಸರತ್‌ಗೆ ಒಪ್ಪಿ ಕಾವೇರಿ ಅಗಸ್ತ್ಯ ಮುನಿನ ಮದ್ವೆ ಆದ್ ಅಗಸ್ತ್ಯ ಮುನಿಂದ ವಚನಭಂಗ ಆಕನ ಹೊಳೆಯಾಗಿ ಹರ್ದದೆತ ಪ್ರತೀತಿ ಉಟ್ಟ್. ಕಾವೇರಿನ ಪಾತ್ರ ಕೊಡಗ್‌ಗಿಂತ ಹೊರ ಜಿಲ್ಲೆಗಳ್‌ಲಿ ಹೆಚ್ಚ್, ಕಾವೇರಿ ಹರಿವ ಜಾಗಂದ ಉದ್ದಕೆ ಅನೇಕ ಪುಣ್ಯ ಕ್ಷೇತ್ರ ಇರ್ದು ವಿಸೇಸ. ಇದರ ತೀರಲಿ ಇರ್‍ವ ಶ್ರೀರಂಗಪಟ್ಟಣ, ಮಹದೇವಪುರ ತಲಕಾಡು, ತಂಜಾವೂರು ಹಿಂಗೆ ಸ್ಥಳಗ ಪವಿತ್ರ ಕ್ಷೇತ್ರಗಳಾಗಳೊ. ಚೋಳರ್, ಪಾಂಡ್ಯರ್, ಹೊಯ್ಸಳರ್ ಮತ್ತೆ ಮೈಸೂರು ಅರಸ್‌ಗ ಕಟ್ಟಿದ ರಾಜ್ಯಗ ಕಾವೇರಿ ತೀರಲಿ ಮೆರ್ದೊಳೊ. ಒಟ್ಟ್‌ಲಿ ನಮ್ಮ ನಾಡ್‌ನ ಜಲಾಶಯಗಳ್‌ಗೆ ಇದ್ ಆಶ್ಚರ್ಯ ? ಪುಣ್ಯ ಕ್ಷೇತ್ರಗಳ್‌ಗೆ ಪಾವನ, ವಿದ್ಯಗಾರಗಳ್‌ಗೆ ಜೀವಾಳ, ಪೈರ್ ಪಚ್ಚೆಗಳ್ಗೆ ಜೀವ, ಮೃಗಪಕ್ಷಿಗಳ್ಗೆ ಪ್ರಾಣ, ಧಾರ್ಮಿಕ ಸಂಸ್ಕೃತಿಗೆ ಆಸ್ರಯ ಆಗಿರುವ ಕಾವೇರಿ ಹೊಳೆ ಇಂದ್ ಪಂಚವಾರ್ಷಿಕ ಯೋಜನೆಗಳ ಬೃಹತ್ ಯೋಜನೆಗಳ್ಗೆ ಆಧಾರವಾಗುಟ್ಟ್, ಭಾರತಲಿ ಬೇರೆ ಯಾವ ಹೊಳೆನೊ ಇಷ್ಟೊಂದು

ಸಮರ್ಪಕವಾಗಿ ನೀರಾವರಿಗೆ ಬಳ್‌ಸಿಕಂಡದ್ದ್ ಇಲ್ಲೆತ ಹೇಳುವೆ.

**ಕೊಡಗ್‌ನ ಹಬ್ಬಗ**

ಧಾರ್ಮಿಕ ಮನೋಭಾವ ಇರ್‍ವ ಕೊಡಗ್‌ನ ಜನ ಪ್ರತಿಯೊಂದು ಗ್ರಾಮುಲೂ ಗ್ರಾಮು ದೇವತೆಗಳ್ನ ಪ್ರತಿಷ್ಠಾಪನೆ ಮಾಡಿಕಂಡ್ ಪೂಜಿಸ್ತಾ ಬಂದೊಳೊ. ಪ್ರತಿ ವರ್ಷ ನಿಗದಿತ ಸಮಯಲಿ ನಡೆವ ಗ್ರಾಮ ದೇವತೆ ಉತ್ಸವ ಗ್ರಾಮ ಗ್ರಾಮಗಳ ಜನರ ಒಗ್ಗಟ್ಟಿನ ಪ್ರತೀಕವಾಗುಟ್ಟು. ಈ ಸಂದರ್ಭಲಿ ಎಲ್ಲಾ ಕಡೆಂದ ಜಾತಿ ಮತ ಬೇಧ ಇಲ್ಲದೆ ಎಲ್ಲಾ ವರ್ಗದ ಜನ ಸಹ ಸೇರಿಕಂಡ್ ತಮ್ಮ ಇಷ್ಟಾರ್ಥ ಸಿದ್ಧಿನ ಪಡ್‌ಕ್ಕಂಬುದು ನಡ್‌ದ್ ಬಂದ ಕ್ರಮವಾಗುಟ್ಟು.

ಕೊಡಗ್‌ನ ಹಬ್ಬಗಳ್‌ಲಿ ಮುಖ್ಯವಾದ್ ಕಾವೇರಿ ಸಂಕ್ರಮಣ ಕೈಲ್‌ಪೋದು ಮತ್ತೆ ಹುತ್ತರಿ ಹಬ್ಬ.

**ಕಾವೇರಿ ಸಂಕ್ರಮಣ:** ನಿಗದಿ ಮಾಡ್ದ ಸಮಯಕ್ಕೆ ಸರಿಯಾಗಿ ಕಾವೇರಿ ಮಾತೆ ಜಲರೂಪಾಗಿ ಉಕ್ಕಿ ನಾಡ್‌ಲಿ ಹರ್‍ಸಿದೆ. ಕಾವೇರೆ ಜಾತ್ರೆ ಸಾಂಪ್ರದಾಯಿಕ ಭಕ್ತಿ ಪೂರ್ಣತೆಗೆ ಸಾಕ್ಷಿ ಆಗುಟ್ಟು. ಅಂದ್ ಕಾವೇರಿ ಮಾತೆನ ಪೂಜಿಸಿ ತೀರ್ಥ ಮೀದ್ ಭಕ್ತರ್ ಪುಣ್ಯ ಪಡ್ಕಂಡವೆ. ತೀರ್ಥ ಬಂದ ಮಾರನೆ ದಿನ ಬಲಮುರಿಲಿ ಸ ಜಾತ್ರೆ ನಡ್ವದೆ. ಕಾವೇರಿ ಹೊಳೆಯಾಗಿ ಹರ್‍ದ್ದ ಬಾಕನ ಬಲಮುರಿನ ಜನ ಅವ್ಳ ತಡೊತ್ತೇಳುವ ಕತೆ ಉಟ್ಟು. ಮತ್ತೆ ಇದ್ ಸತ್ಯ ತೇಳಿಕೆ ಇಲ್ಲಿನ ಹೊಳೆಲಿ ಸುಳುವು ಉಟ್ಟ್ ಮತ್ತೆ ಭಗಂಡೇಶ್ವರ ದೇವಸ್ಥಾನ ಸಹ ಉಟ್ಟ್.

**ಕೈಲ್‌ಪೋದು ಹಬ್ಬ :** ಇನ್ನ್ ಕೈಲ್‌ಪೋದು ಹಬ್ಬಕ್ಕೆ ದೈವಿಕ ಪ್ರಾಶಸ್ತ್ಯ ಎಂತನೂ ಇಲ್ಲರು ಸ ನಮ್ಮ ಹಿರಿಯರ್ ಇದರ ಕರ್ತೃಗ. ಈ ಹಬ್ಬ ಬಾತ್‌ತೇಳ್ರೆ ಗದ್ದೆ ಕೆಲ್ಸಕೆ ವಿರಾಮ ಬಿದ್ದದೆ. ಮಳೆಗಾಲದ ಕಡೇಲಿ ಬರುವ ಈ ಹಬ್ಬಕೆ ಮುಟ್ಟ ಗದ್ದೆಗಳ್‌ಲಿ ದುಡ್ಡ್ ಸೋತ ಜೀವಗಳ್‌ಗೆ ಆಯಾಸನ ಪರಿಹರ್‍ಸಿ ಸಂತೋಷದ ಸಂಜೀವಿನಿನ ನೀಡ್ವೆ. ರೈತರ್ ತಮ್ಮ ಭಾಗ್ಯ ದೇವತೆಯಾದ ಎತ್ತ್‌ಗಳ ಮೈತೊಳ್ದ್, ನೇಗಲ್ ನೊಗ ಮತ್ತೆ ಬ್ಯಾಸಾಯಕ್ಕೆ ಉಪಯೋಗಿಸಿದ ಸಾಮಾನ್‌ಗಳ್ನ ತೊಳ್ದ್ ಪೂಜ್‌ಸಿವೆ. ಈಗ ಆಧುನಿಕತೆನ ಪ್ರತೀಕವಾಗಿ ಟ್ರ್ಯಾಕ್ಟರ್, ಟ್ರಿಲ್ಲರ್ ಮೊದ್‌ಲಾದ ಉಪಕರಣಗಳ್ನ ವ್ಯವಸಾಯ ಬಳಕೆಲಿ ಇದ್ದರೂ ಈ ಹಬ್ಬ ಕಳ್ದ ಮ್ಯಾಲೆ ಮುಂದೆ ಬರ್‍ವ ಬಿಸುವರ್‍ಗೆ ಈ ಉಪಕರಣಗಳ್ನ ಗದ್ದೆ ಹೂಡಿಕೆ ಉಪಯೋಗಿಸುದಿಲೆ. ಅಲ್ಲದೆ ಇದರೊಟ್ಟಿಗೆ ಕೊಡಗ್ ಜನರ ವೀರತನ ಗುರ್‍ತಾಗಿರ್‌ವ ಕೋವಿ, ಒಡಿಕತ್ತಿ ಮೊದಲಾದ ಆಯುಧಗಳ್ನ ಸಹ ಕೈಲ್‌ಪೋದ್ ದಿನ ಪೂಜೆ ಮಾಡಿವೆ.

**ಹುತ್ತರಿ ಹಬ್ಬ :** ಇದ್ ರೈತರ್ ವರ್ಷ ಇಡೀ ಕಷ್ಟ ಪಟ್ಟ್ ಬೆಳ್ದ ಧಾನ್ಯನ ಮನೆಗೆ ತುಂಬ್ರೊ ಸಂಭ್ರಮದ ಸುಗ್ಗಿ ಹಬ್ಬ. ಧಾನ್ಯ ಲಕ್ಷ್ಮೀನ ಪೂಜೆ ಈ ಹಬ್ಬಕ್ಕೆ ವಿಶೇಷ ಕಳೆ ನೀಡಿರೆ ಕೆಲವು ಕಡೆ ಸುಗ್ಗಿ ಕೊಣ್ತ ಅಂತೂ ಕಣ್ಣ್‌ಗೆ ಹಬ್ಬ ನಯನ ಮನೋಹರ ಆಗಿದ್ದದೆ. ಜನ ಪಿಟಾಕಿ ಹೊಡ್ಸಿ, ಹೊಸ ಅಕ್ಕಿಂದ ಮಾಡ್ದ ಪಾಯ್ಸ ಉಂಡ್ ಹಬ್ಬನ ಆಚರ್‍ಸಿವೆ.

**ಪ್ರಕೃತಿ :** ಮಲೆನಾಡ್ ಮೇರ್ ಜಿಲ್ಲೆತ ಹೇಳ್‌ವ ಕೊಡಗ್ ಬೆಟ್ಟ ಗುಡ್ಡಗಳ್‌ಂದ ಆವೃತ್ತವಾಗ್‌ಟ್ಟು. ಇಲ್ಲಿನ ಜನಕೆ ಇದೊಂದು ನಿಸರ್ಗ ನೀಡ್ದ ರಕ್ಷಾಕವಚತ ಹೇಳಕ್. ಇಲ್ಲಿನ ಅಪೂರ್ವ ವನರಾಶಿ ಜಿಲ್ಲೆನ ಚೆಲುವಿನ ಪೊರ್ನ್ನನ ಸಿರಿ ಆಗಿಸಿಟ್ಟು. ಮಳೆನೇ ವ್ಯವಸಾಯಕ್ಕೆ ನಂಬಿರ್‍ವ ರೈತರ್‍ಗೆ ವರುಣದೇವ ಎಂದೂ ಮೋಸ ಮಾಡ್ತ್‌ಲೆ.

ಕೊಡಗ್‌ನ ಸುತ್ತು ಬಳ್ಸಿ ರಸ್ತೆಲಿ ಪ್ರಯಾಣ ಮಾಡ್ದು ಒಂದು ಅಪೂರ್ವ ಅನುಭವ ಕೊಟ್ಟದೆ. ಗುಡ್ಡದ ಮೇಲೆ ಇರ್‍ವ ಮಡಿಕೇರಿಂದ ಪ್ರಯಾಣ ಹೊರಟವುಕೆ ಅದೊಂದು ಮರೆಯುಕ್ಕಾಗದ ಅನುಭವ ನೀಡ್ವೆ. ನಗರಂದ ಪೂರ್ವಕ್ಕೆ ಅಥವಾ ದಕ್ಷಿಣಕ್ಕೆ ಒಂದೆರಡ್ ಮೈಲ್ ದೂರ ಪ್ರಯಾಣ ಮಾಡಿರೆ ನಾವು ನಮ್ಗೆ ಗೊತ್ತೇ ಇಲ್ಲದಂಗೆ ಎಷ್ಟೋ ಅಡಿಗಳಷ್ಟ್ ಕೆಳಭಾಗಲಿ ಇದ್ದವೆ.

**ಜನಜೀವನ ಮತ್ತೆ ವ್ಯವಸಾಯ :** ಶ್ರಮ ಜೀವಿಗಳಾದ ಇಲ್ಲಿನ ಜನರ ಮುಖ್ಯ ಕಸುಬ್ ಬ್ಯಾಸಾಯ ಮತ್ತೆ ತೋಟಗಾರಿಕೆ. ಕಣ್ಣಿಗೆ ನಿಲುಕದಂಗೆ ವ್ಯೈಲುಗಟ್ಟಲೆ

ವಿಸ್ತೀರ್ಣಲಿ ಮೈತಳ್ದಿರುವ ಕಾಫಿ ಮತ್ತೆ ಭತ್ತದ ಗದ್ದೆಗ ಹೊರಗಿನವ್ರುಕೆ ಈ ಜಿಲ್ಲೆನ ಬಗ್ಗೆ ಅಭಿಮಾನ ಮೂಡಿಕೆ ಕಾರಣವಾಗುಟ್ಟು. ಅಂತಹ ವಿಶಾಲ ತೋಟಗಳ ಒಡೆಯರ ಮನಸ್ಸ್ ಸಹ ಅಷ್ಟೇ ವಿಶಾಲವಾಗುಟ್ಟು. ಕೊಡುಗೈ ದಾನಿಗಳಾದ ಇಲ್ಲಿನ ಜನ್ರ ಸಹಾಯ ಪಡೆಯದ ಸಂಘ ಸಂಸ್ಥೆಗ, ವಿದ್ಯಾ ಸಂಸ್ಥೆಗ ಇರ್ಕಿಲೆ. ಕೊಡಗ್‌ನ ತೋಟಗ ಸಾವಿರಾರ್ ಜನಕೆ ಉದ್ಯೋಗಾವಕಾಶ ನೀಡಿಟ್ಟು

ಕಾಫಿ ಭತ್ತದ ಒಟ್ಟಿಗೆ ಉತ್ತರ ಕೊಡಗ್‌ಲಿ ಮತ್ತೆ ದಕ್ಷಿಣ ಕೊಡಗ್‌ನ ಕೆಲವು ಕಡೆಲಿ ಯಾಲಕ್ಕಿನ ಬೆಳ್ಸಿವೆ. ಆದರೆ ಯಾಲಕ್ಕಿನ ಉತ್ಪತ್ತಿ, ಮತ್ತೆ ಜಿಲ್ಲೆ ಅಸ್ಥಿರತೆ, ಯಾಲಕ್ಕಿ ಬೆಳೆಗಾರರ್ಗೆ ನುಂಗಲಾಗದ ಬಿಸಿ ತುತ್ತಾಗುಟ್ಟು. ಆದ್ರುಂದ ಯಾಲಕ್ಕಿ ತೋಟಗಳ ಜಾಗಲಿ ಕಾಫಿ, ಭತ್ತದ ಜಾಗಲಿ ಶುಂಠಿ ಬ್ಯಾಸಾಯ ಆಕ್ರಮಿಸಿಕೊಂಡುಟ್ಟು. ಇದ್ರುಂದಾಗಿ ಕೊಡಗ್‌ಲಿ ಭತ್ತ ಬೆಳ್ಸುವವರ ಸಂಖ್ಯೆ ಸಾಕಸ್ಟ್ ಕಮ್ಮಿ ಆಗ್ತಾ ಉಟ್ಟು, ಕೊಡಗ್‌ಲಿ ಸುಮಾರ್ 23,000 ಕಾಫಿ ಬೆಳೆಗಾರರ್ ಇದ್ದ್ ಸುಮಾರ್ 2,03,375 ಎಕರೆ ವಿಸ್ತೀರ್ಣಲಿ ಕಾಫಿನ ಬ್ಯಾಸಾಯ ಮಾಡ್ತಾವಳೊ.

**ಜೇನು ಕೃಷಿ :** ನೆನೆಸಿ ಕಂಬಕ್ಕನೆ ಬಾಯಿಲಿ ನೀರ್ ಬರ್ಸುವ ಇನ್ನೊಂದು ಕೊಡಗ್‌ನ ಉತ್ಪಾದನೆ ತೇಳ್ರೆ ಅದ್ ಜೇನ್. ಅತೀ ಹೆಚ್ಚ್‌ನ ಪ್ರಮಾಣಲಿ ಅಥವಾ ಚುರ‍್ಕಾಗಿ ಕೆಲ್ಸ ಮಾಡ್‌ವವರ್ನ ಜೇನ್ ಹುಳಕ್ಕೆ ಹೋಲ್‌ಸಿವೆ. ಜೇನ್ ಬಾಯಿಗೆ ಎಸ್ಟ್ ರುಚಿ ಕೊಟ್ಟದೆಯೊ ನಮ್ಮ ಸರೀರಕ್ಕೆ ಅಷ್ಟೇ ಒಳ್ಳೆ ಔಸಧ ಆಗುಟ್ಟು. ಇದ್ ರೋಗನಿರೋಧಕ ಗುಣನ ಹೊಂದಿಟ್ಟು. ಹಿಂದ್‌ನಿಂದಲೂ ಅಳಲೆಕಾಯಿ ಪಂಡಿತಂದ ಹಿಡ್ದ್ ಈಗ್‌ನ ಶಾಸ್ತ್ರೀಯ ಆಯುರ್ವೇದಿಕ್ ಔಸಧಗಳ್ಲಿ ಜೇನ್‌ನ ಬಳಕೆನ ಕಾಣಕ್. ಶೀತ, ಕೆಮ್ಮು, ನೆಗಡಿಗಳ್ಗೆ ಇದ್ ಸಿದ್ದೌಷದವಾಗುಟ್ಟುತೇಳಕ್. ಕೊಡಗ್‌ನ ಜೇನಿಗೆ ಹೊರದೇಸಲಿ ಭಾರಿ ಬೇಡಿಕೆ ಉಟ್ಟ್. ಜೇನ್ ಹುಳದ ಮುಳ್ಳ್‌ನ ವಿಷಂದ ಚುಚ್ಚುಮದ್ದ್ ಮತ್ತೆ ಗುಳಿಗೆಗಳ್ನ ತಯಾರ್ ಮಾಡ್ವೆ. ಇದ್ ಸಂಧಿವಾತ. ಪಾರ್ಶ್ವವಾಯು ಮಲೇರಿಯಾ, ಶೀತ, ಜ್ವರ ಮೊದಲಾದ ಕಾಯಿಲೆಗಳ್ಗೆ ಪರಿಣಾಮಕಾರೀತ ತೀಳ್ದ್ ಬಂದುಟ್ಟು. ಕೊಡಗ್‌ಲಿ ಇತ್ತೀಚೆಗೆ ಜೇನ್ ಕೃಷಿ ಬಹಳ ಕಮ್ಮಿ ಆಗಿಟ್ಟು. ಇದರ ಅಭಿವೃದ್ಧಿ ಪಡ್ಸಿಕೆತ ಹೇಳಿ ಈಗ ಜೇನ್ ಉತ್ಸವ ಸಮ್ಮೇಳನಗ ನಡಿತಾ ಉಟ್ಟು.

ಕೊಡಗ್‌ನ ಬ್ಯಾಸಾಯಗಾರರ್ ಕೆಲವೊಮ್ಮೆ ತತ್ತರಿಸಿ ಹೋಗ್ವಂತ ಸಂದರ್ಭ ಇಲ್ಲದಿಲ್ಲೆ. ಒಮ್ಮೊಮ್ಮೆ ಅತಿವೃಷ್ಟಿಂದ ಭತ್ತದ ಗದ್ದೆಗಳ್‌ಲಿ ನಷ್ಟ. ಹಂಗೇ ಕಾಫಿ, ಏಲಕ್ಕಿ ಫಸಲ್ ಕಮ್ಮಿಯಾಗಿ, ಆಕಾಸಕ್ಕೆ ಏರ್‌ತಿರ್ವ ಗೊಬ್ಬರ ಮತ್ತೆ ಇತರ ಅಗತ್ಯ ವಸ್ತುಗಳ ಬೆಲೆಂದಾಗಿ ಉತ್ಪತ್ತಿಗಿಂತ ಖರ್ಚ್ ಹೆಚ್ಚಾಗಿ ಬೆಳೆಗಾರರ್‌ರ ಅಂತಸ್ಥೈರ್ಯಕ್ಕೆ ಸವಲಾದು ಸಹಜವಾಗುಟ್ಟು. ಮುಕ್ತ ಮಾರುಕಟ್ಟೆಲಿ ಕಾಫಿ ಮಾರಾಟ ವ್ಯವಸ್ಥೆ ಜಾರಿಗೆ ಬಂದ ಮ್ಯಾಲೆ ಅಂತೂ ಕಾಫಿಯ ಬೆಲೆಲಿ ಸ್ಥಿರತೆ ಇಲ್ಲದೆ ದಿನಾ ಕಾಫಿ ರೇಟ್ ಹೆಚ್ಚ್ ಕಮ್ಮಿ ಆಗ್ತಾ ಇರ್ದು ಸಾಮಾನ್ಯ ಆಗುಟ್ಟು. ಇದರ್‌ಂದ ಎಲ್ಲವ್ಕು ಒಂದೇತರ ಬೆಲೆ ಸಿಕ್ತಾ ಇಲ್ಲೆ.

**ಸಾಹಸ :** "ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು ಕವನ ತಿರುಕಲ್ಲಾಟ ಹಗ್ಗಕೆ ಸೆಳೆದರೊ ಹೆಬ್ಬಾವನು" ಅಂತ ಹೇಳಿ ಕವಿ ಪಂಜೆ ಮಂಗೇಶರಾಯರ್ ವರ್ಣಿಸಿದಂಗೆ ಕೊಡಗ್‌ನ ಜನ ಕಡುಗಲಿಗ. ಅಷ್ಟೇ ನಿಷ್ಠಾವಂತರ್ ಸಹ. ಪ್ರಾಣಕ್ಕೆ ಪ್ರಾಣ ನೀಡ್ವ್ ತ್ಯಾಗಿಗ ಹೌದು. ನಮ್ಮ ಗುಡ್ಡೆಮನೆ ಅಪ್ಪಯ್ಯ ಗೌಡರ್, ನಿಡ್ಯಮಲೆ ಮುದ್ದಪ್ಪ ಜಡ್ಜ್, ಇವೆಲ್ಲಾ ಜನಾಂಗದ ಕೀರ್ತಿನ ಹೆಚ್ಚ್‌ಸಿ ಅಮರವಾದವು. ಅಲ್ಲದೆ ಇಲ್ಲಿನವ್ರುಕೆ ಶೌರ್ಯ ತೇಳ್ದು ರಕ್ತಲಿ ಹರ್ದ್ ಬಂದಕ್ಕೆ ತಲೆಮಾರ್‌ಗಳ ಹಿಂದೆಂದ್ ರಾಜ ಮಹಾರಾಜರುಗಳ ಕಾಲಲೂ ತಮ್ಮ ನಿಷ್ಠೆ ಶೌರ್ಯ ಸಾಹಸಗಳ್‌ಂದ ತಮ್ಮ ಒಡೆಯರ ಮನ ಮೆಚ್ಚಿಸಿ ಜಮ್ಮ ಜಹಗೀರ್‌ಗಳ್ನ ಪಡ್‌ಕೊಂಡಿರ್ದು ಸಾಕ್ಷಿಯಾಗುಟ್ಟು. ನಮ್ಮ ಹಿರಿಯರ್ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟಲಿ ಕೊಡಗ್‌ನ ಕೀರ್ತಿ ಪತಾಕೆನ ಹಾರ್‍ಸೊಳೊ.

**ಕ್ರೀಡೆ :** ಕ್ರೀಡೆಗಳ್‌ಲಿ ಕೊಡಗ್ ತನ್ನದೇ ಆದ ವೈಶಿಷ್ಟ್ಯ ಪಡ್ದುಟ್ಟು. ಅವ್ರುಗಳ್ಲಿ ಕೊಡಗ್‌ಲಿ ಮಾತ್ರ ಕಂಡ್

ಬಲ್ವ ಕೆಸರ್‌ಗದ್ದೆ ಓಟ ಹೆಚ್ಚ್ ಪ್ರಾಮುಖ್ಯತೆ ಪಡ್ಡುಟ್ಟು. ಈ ಜಿಲ್ಲೆ ಹೊರಾಂಗಣ ಮತ್ತೆ ಒಳಾಂಗಣ ಆಟಗಳ್‌ಲಿ ಸಹ ಖ್ಯಾತಿನ ಪಡ್‌ದುಟ್ಟು. ಹಾಕಿ ಕ್ಷೇತ್ರಲಿ ಅಂತರರಾಷ್ಟ್ರೀಯ ಮಟ್ಟಲಿ ಕೊಡಗ್‌ನ ಸಾಕಸ್ಟ್ ಆಟಗಾರರ್ ಭಾರತನ ಪ್ರತಿನಿಧಿಸೊಳೊ. ಇವರ್‍ಲಿ ಅರ್ಜುನ್ ಹಾಲಪ್ಪ, ಹರಿಪ್ರಸಾದ್, ಕಾಳೇರಮ್ಮನ ರಾಯ್ ಮೊದಲಾದವು ಪ್ರಮುಖರಾಗೊಳೊ. ಹಂಗೆನೆ ಕ್ರೀಡೆಲಿ ಎಡಿಕೇರಿ ವಿಶಾಲಾಕ್ಷಿ, ಪಾಂಡನ ಶೈಲಜಾ ಮೊಣ್ಣಪ್ಪ ಇವು ರಾಷ್ಟ್ರ ಮಟ್ಟಲಿ ಸಾಧನೆ ಮಾಡಿ ಪ್ರಶಸ್ತಿ ಪಡ್ದೊಳೊ.

**ಕಲೆ :** ಸಿನಿಮ ನಾಟಕ ರಂಗಗಳ್ಲೂ ಕೊಡಗ್‌ನ ಜನ ಹಿಂದೆ ಬೀತ್‌ಲೆ. ಜೈಜಗದೀಶ್ ಮುಂತಾದವು ಸಿನಿಮಾಗಳ್ಲಿ ನಟಿಸ್ತಾವೊಳೊ. ಹಂಗೆನೆ ಸಾಹಿತ್ಯ ಸಮಾಜ ಸೇವೆ, ಶಿಕ್ಷಣ ಮುಂತಾದ ಕ್ಷೇತ್ರಗಳ್ಲಿ ಸಾಧನೆ ಮಾಡಿ ಬೈತಡ್ಕ ಜಾನಕಿ ಬೆಳ್ಯಪ್ಪ, ಕೂಡಕಂಡಿ ಕಾವೇರಮ್ಮ ಸೋಮಣ್ಣ, ತೆಕ್ಕಡೆ ಗೂಲಾಬಿ ಜನಾರ್ಧನ ಮುಂತಾದವು ಕಿತ್ತೂರು ಚೆನ್ನಮ್ಮ, ರಾಜ್ಯೋತ್ಸವ ಮತ್ತಿತರ ಪ್ರಶಸ್ತಿನ ಪಡ್ದ್ ಕೊಂಡಿದ್ದ್ ಮಹಿಳೆಯರ್ ನಾವು ಯಾರಿಗೂ ಕಮ್ಮಿ ಇಲ್ಲೆತ ತೋರ್‍ಸೊಳೊ.

**ರಾಜಕೀಯ :** ಕೊಡಗ್ ಜಿಲ್ಲೆ ರಾಜಕೀಯ ಕ್ಷೇತ್ರಲೂ ಮುಂಚೂಣಿಲಿ ಉಟ್ಟು. ಹಲವಾರು ಸಚಿವರ್, ಶಾಸಕರ್‍ನ ರಾಜಕೀಯಕ್ಕೆ ನೀಡಿದ್ದ್, ಜೀವಿಜಯ ದಂಬೆಕೋಡಿ ಚಿಣ್ಣಪ್ಪ, ದಂಬೆಕೋಡಿ ಮಾದಪ್ಪ ಮುಂತಾದವು ಅಲ್ಲದೆ ಇದೀಗ ನಮ್ಮ ಜಿಲ್ಲೆಯ ಹೆಮ್ಮೆಯ ಪುತ್ರ ಶ್ರೀ ಕೊಂಬಾರನ ಬೋಪಯ್ಯನವು, ಮಡಿಕೇರಿ ತಾಲೂಕು ಶಾಸಕರಾಗಿ ಆ ನಂತರ ವಿರಾಜಪೇಟೆ ಶಾಸಕರಾಗಿ ಮತ್ತೆ ಕರ್ನಾಟಕ ರಾಜ್ಯ ವಿಧಾನ ಸಭಾಧ್ಯಕ್ಷರಾಗಿರ್‍ದು ಬಹುಶಃ ಕೊಡಗ್‌ಗೆ ಈ ಪದವಿ ಇದೇ ಮೊದಲ್‌ತ ಹೇಳಕ್. ಇವರಂದಾಗಿ ನಮ್ಮ ಕೀರ್ತಿ ಖಂಡಿತ ಹೆಚ್ಚಾಗುಟ್ಟು. ಇವುಕೆ ಇನ್ನಷ್ಟು ದೊಡ್ಡ ಹುದ್ದೆಗ ಸಿಕ್ಕಲಿಂತ ಹಾರೈಸೊನ.

ನಮ್ಮ ಕೊಡಗ್‌ನ ಬಗ್ಗೆ ಹೇಳಿಕೆ ಇನ್ನು ಬಹಳಷ್ಟು ಉಟ್ಟು. ಕೊಡಗ್‌ನ ಅಳಿಯ ಮಾಜಿ ಮುಖ್ಯಮಂತ್ರಿ ಶ್ರೀ ಸದಾನಂದ ಗೌಡ ಇವರ್‌ಂದ ಕೊಡಗ್‌ಗೆ ಬಹಳ ಉತ್ತಮ ಕೆಲ್ಸ ಆಗುಟ್ಟು. ಗುಡ್ಡೆಮನೆ ಅಪ್ಪಯ್ಯ ಗೌಡರ ಪ್ರತಿಮೆ ಸ್ಥಾಪನೆ, ಅರೆಭಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ ಸ್ಥಾಪನೆ, ಇವೆಲ್ಲಾ ಇವು ಮುಖ್ಯಮಂತ್ರಿ ಆಗಿ ಇರ್‍ಕನ ಆದ ಮಹತ್ತರ ಕೆಲ್ಸಗ.

ಕಾವೇರಿ ಮಾತೆ, ಇಗ್ಗುತ್ತಪ್ಪ ಮತ್ತೆ ಕುಲಗುರು ಶ್ರೀ ವೆಂಕಟರಮಣನ ದಯೆಯಿಂದ ನಮ್ಮ ಕೊಡಗ್‌ನ ಸಂಸ್ಕೃತಿ ಕೀರ್ತಿ ಇನ್ನು ಹೆಚ್ಚಾಗಲಿತ ಹಾರೈಸೊನ.

## ಚಾಂಪನ ಬಜನೆ

ಕತ್ತಲೆ ಹೊತ್ತಿಗೆ ನಮ್ಮ ಚಾಂಪನ
ಬಜನೆ ಪೊರ್‍ಲ್ನನ ಕೆಮಿ ಕೊಟ್ಟು ಕೇಳಿ
ದೀಪದ ಮ್ಯಾಲೆ ವಿಭೂತಿ ಬರೆ ಎಳ್‌ದ್
ಕಣ್ಣ್‌ನ ಮುಚ್ಚಿ ಕಾಲ್‌ನ ಮಡ್‌ಚಿ
ರಾಗಕ್ಕೆ ಸರಿ ಆಗಿ ತಾಳ ಹಾಕಂಡ್
ಕಾಯಿನ ಒಡ್‌ದ್ ಬಾಳೆಲೆಲಿಟ್ಟ್
ಹಣ್ಣ್‌ನ ಚೊಲ್ಲಿ ಒಟ್ಟಿಗೆ ಇಟ್ಟ್
ಚಾಂಪನ ಬಜನೆ ಸುರ್ ಆಗ್‌ತಿತ್.
ಸುತ್ತ ಕುದ್ದ ಪಿಳ್ಳಿಕ ಗಿಳ್ಳಿಕ
ಒಬ್ಬನ ಒಬ್ಬ ಅಂಡ್‌ಸಿ ಅಂಡ್‌ಸಿ
ಕಿಸಿಕಿಸಿ, ಪಿಸಿಪಿಸಿ ಮಾಡ್‌ತ ಇದ್ದೊ
ಒಳಗೆ ಚಾಮೆವ್ವನ ಒಗ್ಗರಣೆ ಸದ್ದ್‌ಗೆ
ಚಾಂಪನ ಸದ್ದ್ ಸಿತ್ತೇ ಹೋತ್
ಚಾಮೆವ್ವನ ಕರ್‌ದ್ ಕೆಮಿ ಹತ್ತ ಕೇಳ್ದೆ
'ಯೇ ಗಂಗಾ, ಕುಜ್ಜೆ ಗೈಪು ಆತಾ ?
ಚಾಮೆವ್ವ ಜವಾಬು ಹೇಳಿಕೆ ಮುಂದೆ
ಭಜನೆಗೆ ಮಂಗಳ ಹಾಡ್ಯಾತ್.
ಅಡಿಗೆ ಮನೆಗೆ ನೆಟ್ಟನೆ ನುಗ್ಯಾತ್
ಮಣೆ ಮ್ಯಾಲೆ ಕುದ್ದೇ ಮುಕ್ಕಾಲ್ ಎಳ್ದ
ಮುಕ್ಕಾಲ್ ತಲೆಗೆ ಅಡ್ಡಕೆ ಉದ್ದಕೆ
ತರಕಿಟ, ತರಕಿಟ ತಟ್ಟ್‌ತ ಇದ್ದೊ.

- ಕುಲ್ಲಚನ ಕಾರ್ಯಪ್ಪ, ಕುಂಬಳದಾಳ್ ಗ್ರಾಮ

# ಅರೆಬಾಸೆ ಅಕಾಡೆಮಿ ಸಂಸ್ಕೃತಿ

✍ ಕುಯ್ಯಮುಡಿ ಜಿ. ಅಶ್ವನಿಕುಮಾರ್
ಹಿರಿಯ ಉಪನ್ಯಾಸಕ
ವಿಜಯಲಕ್ಷ್ಮಿ ಪ.ಪೂ. ಕಾಲೇಜು
ಬಾಳೆಲೆ, ಕೊಡಗು - 571 219
ಮೊ. : 9449790238, 9535533429

ಭಾರತ ಒಂದ್ ಬಹು ಸಂಸ್ಕೃತಿನ ಹೊಂದಿದ ರಾಷ್ಟ್ರ. ಈ ರಾಷ್ಟ್ರಲಿ ಇರುವ ಪ್ರತಿಯೊಬ್ಬಂಗೆ, ಪ್ರತಿಯೊಂದು ಜನಾಂಗಕೆನು ತನ್ನ ಸಂಸ್ಕೃತಿನ ಉಳ್ಸಿ, ಬೆಳ್ಸಿಕೊಂಡ್ ಹೋಕೆ ನಂಮ ಸಂವಿದಾನ ಅವಕಾಸ ಮಾಡಿಕೊಟ್ಟುಟು. ಹಂಗಾಗಿ ಇಂದ್ ಬಾಸೆ ಅಲ್ಪಸಂಖ್ಯಾತರ ಧಾರ್ಮಿಕ ಅಲ್ಪಸಂಖ್ಯಾತರ್ ತಮ್ಮ ಸಂಸ್ಕೃತಿನ ಬೆಳ್ಸಿಕೊಂಡ್ ಹೋಕೆ ರಾಜ್ಯಸರಕಾರಗ ಬಾಸೆ ಅಕಾಡೆಮಿಗಳ್‌ನ ಸ್ಥಾಪಿಸಿ ಅನುದಾನ ನೀಡಿ ಪ್ರೋತ್ಸಾಹ ಕೊಡ್‌ತುಟ್ಟು. ಇಂತ ಸಂದರ್ಭಲಿ ಕೊಡಗ್ ದಕ್ಷಿಣ ಕನ್ನಡ ಮತ್ತೆ ಕಾಸರಗೋಡು ಜಿಲ್ಲೆಗಳ್‌ಲಿ ನೆಲೆ ಊರ್‍ದ ಅರೆಬಾಸೆನ ಮಾತಾಡುವ ಗೌಡ ಜನಾಂಗ ಅರೆಬಾಸೆ ಮತ್ತೆ ಗೌಡ ಸಂಸ್ಕೃತಿನ ಉಳಿಸಿ ಬೆಳ್‌ಸಿಕೆ ಅರೆಬಾಸೆ ಅಕಾಡೆಮಿನ ಸ್ಥಾಪಿಸಿಕೆ ತನ್ನ ಬೇಡಿಕೆನ ಅಂದ್‌ನ ಮುಖ್ಯಮಂತ್ರಿ ವೀರಪ್ಪ ಮೊಯಿಲಿಗೆ ಇಟ್ಟೊ. ಆದರೆ ಅವರ ಕೇವಲ ತುಳು, ಕೊಂಕಣಿ ಮತ್ತೆ ಕೊಡವ ಅಕಾಡೆಮಿಗಳ್‌ನ ಸ್ಥಾಪನೆ ಮಾಡ್ಡೊ. ಇದರ್‌ಂದ ನೊಂದ ಜನಾಂಗದವು ತುಂತಜೆ ವೆಂಕಟೇಶ್ (ಗಣೇಶ) ಅವು ಅಧ್ಯಕ್ಷತೆಲಿ ಗೌಡ ಸಾಂಸ್ಕೃತಿಕ ಅಕಾಡೆಮಿನ ಸ್ಥಾಪಿಸಿ, ಸರಕಾರೇತರ ಬಾಸೆ ಮತ್ತೆ ಸಂಸ್ಕೃತಿನ ಬೆಳ್ಸ್‌ವ ಪ್ರಯತ್ನ ಸ್ವಲ್ಪಮಟ್ಟಿಗೆ ಆಗ್‌ತ್ತಾ ಇತ್ತ್.

ಹಿಂಗೆ ಇರ್‌ಕನ, ಜನಾಂಗ ಅದೃಷ್ಟಂದ, ಜನಾಂಗಕ್ಕೆ ಸೇರಿದ ಕೊಂಬಾರನ ಬೋಪಯ್ಯನವು ಕರ್ನಾಟಕದ ವಿಧಾನಸಭೆಯ ಅಧ್ಯಕ್ಷರ್ ಆದೊ. ಹಂಗೆನೆ ಮುಂದೆ, ನಮ್ಮವೆ ಆದ ದೇವರಗೊಂಡ ಸದಾನಂದಗೌಡರು ಮುಖ್ಯಮಂತ್ರಿಯಾದೊ. ಇವರಿಬ್ಬರ ಪ್ರಯತ್ನಂದ 2012ರ ಮೇ ತಿಂಗಳ 29ನೆ ತಾರೀಕಿಗೆ ಅರೆಬಾಸೆ ಅಕಾಡೆಮಿ ಅಸ್ತಿತ್ವಕ್ಕೆ ಬಾತ್. ಬಾಸೆ ಮತ್ತೆ ಸಂಸ್ಕೃತಿನ ಬೆಳ್‌ಸಿಕೋಸ್ಕರ ಸ್ಥಾಪನೆ ಆಗ್‌ವ ಸರಕಾರದ ಸಂಸ್ಥೆಯಾದ ಅಕಾಡೆಮಿನ ಜವಾಬ್ದಾರಿ ಬಹಳ ದೊಡ್ಡದ್. ಅದ್‌ರ್‌ಲಿ ಅರೆಬಾಸೆ ಮತ್ತೆ ಕೊಡವ ಅಕಾಡೆಮಿಗಳ ಜವಾಬ್ದಾರಿ ಹೆಚ್ಚ್. ಏಕೆಂದರೆ ಇವರೆಡ್ ಅಕಾಡೆಮಿಗ ಒಂದೊಂದು ಜನಾಂಗಕ್ಕೆ ಸೇರ್‍ದುವ್. ಹಂಗಾಗಿ ಯಿ ಅಕಾಡೆಮಿಗ ಆಯಾ ಜನಾಂಗಗಳ ಭಾಷೆ, ಸಂಸ್ಕೃತಿ, ಜಾನಪದ ಉಡುಗೆ, ತೊಡುಗೆ ಕ್ರೀಡೆ ಮುಂತಾದವುಗಳನ್ನ ಉಳ್ಸಿ ಬೆಳ್ಸಿಕೆ ಹರಸಹಸನೆ ಮಾಡಿಕೆ ಆದೆ. ಕಾರಣ ಇಂದ್ ಅರೆಬಾಸೆನ ಮಾತಾಡ್ವ ಜನ್‌ರ ಸಂಖ್ಯೆ ಕಮ್ಮಿ ಆಗುತ್ತಾ ಉಟ್ಟು.

ಕೆಲವಂತ್ ಸಭೆ ಸಮಾರಂಭಗಳಲಿ ತಮ್ಮ ಜನಾಂಗದವರ ಜೊತೆಗೆ ತಮ್ಮ ಬಾಸೆನ ಮಾತಾಡಿಕೆ ಹಿಂಜರಿಕೆ ಮಾಡಿಕೊಂಡ್ ಕನ್ನಡನೆ ಬಳಕೆ ಮಾಡಿಕೊಂಡವೆ. ಹಿಂಗಾಗಿ ಕ್ರಮೇಣ ವಿಶ್ವಲಿ ಅದ್‌ರಲ್ಲೂ ಭಾರತಲಿ ಅಸ್ತಿತ್ವ ಕಳೆದುಕೊಂಡ ಹಲವ್ ಬಾಸೆಗಳ ಜೊತೆಗೆ ಅರೆಬಾಸೆ ಸೇರಿದರೆ ಅಚ್ಚರಿ ಏನ್ ಇಲ್ಲೆ.

ಇಂತಹ ಸಂದರ್ಭಲಿ ಅಕಾಡಮಿ ನಮ್ಮ ಬಾಸೆ ಮತ್ತು ಸಂಸ್ಕೃತಿನ ಬೆಳ್ಸಿಕೆ ಬೇಕಾದ ಪೂರಕ ಆಗ್‌ವ ಕಾರ್ಯಕ್ರಮಗಳನ್ನು ಹಮ್ಮಿಕೊಂಬರಲಿ. ಮುಖ್ಯವಾಗಿ ಅರೆಬಾಸೆ ಸಾಹಿತ್ಯಕ್ಕೆ ಒತ್ತ್ ಕೊಡುವ ಕತೆ, ಕವನಗಳ ರಚನೆ. ಪೈಪೋಟಿ, ಚರ್ಚೆ, ಬಾಸಣ, ಪೈಪೋಟಿಗಳನ್ನ ನಡ್‌ಸಕು. ಹಂಗೆ ಅಕಾಡಮಿ, ಅರೆಬಾಸೆಲಿ ಬರೆವ ಲೇಖಕರ ಕತೆ, ಕವನ, ಕಾದಂಬರಿಗಳ ಲೇಖನಗಳನ್ನ ಪ್ರಕಟಿಸಿ, ಪ್ರಚಾರ ಮಾಡಿ ಪ್ರೋತ್ಸಾಹ ಕೊಡಕು. ಹಂಗೆನೇ ನಮ್ಮ ಸಂಸ್ಕೃತಿನ ಬೆಳ್ಸಿಕೆ ಅಕಾಡೆಮಿ ಸದಸ್ಯರ್‌ಗೆ ಅಕಾಡಮಿ ಕಡೆಂದ ಅವರವರ ಕಾರ್ಯವ್ಯಾಪ್ತಿಗ ಬರ್‌ವ ಸ್ಥಳಗಳಲಿ

ಗೌಡಜನಾಂಗದ ಹಬ್ಬ ಹರಿದಿನಗಳ ಸಾಮೂಹಿಕವಾಗಿ ಆಚರಿಸಿಕೆ ಒತ್ತ್ ಕೊಡಕು. ಮತ್ತೆ ನಮ್ಮ ಜಾನಪದ ಕಲೆಗಳನ ಆಚರಣೆಗಳನ ಪ್ರದರ್ಶನ ಮಾಡುದರ ಜೊತೆಗೆ ಇವುಕೆ ಸಂಬಂದಿಸಿದ ವಿವಿಧ ಪೈಪೋಟಿಗಳನ ಏರ್ಪಡಿಸಕು.

ಅರೆಬಾಸೆ ಮತ್ತೆ ಜನಾಂಗದ ಸಂಸ್ಕೃತಿನ ಬೆಳ್ಸುದು ಕೇವಲ ಅಕಾಡಮಿ ಕೆಲಸ ಮಾತ್ರ ಅಲ್ಲ. ಇದನ್ನ ಬೆಳ್‌ಸುದು ಜನಾಂಗದ ಪ್ರತಿಯೊಬ್ಬನ ಕೆಲಸ. ಹಂಗೆ ಇದ್‌ಕ್ಕಾಗಿ ಜನಾಂಗದವು ಅಕಾಡೆಮಿ ಜೊತೆಗೆ ಕೈಜೋಡಿಸಿಕೆ ಆದೆ. ಜನಾಂಗದ ಪ್ರತಿಯೊಬ್ಬ ಪೋಷಕ ತಮ್ಮ ಮಕ್ಕಳಿಗೆ ಅರೆಬಾಸೆನ ಕಲಿಸುವ ಕೆಲಸ ಮಾಡೊಕು. ಇಂದ್ ಹೆಚ್ಚಿನ ಅಪ್ಪ ಅಮ್ಮಂಗ ಅವರವರ ಮಕ್ಕಳ ಜೊತೆಗೆ ಕನ್ನಡ ಇಲ್ಲೆ ಇಂಗ್ಲೀಷ್‌ಲಿ ಮಾತಾಡುವ ಪ್ಯಾಸನ್ ಮಾಡಿಕೊಂಡಳೊ. ಇಂತ ಮನೋಭಾವನೆನ ಬುಟ್ಟ್ ತಮ್ಮ ಮಕ್ಕಳಿಗೆ ಅರೆಬಾಸೆನ ಕಲ್‌ಸಿ ಅವರ ಜೊತೆಗೆ ಅರೆಬಾಸೆಲೆ ವ್ಯವಹರಿಸಿರೆ, ಅದ್ ನಾವು ಬಾಸೆಗೆ ಮಾಡುವ ದೊಡ್ಡ ಸೇವೆ ಆದೆ. ಹಂಗೆನೆ ನಂಮ ಯುವಕರ್ ಅದ್‌ರ್‌ಲಿ ನಗರ ಪ್ರದೇಶಲಿ ವಿದ್ಯಾಭ್ಯಾಸಕ್ಕಾಗಲಿ, ಉದ್ಯೋಗಕ್ಕಾಗಿ ನೆಲೆನಿಂತವು ರಜದಿನಲಿ ಒಂದ್ ಕಡೆ ಸೇರಿ ಪರಸ್ಪರ ಬೆರ್‌ತ್ ಬಾಸೆನ ಬೆಳೆಸಿಕೆ ಪ್ರಯತ್ನಪಡೊಕು. ಮತ್ತೆ ನಂಮ ಬಾಸೆ ಬಗ್ಗೆ ಮುಖ್ಯವಾಗಿ ಅಬಿಮಾನ ಬೆಳೆಸಿಕೊಂಬಕು. ಇದ್‌ಕೆ ಅಕಾಡಮಿ ಮತ್ತೆ ನಂಮ ಸಮಾಜಗ ವೇದಿಕೆ ಒದಗಿಸಿಕೊಡಕು.

ಇಂದ್ ನಂಮವರ್‌ಲಿ ಹೆಚ್ಚಿನ ಜನ ಸಂಸ್ಕೃತಿನ ಮರ್ತ್ ಇತರರ ಸಂಸ್ಕೃತಿನ ಅನುಸರಿಸಿಕೆ ಸುರ್ ಮಾಡ್ಯೊಳೊ. ಹಾಂಗಾಗಿ ಕೊಡವ ಸಾಹಿತಿ ಡಾ. ಐ.ಮಾ. ಮುತ್ತಣ್ಣ ಒಂದುಕಡೆ, ಕೊಡಗು ಗೌಡರು ಕೊಡವರನ್ನು ಚಾಚುತಪ್ಪದೆ ಅನುಸರಿಸುವವರು ಎಂಬುದಾಗಿ ಹೇಳಿಕೊಂಡಳೊ. ಇದ್ ಅಕ್ಷರಸ ಸತ್ಯ ಕೂಡ. ಕಾರಣ ನಾವ್ ಇಂದು ನಂಮ ಸಂಸ್ಕೃತಿ ಕಾರ್ಯಕ್ರಮಗ ಹುಟ್ಟು, ಸಾವು, ಬೊಜ್ಜ, ಮದುವೆ ಮುಂತಾದ ಕಾರ್ಯಗಳಲಿ ನಮ್ಮ ಉಡುಗೆ, ತೊಡುಗೆ, ಆಹಾರ ಪದ್ಧತಿ ಮುಂತಾದವುಗಳ ಕೊಡವ ಸಂಸ್ಕೃತಿ ಹಂಗೆ ಅನುಸರಿಸುತೊಳೊ. ಆದರೆ ಇದ್‌ನ ಕೊಡಗು ಬಿಟ್ಟು ದಕ್ಷಿಣ ಕನ್ನಡ, ಕಾಸರಗೋಡಿನ ಗೌಡ ಜನಾಂಗದವು ಅನ್‌ಸರಿಸ್‌ತ್ತಿಲ್ಲೆ. ಹಿಂಗಿರ್‌ಕನ ನಾವು ನಮ್ಮ ಮೂಲ ಸಂಸ್ಕೃತಿ ಕಡೆಗೆ ಗಮನ ಹರಿಸಿ "ಬೇರೆ ಸಂಸ್ಕೃತಿನ ಪ್ರೀತಿಸು ಆದರೆ ನಿನ್ನ ಸಂಸ್ಕೃತಿಲಿ ಬದುಕು" ಎಂದ್ ಹೇಳುವಂಗೆ ನಾವ್ ನಮ್ಮ ನೆರೆಕರೆಯವರ ಸಂಸ್ಕೃತಿನ ಪ್ರೀತಿಸುದರ ಜೊತೆಗೆ ನಂಮ ಸಂಸ್ಕೃತಿ ಬದ್‌ಕಿಕೆ ಪ್ರಯತ್ನ ಮಾಡೋನ.

## ವೀರ ಗೌಡರ್



ಗಂಡ್ ಮೆಟ್ಟಿದ ನಾಡ್..
ಇಲ್ಲೇ ಹುಟ್ಟಿದ ಗೌಡರ್ ನಾವು..
ವೀರ_ಶೂರರ್...
ಜಗತ್ತಿಗೆ ಸಾರಿ ಹೇಳ್ದ ಗೌಡರ್.. ||
ಬ್ರಿಟೀಷರ ದಾಸ್ಯಲಿತ್ತ್ ಕೊಡಗ್..
ಸ್ವಾತಂತ್ರ್ಯಕ್ಕಾಗಿ ಹೋರಾಟ-ಹೊಡೆದಾಟ..
ಗೌಡ ಕಟ್ಟಿತ್ ಸೈನ್ಯ
ಹೊಡ್ದಾಕಿತ್ ಬಿಳಿ ಮನ್ಸರನ್ನ.. ||
ಕುತಂತ್ರ ಮಾಡ್ದೊ ಯಾರ್‍ಯಾರೊ..
ಮೋಸಕ್ಕೆ ಬಲಿಯಾದೊ ನಮ್ಮವ್
ಗುಲಾಮಗಿರಿ ಒಪ್ಪಿತ್ಲೆ ಯಾರೂ..
ಸೆರೆಯಾದೊ ಕತ್ತಲೆ ಕೋಣೆಲಿ... ||

ಕೊದಿತಿತ್ತ್ ಗೌಡನ ನೆತ್ತರ್...
ಕಾರ್‌ದ ಕಿಡಿಗೆ ಹೆದ್ರಿಬುಟ್ಟೊ ಬೆಳಿಯರ್
ತೂಂಗಿ ಹಾಕಿದೊ ಗೌಡನ ಎಲ್ಲರೆದ್‌ರ್...
ಹಾರಿ ಹೋತು ಗೌಡನ ಉಸ್‌ರ್.. ||
ಹುತಾತ್ಮರಾದೊ ವೀರ ಅಪ್ಪಯ್ಯಗೌಡರ್
ಯಿಗಲೂ ನಾವ್ ವೀರ ಗೌಡರ್..
ಅಪ್ಪಯ್ಯ ಗೌಡರೇ ನಮ್ಮ ಉಸ್‌ರ್
ಅವೆ ನಮ್ಮ ಸುರುನ ನಾಯಕರ್ ||

*ಕುದೆಕಲ್ ಸಂತೋಷ್*

# ಕೈಲ್‌ಮುಹೂರ್ತ ಹಬ್ಬ

**ಕೈಲ್‌ಮುಹೂರ್ತ** ಹಬ್ಬ ಕೊಡಗ್‌ನ ರೈತ ಸಂಪ್ರದಾಯದ ಹಬ್ಬ ಆಗುಟ್ಟು. ಕೊಡಗ್ ಸುಮಾರ್ 250 (ಇನ್ನೂರೈವತ್ತು) ವರ್ಷಗಳ ಹಿಂದೆ ದಟ್ಟ ಅರಣ್ಯ ಪ್ರದೇಶ ಆಗಿತ್ತ್. ಆಗ ಇಲ್ಲಿ ದಾಳಿ ನಡ್ಸಿದ ಹೈದರಾಲಿ, ಟಿಪ್ಪು ಇವರ ಸೈನಿಕರ್ ಅವು ಮಳೆ ಚಳಿ ಮತ್ತೆ ಕಾಡ್ ಪ್ರಾಣಿಗಳ ಭಯದ ಭೀಕರ ಅನುಭವಗಳ್‌ನ ಚರಿತ್ರೆ ಹೇಳ್ದೆ. ಆಗ ಕಾಡ್ ಪ್ರಾಣಿಗಳ ಹಾವಳಿ ಬಾರಿಯಿತ್ತ್‌ಗಡ. ಹಂಗಾಗಿ ಕಾಡ್ ಪ್ರದೇಶ ಕೊಡಗ್‌ಲಿ ಅಲ್ಲಲ್ಲಿ ದೂರ ದೂರದ ಒಂಟಿ ಮನೆಗಳ್‌ನ ಹೊಂದಿದ ರೈತ ಜನ ಒಗ್ಗಟ್ಟ್‌ಂದ ಗುಂಪಾಗಿ ವರ್ಷಯಿಡೀ ತಮ್ಮ ವ್ಯವಸಾಯ ಮತ್ತೆ ಇತರ ಕೆಲಸಗಳ್‌ನ ಮಾಡ್ತಾಯಿದ್ದೊ. ರೈತರ್ ಮಳೆಗಾಲದ ಗದ್ದೆ ಕೆಲಸ (ಆರಂಭ)ನ ಸುಮಾರ್ ಎರಡ್ ತಿಂಗಪೂರ್ತಿ ಕೊರೆವ ಚಳಿಂದ ತಮ್ಮ ನೇಗ್‌ಲ್, ನೊಗ ಎತ್ತ್‌ಗ ಹಂಗೆ ಗುದ್ದಲಿಗಳ್‌ಂದ ಕಳಿತಾಯಿದ್ದೊ. ಸೋಣ ತಿಂಗತೇಳ್ರೆ ಸೆಪ್ಟೆಂಬರ್ 3ನೆ ದಿನಕೆ ಮುಟ್ಟ ನಾಟಿ ನೆಡ್ತಿದ್ದೊ ಮತ್ತೆ ಅಗೆನ ನಿತ್ತಲ್ಲೆ ಬುಟ್ಟ್ ಬರ್‌ವ ಪದ್ಧತಿಯಿತ್ತ್‌ತ ಹಿರಿಯರ್ ಹೇಳ್ದ ಮಾತ್. ಇಂದಿಗೂ ಹಿಂಗೆ ಒಬ್ಬ ಇನ್ನೊಬ್ಬನೊಟ್ಟಿಗೆ ಕೂಡಿ ಸಾಮೂಹಿಕವಾಗಿ (ಕೂಡು ಆಳು) ಕೆಲ್ಸ ಕಾರ್ಯನ ನಡ್ಸ್‌ತಿರ್ರುವುಟ್ಟು. ಪ್ರೀತಿ ವಿಶ್ವಾಸ ಒಗ್ಗಟ್ಟ್‌ನ ಕಾಲ ಆಗಿತ್ತ್ ಅಂದ್‌ನ ದಿನಗ. ಹಿಂದೆ ಮಳೆಗಾಲ ವರ್ಷದ 8-10 ತಿಂಗನೂ ಇತ್ತ್. ಅದ್‌ರ್‌ಂದಾಗಿ ಸೆಪ್ಟಂಬರ್ ತಿಂಗಳಪ್ಪರ್‌ಲಿ ಮುಂಗಾರ್‌ನ ರಭಸ ಕಮ್ಮಿ ಆದಂಗೆ ನಾಟಿ ಕೆಲ್ಸ ಮಾಡಿ ಮುಗ್ಸಿ ದಣ್‌ದ ರೈತರಿಗೆ ಒಂದುದಿನ ಸಂತೋಷ ಕೂಟದ ಅವಶ್ಯಕತೆ ಇತ್ತ್.

ಹಿನ್ನಲೆ : ಹಾಲೇರಿ ಅರಸರ ಆಳ್ವಿಕೆನ ಹಿಂದೆನೂ ಈ ರೀತಿ ರೈತರ್ ಕೈಲ್‌ಪೊದು ಹಬ್ಬನ ಆಚರ್‌ಸ್‌ತಿದ್ದೊ ಗೊತ್ತ್‌ಲೆ. ಆದರೆ ಅರಸರ್‌ಗ ಕೈಲ್‌ಪೊದು ಹಬ್ಬಕ್ಕೆ ಪ್ರೋತ್ಸಾಹ ಕೊಟ್ಟೊ. ಕೊಡಗ್ ದೇಶಂತ ಹೇಳ್ತಾಯಿದ್ದ ಮಡಿಕೇರಿ ಕ್ಯಾಟೆಲಿ ರೈತ ಸೈನಿಕರ್ ಸರದಿ ಪ್ರಕಾರ ರಾಜನ ಅರಮನೆಲಿ 20 ದಿನ ಕೆಲಸ ಮಾಡಿ 10 ದಿನ ರಜೆಲಿ ಹೋಗಿ ತಮ್ಮ ಭತ್ತದ ಗದ್ದೆ ಕೆಲಸ ಮಾಡ್ತಾಯಿದ್ದೊ. ಆಗ ಕೊಡಗ್‌ನ ಬ್ಯಾರೆ ಬ್ಯಾರೆ ಭಾಗಗಳಿಗೆ ಕಾಲ್‌ನಡಿಗೆ ಅಥವಾ ಕುದುರೆಗಳ ಮ್ಯಾಲೆ ಹೋದುಯಿತ್ತ್. ಕೈಲ್‌ಪೊದು ಹಬ್ಬನ ಅವರವರ ನೆಂಟರಿಷ್ಟರೊಟ್ಟಿಗೆ ಕಳಿಕೆ ರೈತ ಸೈನಿಕರ್ ಒಟ್ಟಿಗೆ ಎಲ್ಲವೂ ರಜಲಿ ಹೋದರೆ ಒಂದುವೇಳೆ ವೈರಿಗ ಧಾಳಿ ನಡ್ಸಿರೆ ಅವರ್‌ನ ಎದ್ರ್‌ಸುದು ಕಷ್ಟತೇಳ್ವ ಕಾರಣಕ್ಕೆ ರಾಜ ಸೋಣತಿಂಗ 12 ಮತ್ತೆ 18ರ (ಆಗಸ್ಟಂ 29 ಸೆಪ್ಟಂಬರ್ 3) ದಿನಗಳಂದ್ 2 ಸಲ ಆಚರಿಸಿಕೆ ಅವಕಾಶ ಮಾಡಿಕೊಟ್ಟಿತ್. ಉದಾಹರಣೆಗೆ ಹೊರಮಲೆನಾಡ್ (ಗಾಳಿಬೀಡ್) ಮತ್ತೆ ತಾವುನಾಡ್ (ಭಾಗಮಂಡಲ) ಈಕಡೆ 12ಕ್ಕೂ ಉಳ್‌ದ ಕಡೆ ಸೋಣ 18 (ಸೆಪ್ಟೆಂಬರ್ 3ಕ್ಕೆ ವ್ಯವಸ್ಥೆ ಮಾಡ್‌ಕನ ಬ್ಯಾರೆ ಬ್ಯಾರೆ ಕಡೆಂದ ನೆಂಟ್ರ್ ಆಚೀಚೆ ಹೋಗಿ ಬಾಕೆ ಅನ್‌ಕೂಲ ಆತ್. ಹಿಂಗೆ 12ರ ಕೈಲ್‌ಪೊಲ್ದ್‌ಗೆ ಹೋದವು ಬಂದ ಮ್ಯಾಲೆ ಇನ್ನೊಂದು ತಂಡ ರಜಲಿ ಹೊರಡ್‌ತಿದ್ದೊ.

ಈಗ ಊರವೆಲ್ಲಾ ಊರಂಬಲ ಅಲ್ಲರೆ ಶಾಲಾ ಮೈದಾನಲಿ ಆಟೋಟಗಳ ಸ್ಪರ್ಧೆ ಇಟ್ಟವೆ. ತೆಂಗ್‌ನಕಾಯಿಗೆ ಕಲ್ಲು ಹೊಡೆಯೊದು ಗುಂಡು ಹಾರ್ಸುದು, ಭಾರದ ಗುಂಡು ಎಸೆತಗಳ್‌ನ ಆಡ್ತು ಇದೆಲ್ಲಾ ಹಳೆ ಸಂಪ್ರದಾಯ ಆದರೂ ಈಗ ಹಲವಸ್ಟ್ ಆಟೋಟಗಳ್‌ನ ನಡ್ಸುವೆ. ಹಗ್ಗ ಜಗ್ಗಾಟದಂತ ಪ್ರತಿಭೆಗಳ್‌ಲಿ ಬಲಾಬಲ ಪ್ರದರ್ಶನ ಮಾಡಿ ಕುಸಿ ಪಟ್ಟವೆ. ಇನ್ನ್ ಆ ದಿನ ಮಕ್ಕಳಿಗೆ ಗುಂಡು ಹೊಡಿಯಕೆ ಕಲ್ಸುವೆ. ಇದರ್ಲಿ ಮಹಿಳೆಯರ್ ಸ ಭಾಗವಹಿಸುವೆ. ಗಂಡ್ ಮಕ್ಕಳಿಗೆ ಕೋವಿ ಕೈಗೆ ಹಿಡ್ಸುದು ಆ ದಿನನೆ ಹಿರಿಯವು ತರಬೇತಿ ನೀಡ್ತು ಸ ಕೈಲ್‌ಪೊದುನ ಒಂದು ಭಾಗ.

ಇಂದ್ ಈ ಸಂಪ್ರದಾಯ ಹಬ್ಬಂದ ಸಂಘಟನೆ ಆಗ್ತಾವುಟ್ಟು. ಯುವ ಪ್ರತಿಭೆ, ಸಂಘಟನೆ, ರಾಜಕೀಯ ಪ್ರೋತ್ಸಾಹ ಇಂತಹ ವಿಷಯಗಳ್‌ನ ಚರ್ಚಿಸುವ ಒಂದು ವೇದಿಕೆ ಸನ ಆಗುಟ್ಟುತ್ತೇಳಕ್. ಹಿಂಗೆ ಪ್ರತಿಭಾ ಪ್ರದರ್ಶನ ಕ್ರೀಡಾ ಪ್ರದರ್ಶನ ಆಗಿದ್ದ್ ಇದೊಂದು ಕುಸಿ ಕೊಡುವ ಸಂಬ್ರಮ ಪಡ್‌ವ ಕೊಡಗ್‌ನ ನಾಡ್‌ಹಬ್ಬ ಆಗಿ ನಡಿತಾವುಟ್ಟು ಕೈಲ್‌ಪೊದು ಹಬ್ಬ.

*ಕೃಪೆ : ಅಕ್ಷಯ*

# ಕಾರ್ತಿಂಗ

## ದೆವ್ವಕ್ಕೆ ಕೊಡ್ದು (ಜೂನ್ 15 - ಜುಲೈ 15)

ಹಿಂದೆನ ಕಾಲಲಿ ಕೊಡ್ಗ್‌ಲಿ ವರ್ಷಕ್ಕೆ ಹತ್ತ್ ತಿಂಗ (10) ಪೂರ್ತಿ ಮಳೆ ಬರ್‍ತಾಯಿತ್ತ್‌ತ ನಮ್ಮ ಹಿರಿಯವು ಹೇಳ್ತಾಯಿದ ಮಾತ್. ವರ್ಷದ ಇತರ 2 ತಿಂಗಳ್ಲಿ ಪ್ರತಿ ಗ್ರಾಮಗಳ್ಲಿ ಹಬ್ಬ, ನೇಮದ, ಜಾತ್ರೆ, ಭೂತಕ್ಕೋಲ ಇವೆಲ್ಲಾ ನಡ್‌ತ್ತಿದ್ದೊ. ಅದರಂಗೆ ಆ ಕ್ರಮಗ ಇಂದಿಗೆ ಮುಟ್ಟ ಸದಿತಾ ಬರ್‍ತಾವುಟ್ಟು. ವ್ಯವಸಾಯ ಕೆಲ್ಸಗಳ್ನ ಬಿಟ್ಟ್ ಉಳ್ದ ಸಮೆಲಿ ಒಂದಲ್ಲ ಒಂದು ಆಗ್ತಾ ಇದ್ದದೆ. ಈ ಹಬ್ಬ ಜಾತ್ರೆಯೆಲ್ಲಾ ಮುಗ್ಸಿದ ಮ್ಯಾಲೆ ಭೂತಕ್ಕೆ ಕ್ವಾಲ ಕಟ್ಟುದು ಅಥವಾ ಪೂಜೆನ ವ್ಯವಸಾಯ ಕೆಲ್ಸಕ್ಕೆ ಮುಂದೆ ಮಾಡಿ ಮುಗ್ಸುದು ರೂಡಿಲಿ ಬಂದುಟ್ಟು. ಇದ್ಕೆ ಅರೆಬಾಸೆಲಿ ದೆವ್ವಕ್ಕೆ ಕೊಡ್ದು ಮತ್ತೆ ಗುಳಿಗಂಗೆ ಕೊಡ್ದುತ್ತೇಳ್ವೆ.

ಇದರ್‍ನ ಸಾಮಾನ್ಯಾಗಿ ವರ್ಷದ ಕಾರ್ತಿಂಗ ತೇಳ್ರೆ ಜೂನ್ 15ರ್‌ಂದ ಜುಲೈ 15ಕ್ಕೆ ಮುಟ್ಟ, ತುಳು ಪಂಚಾಗದ ಕಾರ್ತಿಂಗ, ಸೋಣ್ತಿಂಗಗಳ್ಲಿ ನಡ್ಸುವೆ. ಮಧ್ಯದ ಆಟಿ ತಿಂಗಳ್ಲಿ ಬಾರಿ ಮಳೆ ಇರುದರ್‌ಂದ ಯಾವ ಸುಬ ಕಾರ್ಯ ಆಗ ಮಾಡ್ಬಾಲೆತ ಹಿರಿಯರ್ ತೀರ್ಮಾನ ಮಾಡ್‌ದಾಗುಟ್ಟು. ಈ ಕಾರ್ಯನ ಹಿರಿಯವು ಗೊತ್ತು ಪಡ್ಸಿದ ಕಾರ್ತಿಂಗ ದೆವ್ವಕ್ಕೆ ಕೊಡ್ದರ್‍ನ ಅಂದ್‌ಂದ ಇಂದಿಗೆ ಮುಟ್ಟ ಯಾವ ವ್ಯತ್ಯಾಸಯಿಲ್ಲದೆ ನಡ್ಸಿಕಂಡ್ ಬರ್‍ತಾವಳೊ.

ಇನ್ನ್ ಮಳೆಗಾಲ ಸುರಾದ ಕಾರ್ತಿಂಗಳ್ಲಿ ಮನೆಗಳ ಒಳೆಗೆ ಅಲ್ಲರೆ ಹೊರೆಗೆ ದೆವ್ವಗಳಿಗೆ ಎಡೆಕೊಟ್ಟ್ ಪೂಜ್‌ಸುವ ಪದ್ದತಿವುಟ್ಟು. ಇದೆಲ್ಲ ಒಂಟಿ ಮೂರ್ತಿಗ 3-5-7 ಅದ್ಕೂ ಹೆಚ್ಚ್‌ಗೆ ಕೂಟು ಮೂರ್ತಿಗಳ್‌ನ ಸ ಒಂದೇ ಸಲ ಪೂಜ್‌ಸುವೆ. ಉದಾರಣೆಗೆ ನಾಗಂಗೆ ಬ್ರಾಹ್ಮಣ್‌ರ್‌ಂದ ಪೂಜೆ - ಚೌಂಡಿ ಮೂರ್ತಿಗೆ ಮಲೆಯರ್‌ಂದ ಪೂಜೆ ಮಾಡ್ಸುವೆ ಇವು ಸಾಮಾನ್ಯಾಗಿ ಕೆಲು ಕುಟುಂಬಗಳ್ಲಿರ್ದು ಇದರ್‍ನೆಲ್ಲಾ ಊರಿಗೆ ಸಮ್ಮಂದಪಟ್ಟ ಪೂಜಾರಿಗ ಮಾತ್ರ ಮಾಡುದಾಗುಟ್ಟು.

ಆಯಾ ಕುಟುಂಬಗಳ ಐನ್ ಮನೆಲಿ ಹಿರಿಯಂವ ಅಥವಾ ಕುಟುಂಬದವೇ ನಿಶ್ಚಯ ಮಾಡ್ದ ಕುಟುಂಬದ ವ್ಯಕ್ತಿ ಎಡೆ ಹಾಕುವ ಪದ್ದತಿವುಟ್ಟು. ಇವಂಗೆ ಕುಟುಂಬದ ಪೂಜಾರಿತೇಳುವೆ. ದೆವ್ವಕ್ಕೆ ಕೊಡಿಕೆ ನಿಶ್ಚಯ ಮಾಡ್ದ ಒಂದು ವಾರಕ್ಕೆ ಮುಂದೆ ಕುಟುಂಬದ ಗಂಡಸರ್ ಸೇರಿ ಮೀದ್ ಬಂದ ಪೂಜಾರಿ ಹೂ ಸಮೇತ ಬಾಳೆಗೊನೆ ಕಡ್ದ್ ತಂದ್ ಗೊನೆನ ಅಟ್ಟಲಿ ತೂಗು ಹಾಕುವೆ. ಸುದ್ದಲಿದ್ದರೆ ಗೊನೆ ಸರಿಯಾಗಿ ಹಣ್ಣಾದೆ ತೇಳಿ ನಂಬಿಕೆ. ಈ ಕೆಲ್ಸ ಮಾಡ್‌ಕಾಕನ ಗೌಡ ಜನರ್‍ಲಿ ಆ ದಿನ ಕಾರ್ಣರ್‌ಗೆ ಮಡ್ಗುವ ಪದ್ದತಿಸವುಟ್ಟು. ಕಾರ್ಣರ್‌ತೇಳ್ರೆ ನಮ್ಮ ಹಿರಿಯರ್ ಕಾಲ ಕಂಡವು ಅಥವಾ ಸತ್ತ್‌ಹೋದ ಹಿರಿಯವುತೇಳಿ ಅರ್ತ. ಆ ದಿನ ಊರು ದೇವ್‌ಸ್ತಾನಂದ ಗಂಧ ಪುಣ್ಯಾರ್ಚನೆ (ತೀರ್ಥ) ತಂದ್ ಮನೆಗೆಲ್ಲ ಚುಮ್‌ಕಿಸಿ ಮನೆನ ಸುದ್ದ ಮಾಡುವೆ ಆ ದಿನ ದೆವ್ವ ಕೊಡಿಕೆ ಅಕ್ಕಿ ಭತ್ತ ಹೊದ್‌ರಿ ಕೋಲ್‌ತಿರಿ ಊದುಬತ್ತಿ ನೆಣೆ ಬತ್ತಿ ತೆಂಗ್‌ನಕಾಯಿ, ಕುರ್ದಿ ನೀರ್‌ಸ ಬೇಕ್. ಸುರುಗೆ ಗಣ್‌ಪತಿಗೆ ಮಡ್ಲಿ ಎಡೆ ಹಾಕುವೆ ಎಡೆತೇಳ್ರೆ ಕೊಡಿ ಬಾಳ್ಲೆಲಿ ಅಕ್ಕಿ ರೊಟ್ಟಿ, ನೀರ್‌ದ್ವಾಸೆ ಮತ್ತೆ ಕೋಳಿ ಮಾಸದ ಗೈಪು ಹಂಙ ಕಳ್ಳ್ ಇದ್ದದೆ. ಕೋಳಿ ತೇಳ್ರೆ ಅಂತಿತ ಕೋಳಿ ಅಲ್ಲ-ಮೊಟ್ಟೆ ಹಾಕದ ಲಾಕಿ ಕೋಳಿ ಆಗಿರೊಕು. ಈ ಅಡ್‌ಗೆನ ಪೂಜಾರಿನೆ ಮಾಡೊಕು ಎಡೆ ಇಸಿದ ಮ್ಯಾಲೆ ಕೂಡ್ಸವ್ರೆಲ್ಲಾ ಕೇಳ್‌ವಂಗೆ ಹಿರಿಯವು ಪ್ರಾತನೆ ಮಾಡುವೆ ಮತ್ತೆ ಎಲ್ಲವೂ ತಿರ್‍ಗಿ ನಿತ್ತವೆ. ಅಲ್ಲಿಗೆ ದೆವ್ವಗ ಎಡೆನ ಮುಟ್ಟಿದೊತೇಳಿ ನಂಬುವೆ.

ಗೌಡ ಕುಟುಂಬದವು ಹೆಚ್ಚಾಗಿ ಪಾಷಾಣ ಮೂರ್ತಿಗೆ ಎಡೆ ಹಾಕುವೆ ಹಿಂಗೆ ಕೊರ್‍ತಿ ಮೂರ್ತಿ, ಕಾಡಯ್ಯಗುಳಿಗ ತಮ್ಮಚ್ಚತೇಳ್ವ ಮೂರ್ತಿಗಳಿಗೂ ಎಡೆಹಾಕುವೆ.

**ಉದ್ದೇಸ :** ವ್ಯವಸಾಯ ಮಾಡ್‌ವ ರೈತ ತನ್ನ ಶ್ರಮದ ಪಲಕ್ಕೆ ಸರಿಯಾಗಿ ಪಲ ಸಿಕ್ಕಲಿತೇಳಿ ಗುಳಿಗಂಗೆ ಎಡೆಹಾಕುವೆ. ಇದ್ಕೆ ಬೂಮಿ ಚೌಂಡಿ ಅಥವಾ ಭೂಮಿ

ಗುಳಿಗ ತೇಳುವೆ ಈ ಎಲ್ಲಾ ತರದ ಮೂರ್ತಿಗಳಿಗೂ ಕೋಳಿ ಮಾಸ ಗೈಪು ಮತ್ತೆ ಅಕ್ಕಿರೊಟ್ಟಿ, ನೀರ್ದ್ವಾಸೆ ಎಡೆಹಾಕುವೆ. ಇನ್ನ್ ತ್ವಾಟಗಳ್ಲಿ ಮತ್ತೆ ಮಲೆಕಾಡ್‌ಲಿ ಸ ಹಿಂಗೆ ಮಾಡುವೆ ಅದ್ಕೆ ಕಾಡಯ್ಯ ಮತ್ತೆ ಮಲೆ ತಮ್ಮಚ್ಚ ತೇಳುವೆ.

ಕಾಡ್‌ಲಿ ಮಲೆ ತಮ್ಮಚ್ಚಂಗೆ ಯಾಕೆ ಕೊಟ್ಟವೆ ತೇಳ್ರೆ -ಹಿಂದೆನ ಕಾಲಲಿ ಹಿಂಡ್‌ದನಗ ಇದ್ದ ಕಾಲಲಿ ಅರಣ್ಯ ಕಡೆ ದನಗ ಮೇಯಕೆ, ಜನ ಬ್ಯಾಟೆಗೆ ಹೋಗ್ತಾಯಿದ್ದೊ. ಆಗ ಹುಲಿಗಳ ಕಾಟನೂ ಜಾಸ್ತಿಯಿತ್ತ್ ಹಿಂಗೆ ಕಾಡಿಗೆ ಹೋದ ಮನ್ಸನೆ ಆಗಲಿ, ದನನೇ ಆಗಲಿ ಕ್ಷೇಮಲಿ ವಾಪಾಸ್ ಬರೊಕುತೇಳಿ ಈ ತರ ಹಿಂದೆನವು ಒಂದು ನಿರ್ದಿಷ್ಟ ಪದ್ದತಿಗಳ್‌ನ ಅನ್‌ಸ್ಸರ್ಸಿಕಂಡ್ ಬಂದೊ, ಇದ್‌ಕಾಗಿ ಕಾಡ್‌ಲಿ ದೊಡ್ಡ ಮರನ ಅಥವಾ ದೊಡ್ಡ ಪಾರೆಕಲ್ಲ್‌ಗಳ್‌ನ ಗುರ್ತಿಸಿಕಂಡೊ. ಇದ್ ಪ್ರತಿವರ್ಷನೂ ರೂಡಿಲಿ ನಡಿತಾ ಬರ್‍ತಾವುಟ್ಟು.

ಹಿಂಗೆ ಭೂಮಿ ತ್ವಾಟ ರಕ್ಷಣೆ ಮಾಡ್ದೊಕ್ಕೆ ಗುಳಿಗ ತೇಳಿ -ದನಗಳ್‌ನ ರಕ್ಷಣೆ ಮಾಡ್ದೊಕ್ಕೆ ಅಂಗರತೇಳಿ-ಹೆಣ್ಣ್ ಮಕ್ಕಳ್ನ ರಕ್ಷಣೆ ಮಾಡ್ದೊಕ್ಕೆ ಪಾಷಾಣ ಮೂರ್ತಿ ತೇಳಿ ಹೆಸರ್ ಇಸಿಕಂಡೊಳೊ. ಪಾಷಣಮೂರ್ತಿಗೆ ದೆವ್ವತೇಳುವೆ. ಸಾಧಾರ್ಣ ಐನ್ ಮನೆಗಳ್ಲಿ ಅಡ್‌ಗೆ ಎಡೆನ ಎಲ್ಲವೂ ಕೂಡಿ ಉಂಡವೆ, ಕಾಡ್‌ಗಳಿಗೆ ಹೆಣ್ಮಕ್ಕ ಹೋಗುವಂಗಿಲ್ಲೆ. ಕೊಟ್ಟ ಹೆಣ್ಮಕ್ಕ ಉಷಾರಿಲ್ಲರೆ ಮಾತ್ರ ಈ ಜಂಬರಲಿ ಕೂಡಕ್ ವಿನಾ ಎಡೆ ಉಂಬಕಾಗದ್ ತೇಳ್ವ ಕಟ್ಟ್‌ನಿಟ್ಟ್‌ನ ನಿಯಮ ಕೂಡಾ ಗೌಡ ಜನಾಂಗಲಿವುಟ್ಟು.

**ಬೇಕಾದ ಸಾಮಾನ್‌ಗ :**

ಕೋಳಿ-ತೆಂಗ್‌ನಕಾಯಿ, ಬೆದ್ರ್‌ಕಡ್ಡಿ - 24, ಕಡ್ಡಿಗೆ ನೆಣೆ ಬಟ್ಟೆ ಸುತ್ತಿಕೆ ಎಣ್ಣೆ 1/4 ಲೀ, ಅಡ್‌ಗೆಗೆ ಉಪ್ಪು ಮೆಣ್ಸ್‌ನಹೊಡಿ - ಸಂಬಾರಹೊಡಿ, ಅರ್‌ಶಣ, ನೀರುಳ್ಳಿ -ಎಡೆಗೆ ಭತ್ತದ ಹೊದ್‌ರ್ಳಿ, ಅನ್ನಕ್ಕೆ 1ಸೇರ್ ಅಕ್ಕಿ, ಗಣ್‌ಪತಿಗೆ ಹೂ ಎಲೆ ಅಡ್ಕೆ, ಹಾಲ್ 1/4ಲೀ, ತುಪ್ಪ ಜೇನ್ 50ಗ್ರಾಂ ದೇಸ್ಥಾನಂದ ಪನ್ನೀರ್.

ದೆವ್ವಕ್ಕೆ ಕೊಡುವ ನುಡಿಕಟ್ಟ್ : ಸಾಮಾನ್ಯಾಗಿ ನಾವು ಯಾವ್ದೆ ಹಬ್ಬ ಹೊಸ್ತ್ ಮೊದುವೆ ಎಂತದಾದ್ರೂ ಸೆರಿ ದೇವ್ರ್‌ನ ಮತ್ತೆ ಗುರು ಕಾರ್ಣರ್‌ನ ನೆನ್ಸುವ ಕ್ರಮವುಟ್ಟು - ಅದರ ಪ್ರಕಾರ ಕಾರ್ತಿಂಗ ದೆವ್ವಕ್ಕೆ ಎಡೆ ಇಸ್‌ಕಾಕನ ಹೇಳ್‌ವ ಸಂಪ್ರದಾಯ ಹಿಂಗುಟ್ಟು.

**ಕುಟುಂಬದವೆಲ್ಲಾ ಸೇರಿದ್ದವೆ**

"ಈಗ ಏನ್‌ತೇಳ್ರೆ ನಾವ್ ಕುಟುಂಬಸ್ತರ್ ಸೇರಿ ನಿಂಗೆ ಎಡೆ ಇಸ್ಯೊಳೊ. ಮೀದ ನೀರ್ಲಾಗಲಿ, ಮಾಡ್ದ ಅಡ್‌ಗೆಲಿ ಆಗಲಿ, ದೊಸಗ ಇರುವೊ ಆ ತಪ್ಪ್‌ನ ಒಪ್ಪು ಪಾಲ್ಸಿಕಂಡ್ ಇನ್ನ್ ಮುಂದಕ್ಕೆ ಬಿತ್ತಿದ ಬೆಳೆಗಾಗಲಿ ದನಕರ್‌ಗಳಿಗಾಗಲಿ ಮಕ್ಕ ಮರಿಗಳಿಗಾಗಲಿ ಹೋದಲ್ಲಿ ಬಂದಲ್ಲಿ ಸುಕ ಸಾಂತಿ ಕೊಡುವ ಬಾರ ನಿಂದ್, ನೀನ್ ನಾವ್‌ಗೆ ಬೇಲಿ ಆಗಿ ಬಂದ್ ಕಾಪಾಡೋಕುತೇಳಿ" ಎಡೆಗೆ ಅಕ್ಕಿ ಹಾಕುವೆ.

*ಕೃಪೆ : ಅಕ್ಷಯ*

## ಪ್ರಾತನೆ

ಶರಣ್ ಸಿದ್ಧಿ ವಿನಾಯಕ
ಶರಣ್ ಶ್ರೀ ವೆಂಕಟೇಶ || ಸ್ವಾಮಿ ...
ನಾವಿಂದ್ ನಿಂಗೆ ಶರಣಾದೊ ||

ಬಾನೆತ್ತರಲಿ ನಿತ್ತ್ | ಬೊಗಸೆ ತುಂಬಿ
ಹೂಮಳೆ ಚೆಲ್ಲಿ | ಹಾರೈಸಿದಂವನೆ || ಸ್ವಾಮಿ ...
ನಾವಿಂದ್ ನಿಂಗೆ ಶರಣಾದೊ ||

ಮೋಡದ ಮರೆಲಿದ್ದ | ಸೂರ್ಯನ
ಕಿರಣ ಬಿದ್ದ್ | ಬೆಳ್ಕ್ ಬಾತ್ ಇಂದ್ || ಸ್ವಾಮಿ ...
ನಾವಿಂದ್ ನಿಂಗೆ ಶರಣಾದೊ ||

ಶಾರದೆ -ನಿನ್ನ ಕೃಪೆ ನಾವ್‌ಗಿರ್‍ಲಿ |
ಎಲ್ಲವ್ರ ನಾಲ್ಗೆಲಿ ನಿನ್ನ ನಾಮಾ ಇರ್‍ಲಿ || ತಾಯಿ ...
ನಾವಿಂದ್ ನಿಂಗೆ ಶರಣಾದೊ||

ರಚನೆ : ಬೈತಡ್ಕ ಜಾನಕಿ ಬೆಳ್ಯಪ್ಪ
*ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ*

# ಸುರಗಿ

ಕವನ



✍ ಹೊದ್ದೆಟಿ ಭವಾನಿ ಶಂಕರ್
*ಬೆಂಗಳೂರು, ಮೊ. : 9008780289*

ಸುರಗಿಂತೇಳುವ ಹೆಸರ್ | ಇಸಿದೊಂದ್ ಪತ್ರಿಕೆನ |
ಸುರ್‌ಮಾಡ್ವ ವಿಷಯನ | ತಿಳ್ದ್ ನಂಗಿಲ್ಲಿ ||
ಸಂತೋಸನೆ ಆತ್ | ಸವಿಯಾಗಿ ಬಂದ್ ಅದ್|
ಅರೆಬಾಸೆ ಜನಂಗಳನೆ | ಎಚ್ಚರಿಸಲಿ ||

ಮೂರ್ ತಿಂಗಳಿಗೊಮ್ಮೆ | ಮೂಡಿ ಬರುವಾ ಸುರಗಿ |
ಮುಂದೆ ಜನಕೆಲ್ಲ ಅದ್ | ಸುವಾಸೆನನ ಕೊಡಲಿ ||
ಗೌಡ ಅಕಾಡೆಮಿ ಬೆಳ್ದ್ | ಸುರಗಿ ಮರನೆ ಆಗಿ |
ಇಂಪು ಕಂಪುನ ಹರಡಿ | ಎದ್ದ್ ನಿಲಲಿ||

ಜನ ಮನಸ್ ತಣ್‌ಸುವ | ಗುಣ ಇರುವ ಈ ಮರಂದ|
ಅರೆಬಾಸೆ ಗೌಡರ | ಮನ ತಣಿಯಲಿ ||
ಸುರಗಿಂತೇಳುವ ಒಂದ್ | ಈ ಪತ್ರಿಕೆನ ಓದಿದ್ |
ನಮ್ಮ ಜನಾಂಗ | ಸಂತೋಸ ಪಡಲಿ ||

ಒಳಗೊಳಗೆ ಜನಂಗಳಲಿ | ಬಿಸಿ ಉಸಿರ್ ಇದ್ದರದ್|
ಸುರಗಿ ಪತ್ರಿಕೆಂದಾಗಿ | ಹೊಗೆ ಆರಲಿ||
ಸುರಗಿನ ಅಭಿವೃದ್ಧಿ | ನಮ್ಮ ಜನಾಂಗವು ಮೆಚ್ಚಿ |
ಕಥೆ ಕಾವ್ಯ ಕವನಗಳ | ಅವು ಬರಿಯಲಿ ||

ಅಕಾಡೆಮಿನು ಅರೆಬಾಸೆ | ಸುರಗಿನೂ ಅರೆಬಾಸೆ |
ಇದರಿಂದ್ ತಿಳ್ದ್ ಜನ | ಹೆಮ್ಮೆ ಪಡಲಿ ||
ನಾವ್ ನಮ್ಮದ್‌ಂತೇಳಿ | ಮನ್‌ಸಿಟ್ಟ್ ಬೆಳ್ಸೊಕಿದ್ |
ಬೇರೆ ಜನ ಸೇರಿವೆನೋ | ನೀವೆ ಹೇಳಿ ? ||

ಅಚ್ಚುಮೆಚ್ಚಿನ ಸುರಗಿ | ಸ್ವ ಇಚ್ಚೆಂದ ಜನತಕಂಡ್ |
ಹೆಚ್ಚೆಚ್ಚ್ ಜನ ಓದುವಂತಾಗಲಿ ||
ಹೊಚ್ಚ ಹೊಸ ಮೊಗ್ಗಾಗಿ | ಸುರಗಿ ಅರಳ್‌ತಾ ಉಟ್ಟು ||
ಮುಂದೆ ಅದರಾರೈಕೆ | ಜನ ಮಾಡಲಿ ||

ಸುರಗಿಂದ್ ಹೊರ ಹೊಮ್ಮಿ | ಬರ್ಲಿಂದ್ ಮನೆಮನೆಗೆ |
ಉದಯಿಸುವ ಸೂರ್ಯನ | ಬೊಳ್ಪುನಾಂಗೆ ||
ಅರೆಬಾಸೆ ತೆಗ್‌ಳುವ | ಜನರ ಮನ್‌ಸ್‌ನ ಸಿಗ್ದ್ |
ಬರಲೆದ್ದ್ ಸಿಡ್‌ಲ್‌ನ ಹೊಳ್‌ಪುನಾಂಗೆ ||

ಅಕಾಡೆಮಿನ ಒಳಗೆಂದ | ಹೊರಗೆ ಬಂದುಟು ಸುರಗಿ |
ಅತಿ ಕುಸಿಲಿ ಹರ್ಸ್‌ತೊಳೆ | ನಾನ್ ಇದ್ಕೆ |
ಗಮ ಗಮದ ಸುರಗಿಗೆ ಹಾಡೊಂದು ಬರೆಕುಂತ ||
ಕೇಳ್ದೊ ಜನ ಕೊಡ್‌ಗ್‌ಂದ | ಬರ್ದೆ ನಾ ಅದ್ಕೆ ||

## ಬಾಸೆನ ಉಳಿಸೋನಾ

ಅರೆಬಾಸೆನ ಉಳ್‌ಸೋನ
ಹತ್ತ್ ಕುಟುಂಬ ಹದ್‌ನೆಂಟ್ ಗೋತ್ರ
ಇದ್ ಗೌಡರ್‌ಗಳಿಗೆ ಮಾತ್ರ
ನಾವ್ ನಮ್ಮ ಮಕ್ಕಳಿಗೆ ಪಿಳ್ಳೆಕಳಿಗೆ
ಅರೆಬಾಸೆ ಕಲ್ಸೊಕು
ಆಚಾರ ವಿಚಾರ ಸಂಸ್ಕೃತಿನ ತಿಳ್ಸೊಕು

ಪೇಳ್‌ದೊಂದು ಮಾಪ್‌ದೊಂದು ಮಾಪ್‌ಬುಡಿ
ಕಂಡಿತಾ ಅರೆಬಾಸೆನ ಮಕ್ಕಳಿಗೆ ಪಿಳ್ಳೆಕಗಳಿಗೆ ಕಲ್ಸಿಬುಡಿ
ನಾಚಿಕೆ ಬುಟ್ಟ್, ಮಾತಾಡಿ ಅರೆಬಾಸೆ
ಹಂಗಾರೆ ಕಂಡಿತಾ ಬೆಳ್‌ದದೆ ನಮ್ಮ ಬಾಸೆ

ಹತ್ತ್ ಸೇರ್ರೆ ಮುತ್ತ್- ಇದ್ ಎಲ್ಲವುಕೆ ಗೊತ್ತ್
ಜನಾಂಗ ಬಾಂದವ್ ಒಟ್ಟಾಗಿ ಸೇರುದೆ ಒಂದು ಗತ್ತ್
ನಾವ್ ಬೆಳೆಯೋನ ಬಾಸೆನ ಬೆಳೆಸೋನ
ನಮ್ಮ ಬಾಸೆ ಅರೆಬಾಸೆನಾ ಉಳಿಸೋನಾ.

- ಪಟ್ಟಡ ಎಸ್. ಸುಗುಣಕುಮಾರ್
ಅವಂದೂರು

## ಬುಲುಕುಗಳು

*(ಹರಿತ ಲೇಖನ)*

ಅಳ್‌ಬ್ಯಾಡ
ಕೊಟ್ಟ್‌ಕತ್ತಿ ಬಾಣೆಲಿ
ಕೊಂಬೋಲಗ ಕೇಳಿದೆ
ಅಳ್ ಬ್ಯಾಡ ನೀನ್ ಕುಂಜಕ್ಕ
ಡಬ್ಬಡಕ ಬಾಣೆಲಿ
ದಿಬ್ಬಣ ಬಂದುಟ್ಟು
ಅಳ್ ಬ್ಯಾಡ ನೀನ್ ಸಂಣಕ್ಕ

## ಅರೆಬಾಸಿಗರ ತಿಂಗ್ಳ ಹೆಸ್ರ್

(ಸೌರಮಾನ ಯುಗಾದಿ ಸಂಕ್ರಮಣಂದ ಸುರು ಆದೆ)

| | | | |
|---|---|---|---|
| ಪೊಗ್ಗು ತಿಂಗ | : | ಏಪ್ರಿಲ್ 16 ರ್‌ಂದ | ಮೇ 15ಕೆ ಮುಟ್ಟ |
| ಬ್ಯಾಸಿಗೆ ತಿಂಗ | : | ಮೇ 16 ರ್‌ಂದ | ಜೂನ್ 15ಕೆ ಮುಟ್ಟ |
| ಕಾರ್ತಿಂಗ | : | ಜೂನ್ 16 ರ್‌ಂದ | ಜುಲೈ 15ಕೆ ಮುಟ್ಟ |
| ಆಟಿ ತಿಂಗ | : | ಜುಲೈ 16 ರ್‌ಂದ | ಆಗಸ್ಟ್ 15ಕೆ ಮುಟ್ಟ |
| ಸೋಣ ತಿಂಗ | : | ಆಗಸ್ಟ್ 16 ರ್‌ಂದ | ಸೆಪ್ಟಂಬರ್ 15ಕೆ ಮುಟ್ಟ |
| ನಿರ್ನಾಲ್ ತಿಂಗ | : | ಸೆಪ್ಟಂಬರ್ 16 ರ್‌ಂದ | ಅಕ್ಟೋಬರ್ 15ಕೆ ಮುಟ್ಟ |
| ಬೆಣ್ತ್‌ತಿಂಗ | : | ಅಕ್ಟೋಬರ್ 16 ರ್‌ಂದ | ನವೆಂಬರ್ 15ಕೆ ಮುಟ್ಟ |
| ಜಾರ್ದೆ ತಿಂಗ | : | ನವೆಂಬರ್ 16 ರ್‌ಂದ | ಡಿಸೆಂಬರ್ 15ಕೆ ಮುಟ್ಟ |
| ಪೆರಾರ್ದೆ ತಿಂಗ | : | ಡಿಸೆಂಬರ್ 16 ರ್‌ಂದ | ಜನವರಿ 15ಕೆ ಮುಟ್ಟ |
| ಪೊನ್ನಿತಿಂಗ | : | ಜನವರಿ 16 ರ್‌ಂದ | ಫೆಬ್ರವರಿ 15ಕೆ ಮುಟ್ಟ |
| ಮಾಯಿತಿಂಗ | : | ಫೆಬ್ರವರಿ 16 ರ್‌ಂದ | ಮಾರ್ಚ್ 15ಕೆ ಮುಟ್ಟ |
| ಸುಗ್ಗಿ ತಿಂಗ | : | ಮಾರ್ಚ್ 16 ರ್‌ಂದ | ಏಪ್ರಿಲ್ 15ಕೆ ಮುಟ್ಟ |

## ಶಾಂತಿನ ನೋಡಿಕೆ ಬಂದವೆ ಗಡ

ಲಕ್ಷದ ಮನೆ ಕಟ್ಟಿಟ್ಟು ಗಡ
ಭಾರಿ ದೊಡ್ಡ ಬಂಗಲೆ ಗಡ
ಎಲ್ಲಾ ಸಿಮೆಂಟ್ ಕೆಲಸಗಡ
ಮಹಡಿ ಮಾತ್ರ ಸೋರ್ದೆ ಗಡ

ತುಂಬಾ ಹಸು ಸಾಕಿಯೊಳ ಗಡ
ತುಂಬಾ ಹಾಲ್ ಕರದವೆ ಗಡ
ಯಾಗಳು ಹಾಲ್ ಮಾರುವೆ ಗಡ
ಕುಡಿಯಕೆ ಮಾತ್ರ ಪೌಡರ್ ಗಡ

ಎಲ್ಲಾ ಸಭೆಗೆ ಹೋದವೆ ಗಡ
ತುಂಬಾ ಭಾಷಣ ಮಾಡಿವೆ ಗಡ
ಜೋಬ್‌ಲಿ ಯಾಗೊಳು ಪೆನ್ನ್‌ಗಡ
ಸೈನ್ ಮಾತ್ರ ಹೆಬ್ಬೆಟ್ಟ್ ಗಡ

ಶಾಂತಿನ ನೋಡಿಕೆ ಬಂದವೆ ಗಡ
ಭಾರಿ ಮನ್‌ಸ ಬಂದದೆ ಗಡ
ಉದ್ದ ಕಾರ್‌ಲಿ ಬಂದದೆ ಗಡ
ಕಾರ್ ಮಾತ್ರ ಬಾಡಿಗೆ ಗಡ

ಹೈದ ಬೆಳ್ಳಗೆ ಉಟ್ಟು ಗಡ
ಭಾರಿ ಲಾಯಕ್ ಕಂಡದೆ ಗಡ
ಮಾತ್ ಬಹಳ ಕಮ್ಮಿ ಗಡ
ಎತ್ತರ ಮಾತ್ರ ಮೂರೇ ಅಡಿ ಗಡ

ಎಂ.ಎ. ಗಂಟ ಓದಿಟ್ಟು ಗಡ
ಭಾರಿ ಡಿಗ್ರಿ ಪಡ್ದುಟ್ಟು ಗಡ
ಪರದೇಶ ಎಲ್ಲಾ ಸುತ್ತಿಟ್ಟು ಗಡ
ಇಂಗ್ಲಿಷ್ ಮಾತ್ರ ಬಾದುಲೆ ಗಡ

ಭಾರಿ ಮೇಕಪ್ ಮಾಡವೆ ಗಡ
ಪೌಡರ್ ಸ್ನೋ ಹಾಕಿವೆ ಗಡ
ಯಾಗೋಳು ಹೊಸ ಸೂಟು ಗಡ
ಬಾಡಿಗೆ ಅಂಗಿಡಿಲಿ ಸಾಲಗಡ || ಶಾಂತಿ ?

- ಪೈಕೇರ ಇಂದಿರಾ ತಮ್ಮಯ್ಯ, ಬಿಳಿಗೇರಿ

## ಬನ್ನಿ ಕೊಡ್ಗ್‌ಗೆ



ಬನ್ನಿ ಒಮ್ಮೆ ಕೊಡ್ಗ್‌ಗೆ
ಕೈಬೀಸಿ ಕರಿತುಟ್ಟು
ಇಲ್ಲಿ ಪೊರ್ಲಾದ ತಾಣಗ
ಸುತ್ತ ಕುಂದ್ ಸಾಲ್‌ಗ

ನಡುಲಿ ಉಟ್ಟು ಹಸ್‌ರ್ ಕಾಡ್
ಮರ ಗಿಡಗಳ ಸಾಲ್
ಹಸ್‌ರ್ ಸೀರೆ ಉಟ್ಟುಟ್ಟು
ಕಾಫಿ ಮಣಿ ಮಾಲೆ ಹಾಕುಟ್ಟು
ಯ್ಯಾಲಕ್ಕಿ ಕಾಯಿ ಗೆಜ್ಜೆ ತೊಟ್ಟ್

ಭೂಮಿತಾಯಿ ನೆಗಾಡ್ತುಟ್ಟ್
ಬಾಳ ಕುಸಿಲಿ ಕಾಣ್ತಾವುಟ್ಟು
ಬನ್ನಿ ಒಮ್ಮೆ ಕೊಡ್‌ಗ್‌ಗೆ
ಸಂಸ್ಕೃತಿ ಪದ್ಧತಿ ಹೆಂಗುಟ್ಟು
ಗೌರವ ರಕ್ಷೆ ಇಲ್ಯುಟ್ಟು
ಬನ್ನಿ ಒಮ್ಮೆ ಕೊಡ್ಗ್‌ಗೆ

ಕಾಡ್ ಪ್ರಾಣಿ ಹಕ್ಕಿಗಳ ಜಾಗಯಿದ್
ಪೊರ್ಲುನ ದೇವಸ್ತಾನಗಳ ಬೇಡಿಯಿದ್
ಹುತ್ತರಿ ಹಬ್ಬ ಕಾವೇರಿ ಜಾತ್ರೆ
ಕೈಲ್‌ಮೂರ್ತ ಕೆಡ್ದಾಸ ಹಬ್ಬನುವುಟ್ಟು

ಸಾಹಿತಿ ಕವಿಗಳ ನೆಲೆಬೀಡ್
ಸೋಬಾನೆ ಸುವ್ವಿ ಪದಗಳ ತೌರೂರ್
ವೀರ ಯೋಧರ ನಾಡಿದ್
ಬನ್ನಿ ಒಮ್ಮೆ ಕೊಡ್ಗಿಗೆ
ಪೋಯಿ ಎಲ್ಲ ಒಟ್ಟಿಗೆ

- ಕೇಕಡ ಇಂದುಮತಿ ರವೀಂದ್ರ

## ಬೇಸಾಯ

✍ ನಿಡ್ಯಮಲೆ ವೇದಾವತಿ ಅನಂತ

ಬೆಳ್ಳಿ ಮೂಡಿ ಬೊಳ್ಪು ಆಕನ
ಹಂಗೇ ಆಲ್ಸಿದ ಕೆಬಿ ಕೊಡ್ಕನ
ಕೇಳ್ದೆ ಮಾರಾಯ್ತಿ ದನಿ ಕೊಡ್ದು
ಬೈತ್‌ನ ಪುಡೆಂದ ಪೊರ್ಲ್ಲಲಿ ಕೇಳ್ದೆ ||

ಬೊಳ್ಪಾತ್‌ಂತ ಬೆಳ್ಗೆ ಕೋಳಿ ಕೂಂಗ್‌ಕನ
ಮಜನ ಎದ್ರಿಸಿ ಗೌಡ್ರು ಹೇಳ್ದೊ ಚಿಮಿಣಿ ದೀಪ ಇತ್ತಕೆ ತಕ
ಕಾಫಿ ಆಗಿರೋಕು ಹೊಯ್ಕಂಡ್ ಬಾ||

ಕಾರಿ ಎತ್ತ್ ಮುಂದೆ -ಗೆಂಡೆ ಎತ್ತ್ ಹಿಂದೆ
ನೊಗ ನೇಗ್‌ಲ್ ಹೆಗ್‌ಲ್‌ಲಿ ಇಸಿದೊ
ಅಪ್ಪನು ಮಜನು ಹೂಡಿಕೆ ಹೊರ್‍ಟೊ
ದಂಡಿಗೆ ಹೊರ್ಡುವ ವೀರರ ಹಂಗೆ ||

ಹೆಣ್ಣ್ ಭತ್ತ ಮಿದ್ದದೆ, ಮಗಳ್ ಅಕ್ಕಿ ಕಡ್ದದೆ
ಸೊಪ್ಪು ಹುಲ್ಲು ಆಕೊಲ್ಲೆ, ಸೌದೆ ಹಞತರ ಕೊಲೆ
ಹನಿತ್ ಅಕ್ಕಿ ಬೀಸಿಕೆ, ಕೊಮ್ಮೆ ಭತ್ತ ಬೇಯ್ಸಿಕೆ
ಗದ್ದೆ ಗೋರಿ ನಾಳೆಗೆ, ಹಞ ಜನಕೆ ಹೇಳಿಕೆ ||

ಬೈಲಿಗೆ ಹೋದರೆ ನೇಜಿನ ಪೊರ್ಲು
ಕಂಜ ತರಿಯಕನ ಕಾಫಿ ಮೊರ್ಲು
ಪುಣಿಗೆ ಮೆತ್ತಿದ ಚೋಳುನು ಜಾರ್ದು
ಹಲ್ಲೆ ಮೆಟ್ಟ್‌ಕನ ಒಮ್ಮೊಮ್ಮೆ ಬೀಳ್ದು ||

ಬೇಸಾಯ ಅಂದರೆ ಬೇಗ ಸಾಯ
ಹೀಂಗೆತ ಎಲ್ಲವ್ಕೂ ಗೊತ್ತಾಗುಟ್ಟು
ಕರ್‍ದರೆ ಬರುವ ಜನ ಎಲ್ಲಿಟ್ಟು
ಹಾಂಗೇಂತ ಬೈಲೆಲ್ಲ ತೋಟ ಆಗುಟ್ಟು ||

ಅದೆಲ್ಲ ಕಳ್ತಲೆ ಅಂದ್‌ನ ಕಾಲ
ಹೆಂಗುಟ್ಟು ನೋಡಿ ಇಂದ್‌ನ ಕಾಲ
ಹೊತ್ತು ಏರ್‍ದ ಮೇಲೆ ಹಾಸಿಗೆಂದ ಏಳ್ದು
ಕಂತುವ ಸೂರ್ಯನ ನೋಡಿಕೆ ಹೋದು. ||

ಪೇಟೆಗೆ ಹೋದರೆ ಅಕ್ಕಿನು ಉಟ್ಟು
ದುಡ್ಡಿದ್ದರೆ ಲೋಕಲಿ ಎಲ್ಲನು ಉಟ್ಟು
ಕಸ ಬಾಕೆ ಈಗ ಇಸ ಯಾರಿಗುಟ್ಟು
ಲೋಕ ಎಲ್ಲ ಬಾರಿ ಸುಖನೇ ಉಟ್ಟು. ||

ಹಿಂದೆನ ಕಾಲದ್ ನೆನ್ಪಿಗೆ ಬಂದದೆ
ಅದಾ ಎತ್ತ್‌ಗೆ ದನಿ ಕೊಡ್ದು
ನೀವ್ಗೆ ಕೆಳ್ದೆನೋ -ಈ ಹೋ ಹೊಯ್
ಓ ಬೇಲಿಲೇನೋ, ಗೋವಿಂದ ಭಜನೆ ಪದಗ. ||

## ನಮ್ಮ ಭಾಷೆ

ನಮ್ಮದ್ ಇದ್ ನಮ್ಮದ್
ಅರೆಕನ್ನಡ ಭಾಷೆ ನಮ್ಮದ್ ||
ಪೆತ್ತವ್ವ ಕಲ್ತದ್ ಅರೆಕನ್ನಡ
ಅಪ್ಪವ್ವ ಮಾತಾಡ್ದು ಅರೆಕನ್ನಡ
ನಾವುನೂ ಮಾತಾಡ್ದು ಅರೆಕನ್ನಡ / ನಮ್ಮ
ಮಕ್ಕಳಿಗೂ ಕಲ್ಸುದೆ ಅರೆಕನ್ನಡ ||
ಜಾತಿ ಜಾಸಗೆ ಉಟ್ಟು ಎಲ್ಲದ್ರುಕೆ
ಅವರವರ ಭಾಸೆನೆ ದೊಡ್ಡದವುಕೆ
ಯಾಕಾದುಲೆ ನೀವುಗೆ ಇದ್ ಮಾತಾಡಿಕೆ ನಮ್ಮ
ಮನ್ಸೊಳಗೆ ಬರೋಕು ಇದ್ ಎಲ್ಲೊವುಕೆ ||
ಬೇರೆ ಭಾಸೆಗೆ ಕೂಡ ನೀವ್ ಕಲಿಯೋಕು
ಬೇರೆ ಕಡೆ ಹೋಕನದ್ ಮಾತಾಡೊಕು
ಕಲಿದು ಬೇಡಂತೇಳ್ದುಲೆ ಬೇರೆ ಭಾಸೆ / ನಮ್ಮ
ನಮ್ಮಲೆ ಇರಕು ಇದ್ ನಮ್ಮ ಭಾಸೆ ||
ನಮ್ಮ ದೇಶಲಿ ಉಟ್ಟು ಎಸ್ಟೋ ಭಾಸೆ
ಅವುಕವುಕೆ ಸರಿಯಾಗಿ ಜಾತಿಮತಕೆ
ಕನ್ನಡಲೆ ಮಾತಾಡ್ದು ನೀ ಎಂತಕೆ ನಮ್ಮ
ಭಾಸೆನ ಬೊತ್ತಾಕೆ ನೀವ್ ಕಲಿಯಕೆ ||
ಮಾತೃ ಭಾಸೆಗೆ ನೀವು ಮೋಸ ಮಾಡಿ
ಯಾರ್ರ್ಯಾರ ಭಾಸೆಗಳ ಪೋಷಣೆ ಮಾಡಿ
ಏನ್ ಸಾರ್ಥಕ ನೀವ್ ಹಿಂಗೆ ಮಾಡಿ / ನಮ್ಮ
ತಾಯಿ ಭಾಸೆನ ನೀವಂ ದೂರ ಮಾಡಿ ||
ಮಮ್ಮಿ ಡ್ಯಾಡಿ ಹೆಸ್‌ರ್ ನಮ್ಮದಲ್ಲ
ಅಪ್ಪ ಅಮ್ಮ ಪದವೆ ನಾವ್ಗೆ ಬೆಲ್ಲ
ಇಂಗ್ಲೀಷ್‌ನ ಹೆಸ್‌ರ್ ಬೇಡ ನಾವ್ಗೆ / ನಮ್ಮ
ಕನ್ನಡದ ತಿಳಿಬಾಸೆ ಸಾಕ್ ನಾವ್ಗೆ ||
ನಮ್ಮ ಭಾಸೆನ ನಾವ್ ಕೊಂಡಾಡೊಕು
ಅರೆಕನ್ನಡನ ನಾವ್ ಮುದ್ದಾಡೊಕು
ಗೊತ್ತಲ್ಲದವು ನೀವ್ ಇದ್ ಕಲಿಯೋಕು / ನಮ್ಮ
ಭಾಸೆನ ಬೆಳಕಿಗೆ ನಾವೇ ತರೋಕು ||

- ಹೊದ್ದೆಟಿ ಭವಾನಿ ಶಂಕರ

## ಚುಟುಕುಗಳು

**ಅಸಹಾಯಕತೆ**

ಈ ವರ್ಷ ಮಳೆಗಾಲ ಬಾಳ
ನಮ್ಮಪ್ಪ ಒಲೆ ಬುಡದಿಂದೇಳ
ಸಾಲ ಕೊಟ್ಟವೆಲ್ಲಾ ಬನ್ನಿ
ನಮ್ಮಂಗಳ ಮಣ್ಣೆ ತಿನ್ನಿ

**ಕೂಡಿ ಬ್ಯಾಸಾಯ**

ಗೋಣಿಕೊಪ್ಪಕ್ಕೆ ಹೋಗಲಾಗಿ
ಮುದಿಯೆತ್ತ್ ತರಲಾಗಿ
ಹಡ್ಲ್ ಭೂಮಿ ಹೂಡಲಾಗಿ
ಗೋಳೋ ಗೋಳು ಗೋಳಣ್ಣಾ.

**ಅಳ್‌ಬ್ಯಾಡ**

ಕೊಟ್ಟ್‌ಕತ್ತಿ ಬಾಣೆಲಿ
ಕೊಂಬೋಲಗ ಕೇಳಿದೆ
ಅಳ್‌ಬ್ಯಾಡ ನೀನ್ ಕುಂಜಕ್ಕ
ಡಬ್ಬ್‌ಡಕ ಬಾಣೆಲಿ
ದಿಬ್ಬಣ ಬಂದುಟ್ಟು
ಅಳ್‌ಬ್ಯಾಡ ನೀನ್ ಸಂಣಕ್ಕ

**ದಾಸಯ್ಯನ ಗೇಲಿ**

ದಾಸಬಾತ್
ದೋಸೆ ತೀಂತ್
ನೀರ್ ಕುಡ್‌ತ್
ನಿಗರಿ ಬೀತ್.

**ಕೂಸುಗೆ ಪೂಸಿ**

ಸಗ್‌ಣಿಕಟ್ಟೆ ಕಟ್ಟಿ
ಪೊವ್ವ ಕುಪ್ಪ ಹಾಕಿ
ಹಾಲ್ ಬೋನ ಉಂಡ್
ಮಾಮನೆಗೆ ನಡಿಮಂಞ
ನಾ ಬನ್ನೆ ನಿನ್ನ ಬೆನ್ನ್
ಹಿಂದೆ, ಹಿಂದೆ

- ಕುಲ್ಲಚನ ಕಾರ್ಯಪ್ಪ, ಕುಂಬಳದಾಳು


ಸಹ ಸದಸ್ಯರ್ನ ಸ್ವಾಗತಿಸುತ್ತಿರ್‌ವ ಅಧ್ಯಕ್ಷರ್ ಮತ್ತೆ ರಿಜಿಸ್ಟ್ರಾರ್


ಪೇಜಾವರ ಮತ್ತೆ ಸುಬ್ರಹ್ಮಣ್ಯ ಸ್ವಾಮಿಗಳ್‌ಂದ ಸಮ್ಮಾನ


ಕಾಮಾಕ್ಷಿಕೂಟ ಮಡಿಕೇರಿಲಿ ಕೈಲ್‌ಮೂರ್ತ ಜಂಬರ


ಮಡಿಕೇರಿಲಿ ಗೌಡ ಯುವ ವೇದಿಕೆ ಉದ್ಘಾಟನಾ ಜಂಬರ


ವೀರಾಜಪೇಟೆ ಗೌಡಸಮಾಜದ ಕೈಲ್‌ಮೂರ್ತ ಜಂಬರ


ಅಕಾಡೆಮಿ ಕಚೇರಿಲಿ ಅಕಾಡೆಮಿ ಸದಸ್ಯರ ಸಭೆ.

## ಸಂದರ್ಶಕರ ಅಭಿಪ್ರಾಯ

- ಅರೆಬಾಸೆ ಅಕಾಡೆಮಿ ಸಂಸ್ಕೃತಿ ಕಛೇರಿ ತುಂಬಾ ಲಾಯ್ಕ ಇದ್ದ್ ಕುಸಿ ಆತ್. ಇನ್ನೂ ಲಾಯ್ಕ ಆಕೆ ಎಲ್ಲವೂ ಒಂದೆ ಮನ್ಸ್‌ಲಿ ಸೇರಿ ಮುಂದೊರ್ಸೋಕ್ಕಾದೆ.

*- ಯಶವಂತ ಕುಡೆಕಲ್ಲು, ಸುಳ್ಯ,* ***9481180519***

- Very Impressed with the development of your academy of the way you have organised yourself in such a short time. Wish the academy the very best. Will

keep coming, here hope you will have organised Library Room.

*- Pushpa Cheppudira, Scientist, Mysore, 9449052568*

- ಅರೆಬಾಸೆ ಅಕಾಡೆಮಿಗೆ ಬಂದಿದ್ದೆ. ಹಲವ್ ವಿಚಾರಗಳ ಬಗ್ಗೆ ಮಂದಟ್ಟ್ ಆತ್. ಅರೆಬಾಸೆ ಮತ್ತೆ ಸಂಸ್ಕೃತಿನ ಎತ್ತಿ ಹಿಡಿಯಕೆ ಸರಕಾರದ ಸಹಾಯ ಹಸ್ತ ಪ್ರಶಂಸನೀಯ ವಿಚಾರ.

*- ಕುದುಕುಳಿ ಭರತ್, ಭಾಗಮಂಡಲ ಹೋಬಳಿ ಕ.ಸಾ.ಪ. ಅಧ್ಯಕ್ಷರ್*

- ಅರೆಬಾಸೆ ಅಕಾಡೆಮಿ ವ್ಯವಸ್ಥಿತವಾಗಿ ರೂಪುಗೊಂಡಿದೆ. ಒಳ್ಳೆಯ ಅಧ್ಯಕ್ಷರು, ರಿಜಿಸ್ಟ್ರಾರರು, ಸದಸ್ಯರ ಸಾರಥ್ಯದಲ್ಲಿ ಉತ್ತಮವಾಗಿ ಕಾರ್ಯವೆಸುಗುತ್ತಿದೆ.

*- ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು*

- ಅರೆಬಾಸೆ ಅಕಾಡೆಮಿಗೆ ಬಂದಿದ್ದೆ. ಆಫೀಸ್ ತುಂಬಾ ಚೆನ್ನಾಗಿ ಉಟ್ಟು. ಕುಸಿ ಆತ್. ಆದ್ರೆ 'ಅರೆಬಾಸೆ ಕನ್ನಡ ಗಡ' ಇದ್ ಯಾರಿಗೆ ಯಾರ್ ಹೇಳುವ ಮಾತ್ ಎಂದ್ ನಂಗೆ ಅರ್ಥ ಆತ್‌ಲೆ. ಒಂದನೆದಾಗಿ ಅರೆಬಾಸೆ ಬೇರೆ ಕನ್ನಡ ಗಡ ಬೇರೆ ಹೀಂಗುಟ್ಟು. ಇದ್ರ ಅರ್ಥ ಏನ್? ಆ ಬೋರ್ಡ್‌ಲಿ ಇರುವ ಚಿಹ್ನೆ ಏನೂಂತ ಯಾರಿಗೆ ಅರ್ಥ ಆದುಲೆ. ಅಂತ ನನ್ನ ಅನಿಸಿಕೆ.

*- ಹೊದ್ದೇಟಿ ಭವಾನಿಶಂಕರ್, ಬೆಂಗಳೂರು*

- ಅರೆಬಾಸೆ ಅಕಾಡೆಮಿಗೆ ನೋಡಿಕೋಸ್ಕರ ಬಂದಿದ್ದೆ. ನೋಡಿ ತುಂಬಾ ಸಂತೋಷವಾಯ್ತು. ಪ್ರತಿಯೊಬ್ಬ ಕೊಡಗಿನ ಗೌಡರಿಗೆ ಅವರವರ ಐನ್‌ಮನೆಗೆ ಬಂದು ಅಲ್ಲಿ ಅವರ ಹಿರಿಯರಿಗೆ ಕಾರಣಕ್ಕೆ ಕೊಡುವ ಸ್ಥಳದಲ್ಲಿ ಸಿಗುವ ಸಂತೋಷ, ಈ ದಿವಸ ನಮ್ಮ ಕುಲ ಬಾಂಧವರಿಗೊಂದು ಇಂತಹದ್ದೇ ಸ್ಥಳದಲ್ಲಿ ಸಂತೋಷವನ್ನುಂಟು ಮಾಡಿರುತ್ತದೆ.

*- ಹೊಸೂರು ಜಿ. ಸೀತಾರಾಮ, ಮೈಸೂರು, **9448600381***

- ಅಕಾಡೆಮಿ ಕಛೇರಿಗೆ ಭೇಟಿ ನೀಡಿರುವುದು ನನಗೆ ಸಂತೋಷವಾಗಿರುತ್ತದೆ. ಕಛೇರಿ ಉತ್ತಮ ವ್ಯವಸ್ಥೆ ಹೊಂದಿದ್ದು ಸೌಹಾರ್ದ ಭೇಟಿ ಆಗಿರುತ್ತದೆ.


*- ಬಾಲಚಂದ್ರ ಕಳಗಿ, ಅಧ್ಯಕ್ಷರು, ಸಂಪಾಜೆ ಗ್ರಾಮ ಪಂಚಾಯಿತಿ*

- ಕಛೇರಿ ತುಂಬಾ ಪೊರ್ಲಾಗುಟ್ಟ್. ನಮ್ಮ ಭಾಷೆ ಉಳಿಯಲಿ, ಸಂಸ್ಕೃತಿ ಬೆಳ್ಸುವ, ಉಳ್ಸುವ ಕೆಲ್ಸದ ನಡುಲಿ ಜಾತಿ ಸಾಮರಸ್ಯ ಕಾಪಾಡುವ ಕಾಳಜಿ ಇರ್ಲಿ. ನಾವ್ ಯಾರಿಗೇನು ಕಮ್ಮಿ ಇಲ್ಲೆ. ಉಳ್ಳದ್ರುಂದ ಹೆಚ್ಚಿಗೆ ಅಂತ ತಕರಾರ್ ತಗೋಕೂಂತಲೂ ಇಲ್ಲೆ. ಸಾಹಿತ್ಯಕ್ಕೆ ಹೆಚ್ಚ್ ಒತ್ತ್ ಕೊಡಿ.

*- ಕುಡೆಕಲ್ಲು ವಿದ್ಯಾಧರ ಗೌಡ, ವಕೀಲರು, ಮಡಿಕೇರಿ*

* * * *

# ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿ : ಸುರುನ ಪದಾದಿಕಾರಿಗ



ಎನ್.ಎಸ್. ದೇವಿಪ್ರಸಾದ್
ಅಧ್ಯಕ್ಷರು, ಸಂಪಾಜೆ



ಪದ್ಮನಾಭ ಕೋಲ್ಚಾರ್
ಸದಸ್ಯರು, ಬೆಂಗಳೂರು



ಕುಂಞಟಿ ಶಿವರಾಮ ಗೌಡ
ಸದಸ್ಯರು, ಸುಳ್ಯ



ಲೋಕಯ್ಯ ಗೌಡ
ಸದಸ್ಯರು, ಮಂಗಳೂರು



ಬೈತಡ್ಕ ಜಾನಕಿ ಬೆಳ್ಯಪ್ಪ
ಸದಸ್ಯರು, ಮಡಿಕೇರಿ



ಚೆರಿಯಮನೆ ಚಂದ್ರಶೇಖರ್
ಸದಸ್ಯರು, ಆಲೂರು ಸಿದ್ದಾಪುರ



ತುಂತಜೆ ವೆಂಕಟೇಶ್
ಸದಸ್ಯರು, ಬಿಳಿಗೇರಿ



ತಳೂರು ಕಿಶೋರ್ ಕುಮಾರ್
ಸದಸ್ಯರು, ಅರ್ವತೊಕ್ಲು



ಇಡ್ಯಡ್ಕ ಮೋಹನ್ ಗೌಡ
ಸದಸ್ಯರು, ಬೆಂಗಳೂರು



ಅಮೆ ಪಾಲಾಕ್ಷ
ಸಹ ಸದಸ್ಯರು, ಮಡಿಕೇರಿ



ತೇನನ ರಾಜೇಶ್
ಸಹ ಸದಸ್ಯರು, ಬೆಂಗಳೂರು



ಸಹ ಸದಸ್ಯರು, ಮೂರ್ನಾಡು



ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ
ಜಂಟಿ ನಿರ್ದೇಶಕರು (ಆಡಳಿತ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು



ಶ್ರೀಮತಿ ಎನ್. ಶಾಂತಮ್ಮ
ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ
ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ

ಶ್ರೀಮತಿ ಇಂದಿರಾ ಹೆಚ್.ವಿ.
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಡಿಕೇರಿ





ಮುಖ್ಯಮಂತ್ರಿ ಭೇಟಿ : ಶ್ರೀಮಾನ್ ದೇವರಗುಂಡ ಸದಾನಂದ ಗೌಡನವು ಮುಖ್ಯಮಂತ್ರಿ ಆಗಿದ್ದಾಗ
ಅಕಾಡೆಮಿ ಅಧ್ಯಕ್ಷರ್ ಮತ್ತೆ ಸದಸ್ಯರ್‌ಗ ಮುಖ್ಯಮಂತ್ರಿಗಳೊಟ್ಟಿಗೆ ಅಕಾಡೆಮಿ ಕೆಲ್ಸ ಕಾರ್ಯದ ಬಗ್ಗೆ ಚರ್ಚೆ ಮಾಡ್ದೊ.



ಸ್ಪೀಕರ್ ಭೇಟಿ : ಅಕಾಡೆಮಿ ಅಧ್ಯಕ್ಷರ್ ಮತ್ತೆ ಸದಸ್ಯರ್‌ಗ ವಿಧಾನ ಸಭಾಧ್ಯಕ್ಷ ಕೊಂಬಾರನ ಬೋಪಯ್ಯ
ಅವರ್ನ ವಿಧಾನ ಸೌಧ ಕಛೇರಿಲಿ ಭೇಟಿ ಮಾಡಿ ಚರ್ಚೆ ಮಾಡ್ದ ಸಂದರ್ಭ.



ಸಮ್ಮಾನ : ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವ್ ಅಕಾಡೆಮಿ ಅಧ್ಯಕ್ಷರ್ ಮತ್ತೆ ಸದಸ್ಯರ್‌ಗಳ ಸಮ್ಮಾನ ಮಾಡ್ದೊ.